ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 2 ಜನವರಿ 4 - 10, 1999 ರೂ. 2.00

ಆರು ಜನಗಳ ಬಲಿತೆಗೆದುಕೊಂಡ ಕೋಮುವಾದಿಗಳ ಅಟ್ಟಹಾಸ

ರಾಜ್ಯದಲ್ಲಿ ಶಾಂತಿ-ಸೌಹಾರ್ದ ರಕ್ಷಿಸಲು ಸಿಪಿಐ(ಎಂ) ಮನವಿ

ರಾಜ್ಯದಲ್ಲಿಯೂ ಕೋಮುಶಕ್ತಿಗಳ ಅಟ್ಟಹಾಸ ವ್ಯಾಪಕವಾಗುವ ಕೆಟ್ಟ ಲಕ್ಷಣಗಳು ಕಾಣಬರುತ್ತಿವೆ. ಬಾಬಾ ಬುಡನ್ ಗಿರಿ, ದತ್ತಪೀಠ ವಿವಾದ, ಕೊಡಗಿನ ಸಿದ್ದಾಪುರ ತಾಲೂಕಿನಲ್ಲಿ ಮುಸ್ಲಿಂ ಮನೆಗಳ ಮೇಲೆ ಆಕ್ರಮಣ, ದ.ಕ. ಜಿಲ್ಲೆಯಲ್ಲಿ ಪ್ರಾರ್ಥನಾ ಮಂದಿರದ ಮೇಲೆ ಹಲ್ಲೆ, ಧಾರವಾಡ, ಬೆಂಗಳೂರು, ಮಂಗಳೂರು ಮೊದಲಾದ ಕಡೆ ಕ್ರಿಶ್ಚಿಯನ್ ಸಂಸ್ಥೆಗಳ ಮೇಲೆ ಕ್ಷುಲ್ಲಕ ಕಾರಣಗಳಿಗಾಗಿ ಹಲ್ಲೆ ಇತ್ಯಾದಿ ಘಟನೆಗಳ ಬೆನ್ನಲ್ಲೆ 1998 ಕೊನೆಗೊಳ್ಳುವ ವೇಳೆಗೆ ಸುರತ್ಕಲ್‌ನಲ್ಲಿ ಸಣ್ಣ ಕಾರಣವನ್ನು ಮುಂದು ಮಾಡಿ ಮತೀಯ ಘರ್ಷಣೆಗಳನ್ನು ಕೋಮುವಾದಿಗಳು ಹುಟ್ಟು ಹಾಕಿದ್ದಾರೆ. 1999 ರ ವರ್ಷದ ಮೊದಲ ದಿನವೇ ಬೆಂಗಳೂರಿನಿಂದ ಬಂದ ಸಚಿವರ ತಂಡ ಶಾಂತಿ ಸಮಲೋಚನಾ ಸಭೆ ನಡೆಸುತ್ತಿದ್ದಂತೆಯೇ ಈ ಗಲಭೆಗಳು ಮಂಗಳೂರಿಗೂ ಹರಡಿ ಮೂರೇ ದಿನಗಳಲ್ಲಿ ಆರು ಮಂದಿಯ ಪ್ರಾಣ ಹರಣ ಮಾಡಿ ಇಡೀ ರಾಜ್ಯದ ಪ್ರಜಾಪ್ರಭುತ್ವವಾದಿ ಜನ ತಲ್ಲಣಗೊಳ್ಳುವಂತಾಗಿದೆ. ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಈ ಕೋಮುವಾದಿ ಶಕ್ತಿಗಳ ಮೇಲೆ ಅತ್ಯುಗ್ರ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಸರಕಾರವನ್ನು ಆಗ್ರಹಿಸಿದೆ ಹಾಗೂ ಕೋಮುವಾದಿಗಳ ತಂತ್ರಗಳನ್ನು ಅರಿತು ರಾಜ್ಯದಲ್ಲಿ ಶಾಂತಿ -ಸೌಹಾರ್ದತೆ ಕಾಪಾಡಬೇಕು ಎಂದು ಜನತೆಗೆ ಮನವಿ ಮಾಡಿದೆ.

ರಾಜ್ಯ ವಿವಿಧ ಭಾಗಗಳಲ್ಲಿ ಹಿಂದೂ ಜಾಗರಣ ಸಮಿತಿ, ಭಜರಂಗದಳದ ಕಾರ್ಯಕರ್ತರು ಗಲಭೆಗಳನ್ನು ಹುಟ್ಟು ಹಾಕುತ್ತಿರುವುದು ರಾಜ್ಯದ ವಿವಿಧ ಭಾಗಗಳಿಂದ ಬರುವ ಸುದ್ದಿಗಳಿಂದ ಸ್ಪಷ್ಟವಾಗುತ್ತಿದೆ. ಇತ್ತೀಚೆಗೆ ಉತ್ತರದ ಮೂರು ರಾಜ್ಯಗಳ ಚುನಾವಣೆಗಳಲ್ಲಿ ಮುಖಭಂಗ ಅನುಭವಿಸಿದ ಬಿಜೆಪಿ ಹಾಗೂ ಅದರ ಸಂಘಪರಿವಾರ ರಾಜ್ಯದ ವಿಧಾನಸಭಾ ಚುನಾವಣೆಗಳಲ್ಲಿ ಯಶಸ್ಸು ಪಡೆಯಲು ಇದೊಂದೇ ದಾರಿ ಎಂದು ಭಾವಿಸಿದಂತಿದೆ. 9 ತಿಂಗಳ ಹಿಂದೆ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಬಿಜೆಪಿಯ 'ಮುಚ್ಚಿಟ್ಟ ಅಜೆಂಡಾ'ದ ಭಾಗವಾಗಿ ಈ ಕುಕೃತ್ಯಗಳು ಪೂರ್ವಯೋಜಿತ ರೀತಿಯಲ್ಲಿ ನಡೆಯುತ್ತಿವೆ.

ಗುಜರಾತಿನಲ್ಲಿ ಇಂತಹ ಕೋಮುವಾದಿ ಧಾಳಿಗಳು ನಡೆಯುತ್ತಿದ್ದಾಗ ಅಂತದ್ದೇನು ನಡೆಯುತ್ತಿಲ್ಲ ಎಂದು ಸಾರಿದ ಕೇಂದ್ರ ಗೃಹಮಂತ್ರಿಗಳ ಕೈಕೆಳಗಿರುವ ಇಲಾಖೆಯ ಅಧಿಕಾರಿಗಳ ತಂಡವೇ ಈಗ ಅಲ್ಲಿ ಕೋಮುವಾದಿ ಧಾಳಿಗಳ ಬಗ್ಗೆ ಆತಂಕ ವ್ಯಕ್ತಪಡಿಸಿದೆ, ಹಿಂದೂ ಜಾಗರಣಾ ಮಂಚ್‌ನ ಪಾತ್ರವನ್ನು ಅದರ ಆ ಆತಂಕ ಬಯಲುಪಡಿಸಿದೆ. ಅದರಿಂದ ಬೇರೆ ಉಪಾಯವಿಲ್ಲದೆ ಕೇಂದ್ರ ಗೃಹಮಂತ್ರಿಗಳು ಉಗ್ರಕ್ರಮದ ಮಾತಾಡಿದ್ದಾರೆ. ಇದು ಸಂಘಪರಿವಾರದ 'ಮುಚ್ಚಿಟ್ಟ ಅಜೆಂಡಾ' ಜಾರಿಗೊಳ್ಳುತ್ತಿರುವ ರೀತಿ.

ಇದು ಈಗ ದೇಶದ ಎಲ್ಲೆಡೆಯಂತೆ ಕರ್ನಾಟಕದಲ್ಲೂ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಬಿಜೆಪಿ ಬೆಂಬಲಿಗರ ಅರಿವಿಗೂ ಬರುತ್ತಿದೆ. ಆದ್ದರಿಂದ ರಾಜ್ಯ ಸರಕಾರ ಯಾವುದೇ ರೀತಿಯ ಸಡಿಲ ನೀತಿ ಅನುಸರಿಸದೆ ನಿಷ್ಠುರ ಉಗ್ರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಎಲ್ಲಾ ಕೋಮುವಾದಿಗಳ ಬಣ್ಣವನ್ನು ಬಯಲು ಮಾಡಬೇಕು, ಶಾಂತಿ ಹಾಗೂ ಸೌಹಾರ್ದತೆಯನ್ನು ಕಾಪಾಡಬೇಕು ಎಂದು ಎಲ್ಲಾ ವಿಭಾಗಗಳ ಜನರಲ್ಲಿ ಮನವಿ ಮಾಡಿದೆ.

ಕೋಮುದ್ವೇಷ ಹರಡುತ್ತಿರುವ ವಿಹೆಚ್‌ಪಿ ಮುಖಂಡರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು

ರಾಷ್ಟ್ರಪತಿಗಳಿಗೆ ಸಿಪಿಐ(ಎಂ) ಮನವಿ

ಸಿಪಿಐ(ಎಂ) ಮತ್ತು ಸಿಪಿಐ ನ ಮುಖಂಡರ ಒಂದು ನಿಯೋಗ ಡಿಸೆಂಬರ್ 31 ರಂದು ರಾಷ್ಟ್ರಪತಿಗಳಿಗೆ ಸಲ್ಲಿಸಿದ ಒಂದು ಮನವಿಯಲ್ಲಿ ಗುಜರಾತಿನಲ್ಲಿ ಕ್ರಿಶ್ಚಿಯನ್ನರ ಮೇಲೆ ಧಾಳಿಗಳು ಮುಂದುವರಿಯುತ್ತಿರುವ ಬಗ್ಗೆ ಈ ಎರಡು ಪಕ್ಷಗಳು ತಮ್ಮ ತೀವ್ರ ಅಂತಕವನ್ನು ವ್ಯಕ್ತಪಡಿಸಿವೆ. 1998 ರಲ್ಲಿ ನವೆಂಬರ್‌ವರೆಗೆ ಗುಜರಾತ್ ಒಂದರಲ್ಲೇ ಚರ್ಚ್‌ಗಳು, ಕಾಲೇಜು, ಪಾದ್ರಿಗಳು ಹಾಗೂ ಕ್ರಿಶ್ಚಿಯನ್ ಜನಗಳ ಮೇಲೆ ಹಲ್ಲೆಗಳ 40 ಘಟನೆಗಳು ನಡೆದಿವೆ ಎಂದು ನೆನಪಿಸಿರುವ ಈ ಮನವಿ ಪತ್ರ ವಿಶೇಷವಾಗಿ ಕ್ರಿಸ್‌ಮಸ್ ದಿನದ ನಂತರ ದಾಂಗ್ಸ್ ಮತ್ತು ಸೂರತ್ ಜಿಲ್ಲೆಗಳಲ್ಲಿ ಭುಗಿಲೆದ್ದಿರುವ ಧಾಳಿಗಳಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ ಎಂದಿದೆ.

ಈ ಬೆದರಿಕೆ ಮತ್ತು ಭಯೋತ್ಪಾದನೆಯ ಪ್ರಚಾರ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸುತ್ತಿರುವ ವಿಶ್ವ ಹಿಂದಪರಿಷತ್ ಮತ್ತಿತರ ಆರ್‌ಎಸ್‌ಎಸ್ ಗೆ ಸಂಬಂಧಪಟ್ಟ ಸಂಘಟನೆಳಿಗೆ ಗುಜರಾತ್ ರಾಜ್ಯ ಸರಕಾರ ನೆರವು ಮತ್ತು ಪ್ರೋತ್ಸಾಹ ನೀಡುತ್ತಿದೆ ಎಂದೂ ಈ ಮನವಿ ಪತ್ರ ಆಪಾದಿಸಿದೆ. ತಮ್ಮ ಧರ್ಮವನ್ನು ಅನುಸರಿಸುವ, ತಮ್ಮ ಶಿಕ್ಷಣ ಸಂಸ್ಥೆಗಳನ್ನು ಹಾಗೂ ಸಾಮಾಜಿಕ ಸಂಸ್ಥೆಗಳನ್ನು ನಡೆಸುವ ಕ್ರಿಶ್ಚಿಯನ್ನರ ಹಕ್ಕನ್ನು ರಕ್ಷಿಸಲು ಈ ಒಂದು ವರ್ಷ ಕ್ಕಿಂತಲೂ ಹೆಚ್ಚು ಅವಧಿಯಲ್ಲಿ ಯಾವುದೇ ಪರಿಣಾಮಕಾರಿ ಕ್ರಮವನ್ನು ಕೈಗೊಂಡಿಲ್ಲ. ರಾಜ್ಯ ಸರಕಾರ ಸಂವಿಧಾನ ವಿಧಿಸಿದ ಕರ್ತವ್ಯಗಳ ಲೋಪ ಮಾಡಿದೆ ಎಂದೂ ಸಿಪಿಐ(ಎಂ) ಮತ್ತು ಸಿಪಿಐನ ಮನವಿ ಪತ್ರ ನೆನಪಿಸಿದೆ.

ಇಷ್ಟೊಂದು ದೀರ್ಘಕಾಲದಿಂದ ನಡೆಯುತ್ತಿರುವ ಈ ಧಾಳಿಗಳನ್ನು ಗೃಹ ಮಂತ್ರಾಲಯ ಮತ್ತು ಕೇಂದ್ರ ಸರ್ಕಾರ ನಿರ್ಲಕ್ಷಿಸಿದೆ ಎಂದೂ ತೀವ್ರವಾಗಿ ಆಪಾದಿಸಿರುವ ಈ ಎರಡು ಎಡ ಪಕ್ಷಗಳು ವಿಹೆಚ್‌ಪಿ ಮುಖಂಡರು ಮತ್ತೆ-ಮತ್ತೆ ಕ್ರಿಶ್ಚಿಯನ್ ಕೋಮನ್ನು ಹೀಗೆಳೆಯುವ, ಅದರ ವಿರುದ್ಧ ಇತರರನ್ನು ಬಡಿದೆಬ್ಬಿಸುವ ಹೇಳಿಕೆಗಳನ್ನು ಕೊಡುತ್ತಿದ್ದರೂ ಅವರ ವಿರುದ್ಧ ಕಾನೂನಿನ ಪ್ರಕಾರ ಕ್ರಮಕೈಗೊಳ್ಳಲು ಏನೂ ಮಾಡಲಿಲ್ಲ ಎಂದು ದೂಷಿಸಿವೆ.

ಈ ಪರಿಸ್ಥಿತಿಯನ್ನು ಹೀಗೇ ಮುಂದುವರೆಯಲು ಬಿಟ್ಟರೆ ಇದು ಸಂವಿಧಾನದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಧರ್ಮನಿರಪೇಕ್ಷ ನೀತಿಗಳಿಗೆ ಒಂದು ನೇರ ಸವಾಲಾಗುತ್ತದೆ ಎಂದು ಎಚ್ಚರಿಸಿ ರುವ ಸಿಪಿಐ(ಎಂ) ಹಾಗೂ ಸಿಪಿಐನ ಮನವಿ ಪತ್ರ ಗುಜರಾತಿನಲ್ಲಿ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ರಕ್ಷಣೆ ಹಾಗೂ ಭದ್ರತೆಗೆ ಸಕಲ ಕ್ರಮಗಳನ್ನೂ ಕೂಡಲೇ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ರಾಷ್ಟ್ರಪತಿ ಗಳಿಗೆ ಮನವಿ ಮಾಡಿದೆ. ಕ್ರಿಶ್ಚಿಯನ್ನರ ವಿರುದ್ಧ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುವ, ಹಿಂಸಾಚಾರ ನಡೆಯುವುದಕ್ಕೆ ಹೊಣೆಗಾರರಾದ ಎಲ್ಲರನ್ನೂ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು, ಕೋಮು ದ್ವೇಷವನ್ನು ಉದ್ರೇಕಿಸು ತ್ತಿರುವ ವಿಶ್ವ ಹಿಂದು ಪರಿಷತ್‌ನ ರಾಷ್ಟ್ರೀಯ ಮುಖಂಡರ ಮೇಲೆ ಕಾನೂನುಕ್ರಮ ಕೈಗೊಳ್ಳಬೇಕು ಎಂದೂ ಸಿಪಿಐ(ಎಂ) ಹಾಗೂ ಸಿಪಿಐ ನಿಯೋಗ ಆಗ್ರಹಪಡಿಸಿತು.

ಎ.ಬಿ.ಬರ್ದನ್, ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ ಹಾಗೂ ಶಮೀಮ್ ಫೈಜಿ ಈ ನಿಯೋಗದಲ್ಲಿದ್ದರು.

ಪುಟ 8 ನೋಡಿ

ದೃಢ ಒಗ್ಗಟ್ಟು ಪ್ರದರ್ಶಿಸಿದ ರಾಜ್ಯ ಸರಕಾರಿ ನೌಕರರು

ಕಳೆದ ಒಂದು ವಾರ ಕರ್ನಾಟಕದ ಆರು ಲಕ್ಷ ರಾಜ್ಯ ಸರಕಾರಿ ನೌಕರರು ಪ್ರದರ್ಶಿಸಿದ ದೃಢ ಒಗ್ಗಟ್ಟು ರಾಜ್ಯದ ಪ್ರಜಾಪ್ರಭುತ್ವ ಆಂದೋಲನಕ್ಕೆ ಸಂತಸ ತಂದಿರುವ ವಿಷಯ.

ಕೇಂದ್ರ ಸರಕಾರ ಐದನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿ ಮಾಡುವಾಗ ಅಧಿಕಾರಿಗಳ ಸಮಿತಿ ಸಲ್ಲಿಸಿದ್ದ ನೌಕರರಿಗೆ ಪ್ರತಿಕೂಲವಾದ ವರದಿಯನ್ನು ಅವಲಂಬಿಸಿತು. ಆಗ ಸಿಪಿಐ(ಎಂ) ಮತ್ತು ಎಡಪಕ್ಷಗಳು ಆಗಿನ ಸಂಯುಕ್ತ ರಂಗ ಸರಕಾರದ ಮೇಲೆ ಒತ್ತಡ ಹಾಕಿದ್ದರಿಂದಾಗಿ ನೌಕರರ ಪರವಾಗಿ ಶಿಫಾರಸುಗಳು ಜಾರಿಯಾಗುವಂತಾಯಿತು.

ಸಹಜವಾಗಿಯೇ ಈ ಶಿಫಾರಸುಗಳಿಗೆ ಅನುಗುಣವಾಗಿ ರಾಜ್ಯ ಸರಕಾರಿ ನೌಕರರಿಗೂ ವೇತನ ಪರಿಷ್ಕರಣೆಯಾಗಬೇಕೆಂಬ ಒತ್ತಾಯ ಬಂತು. ಸುಮಾರಾಗಿ ಇತರ ಎಲ್ಲಾ ರಾಜ್ಯಗಳಲ್ಲಿ ಐದನೇ ವೇತನ ಆಯೋಗದ ಶಿಫಾರಸುಗಳ ಮಾದರಿಯಲ್ಲಿ ಪರಿಷ್ಕರಣೆಯಾದರೂ ಕರ್ನಾಟಕದಲ್ಲಿ ಇದನ್ನು ಅನುಷ್ಠಾನಗೊಳಿಸಲು ರಾಜ್ಯ ಸರಕಾರಿ ನೌಕರರು ಹೋರಾಟಕ್ಕಿಳಿಯಬೇಕಾಯಿತು. ಜನವರಿ 1998 ರಲ್ಲಿ ಅನಿರ್ದಿಷ್ಟ ಮುಷ್ಕರದ ಪರಿಣಾಮವಾಗಿ ಸರಕಾರ 20% ದಷ್ಟು ಮಧ್ಯಂತರ ಪರಿಹಾರ ನೀಡಿ ಐದನೇ ವೇತನ ಆಯೋಗದ ಶಿಫಾರಸುಗಳ ಜಾರಿಯ ವಿಧಿವಿಧಾನಗಳ ಬಗ್ಗೆ ಒಂದು ಅಧಿಕಾರಿಗಳ ಸಮಿತಿ ರಚಿಸಿತು. ಆರು ತಿಂಗಳೊಳಗೆ ವರದಿ ಸಲ್ಲಿಸುವಂತೆ ಸಮಿತಿಗೆ ಹೇಳಲಾಯಿತು.

ಆದರೆ ಒಂದು ವರ್ಷವಾಗುತ್ತಾ ಬಂದರೂ ಸಮಿತಿಯ ವರದಿ ಬರದಿದ್ದಾಗ ರಾಜ್ಯ ಸರಕಾರಿ ನೌಕರರ ನಡುವೆ ಅಸಂತುಷ್ಟಿ ವ್ಯಾಪಕವಾಯಿತು. ಈ ಹಿನ್ನೆಲೆಯಲ್ಲಿ ಡಿಸೆಂಬರ್ 21 ರಿಂದ ಮತ್ತೆ ಅನಿರ್ದಿಷ್ಟ ಮುಷ್ಕರವನ್ನು ಸರಕಾರಿ ನೌಕರರು ಆರಂಭಿಸಿದರು. ಮುಷ್ಕರವನ್ನು ಸರ್ಕಾರ ಕಾನೂನುಬಾಹಿರ ಎಂದರೂ, ಎಸ್ಮಾ ಬಳಸುವ ಬೆದರಿಕೆ ಹಾಕಿದರೂ ಮುಷ್ಕರ ರಾಜ್ಯಾದ್ಯಂತ ಸಂಪೂರ್ಣ ಯಶಸ್ವಿಯಾಯಿತು.

ಎರಡು ದಿನಗಳ ನಂತರ ಕೇಂದ್ರ ಸರ್ಕಾರದ ನೌಕರರ ಮೂಲವೇತನಕ್ಕೆ ಸಮಾನವಾದ ಮೂಲವೇತನ ನೀಡುವ ಭರವಸೆ ಮುಖ್ಯಮಂತ್ರಿಗಳಿಂದ ಬಂದದ್ದರಿಂದ ನೌಕರರು ಮುಷ್ಕರ ನಿಲ್ಲಿಸಿ ಕೆಲಸಕ್ಕೆ ಹಾಜರಾದರು. ಆದರೆ ಸರಕಾರ ತನ್ನ ವಚನ ಈಡೇರಿಸಲಿಲ್ಲ. ಕೇವಲ 5% ರಷ್ಟು ಹೆಚ್ಚಿನ ಫಿಟ್‌ಮೆಂಟ್ ನೀಡಿ ಕೈತೊಳೆದುಕೊಳ್ಳಲು ಪ್ರಯತ್ನಿಸಿದ್ದನ್ನು ಕಂಡು ತಮ್ಮ ಮುಖಂಡರನ್ನು ಬಂಧಿಸಿದ್ದನ್ನು ಬಲವಾಗಿ ಪ್ರತಿಭಟಿಸಿ ಸಿಟ್ಟಿಗೆದ್ದ ನೌಕರರು ಮತ್ತೆ ಅನಿರ್ದಿಷ್ಟ ಮುಷ್ಕರ ನಡೆಸಿದರು. ಈ ಬಾರಿ ಮುಷ್ಕರ ಇನ್ನಷ್ಟು ಯಶಸ್ವಿಯಾಯಿತು. ರಾಜ್ಯ ಸರಕಾರಿ ನೌಕರರ ದೃಢ ಒಗ್ಗಟ್ಟು ಹಾಗೂ ಅಪಾರ ಕೋಪ ಸರ್ಕಾರದ ಅಸಡ್ಡೆತನಕ್ಕೆ ದೊಡ್ಡ ಸವಾಲಾಯಿತು. ಇದರಿಂದ ಕೆಲವು ಸಾವು-ನೋವುಗಳೂ ಸಂಭವಿಸಿರುವುದು ದುರದೃಷ್ಟಕರ. ಇದಕ್ಕೆ ಸರಕಾರದ ನಿರ್ಲಕ್ಷ್ಯ ಮನೋಭಾವವೇ ಹೊಣೆ ಎಂದರೆ ತಪ್ಪಾಗಲಾರದು. ಕೊನೆಗೂ ಸರಕಾರ 25% ಏರಿಕೆಯೊಂದಿಗೆ, ಫಿಟ್‌ಮೆಂಟ್‌ಗಾಗಿ ಇನ್ನೂ 150 ಕೋಟಿ ರೂ. ಕೊಡಲು ಒಪ್ಪಿತು. ಒಂದು ವಾರದ ನಂತರ ಸರಕಾರಿ ನೌಕರರು ಡಿಸೆಂಬರ್ 28 ರಿಂದ ಮತ್ತೆ ಕೆಲಸಕ್ಕೆ ಹಾಜರಾದರು.

ಈ ಒಂದು ವಾರದಲ್ಲಿ ಲಕ್ಷಾಂತರ ಸರಕಾರಿ ನೌಕರರು ತೋರ್ಪಡಿಸಿದ ದೃಢತೆ, ಒಗ್ಗಟ್ಟು ನಿಜಕ್ಕೂ ಅಭಿನಂದನಾರ್ಹ. ರಾಜ್ಯದ ಪ್ರಜಾಪ್ರಭುತ್ವ ಹಾಗೂ ಕಾರ್ಮಿಕ ಆಂದೋಲನದಲ್ಲಿ ಈ ವಿಭಾಗದ ನೌಕರರು ಇದೇ ದೃಢತೆ ಹಾಗೂ ಒಗ್ಗಟ್ಟಿನಿಂದ ಭಾಗವಹಿಸಿ ಈ ಆಂದೋಲನವನ್ನು ಬಲಪಡಿಸುತ್ತಾರೆ ಎಂಬುದು ರಾಜ್ಯದ ಎಲ್ಲಾ ಪ್ರಜಾಪ್ರಭುತ್ವವಾದಿಗಳ ನಿರೀಕ್ಷೆ ಹಾಗೂ ಡಿ. 11 ರ ಮುಷ್ಕರಕ್ಕೆ ಸರ್ಕಾರಿ ನೌಕರರು ಇತರ ರಾಜ್ಯಗಳಲ್ಲಿ ಬೆಂಬಲಿಸಿದಂತೆ ಮುಂದೆ ರಾಜ್ಯ ಸರ್ಕಾರಿ ನೌಕರರು ರಾಜ್ಯದ ದುಡಿಯುವ ಜನತೆಯ ಜೊತೆ ಸೇರಿ ಇತರೆ ಕಾರ್ಮಿಕ ಚಳುವಳಿಯನ್ನು ಬಲಪಡಿಸುತ್ತಾರೆಂದು ಆಶಿಸೋಣವೇ?

ಉದ್ಯಮಿಗಳ ಹಿತಕ್ಕಾಗಿಯೇ ಸರಕಾರವೇ?


ಸಚಿವ ಅನಂತ್‌ಕುಮಾರ್‌ಗೆ ಸಿಪಿಐ(ಎಂ) ಪ್ರಶ್ನೆ

ರಾಜ್ಯ ಸರಕಾರವನ್ನು ಬದಲಾಯಿಸಿ ಎಂದು ಉದ್ಯಮಿಗಳ ಮುಂದೆ ಗೋಗೆರೆದಿರುವ ಕೇಂದ್ರ ಸಚಿವ ಅನಂತಕುಮಾರ್ ರವರ ಹೇಳಿಕೆಯನ್ನು ಖಂಡಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ, ಉದ್ಯಮಿಗಳ ಹಿತಗಳಿಗಾಗಿಯೇ ಸರ್ಕಾರ ಇರಬೇಕೆ ಎಂದು ಪ್ರಶ್ನಿಸಿದೆ. ಅನಂತ ಕುಮಾರ್ ಈ ಹೇಳಿಕೆಯ ಮೂಲಕ ಕೇಂದ್ರದಲ್ಲಿರುವುದು ಉದ್ದಿಮೆಗಳ ಪರ ಸರ್ಕಾರ ಎಂಬುದನ್ನು ದೃಢೀಕರಿಸಿದ್ದಾರೆ ಎಂದಿದೆ.

ಜನತೆಯಿಂದ ಚುನಾಯಿತರಾಗಿರುವ ರಾಜ್ಯ ಸರ್ಕಾರದ ವಿರುದ್ಧ ಈ ರೀತಿ ಕರೆ ನೀಡಿ ಅನೈತಿಕ ಕ್ರಮಗಳಿಗೆ ಬೆಂಬಲಿಸಿರುವ ಸಚಿವರು ಕೇಂದ್ರ ರಾಜ್ಯಗಳ ನಡುವಿನ ಫೆಡರಲ್ ವ್ಯವಸ್ಥೆಯ ಸ್ವರೂಪದ ಸಂಬಂಧದ ಮೇಲೆ ಧಾಳಿ ನಡೆಸಿದ್ದಾರೆ.

ರಾಜ್ಯದ ವಿವಿಧ ಕಡೆಗಳಲ್ಲಿ ಬರೀ ಪತ್ರಿಕಾಗೋಷ್ಠಿ ಮತ್ತು ಭಾಷಣಗಳನ್ನಷ್ಟೇ ಮಾಡಿರುವುದನ್ನೇ 'ಮಹಾಸಾಧನೆ'ಯೆಂದು ಭಾವಿಸಿರುವ ಸಚಿವ ಅನಂತಕುಮಾರ್ ರಾಜ್ಯದ ಅಭಿವೃದ್ಧಿಗೆ ಅವರ ಕೊಡುಗೆ ದೊಡ್ಡ ಸೊನ್ನೆ ಎಂದು ಸಿಪಿಐ(ಎಂ) ಟೀಕಿಸಿದೆ. ದಿವಾಳಿಕೋರ ಉದಾರೀಕರಣದ ಆರ್ಥಿಕ ನೀತಿ, ಕೋಮುದ್ವೇಷದ ರಾಜಕೀಯದಲ್ಲಿ ಮುಳುಗೇಳುತ್ತಿರುವ ಕೇಂದ್ರ ಸರ್ಕಾರ ದೇಶದ ಅಭಿವೃದ್ಧಿಗೆ ಮಾರಕವಾಗಿದೆ. ಕೃಷಿ-ಕೈಗಾರಿಕೆಗಳ ಅಭಿವೃದ್ಧಿ ಬೆಳವಣಿಗೆ ಸ್ಥಗಿತವಾಗಿ ಹಿನ್ನಡೆ ಯನ್ನು ಅನುಭವಿಸುತ್ತಿದೆ. ಈ ಹುಳುಕು ಮುಚ್ಚಿಕೊಳ್ಳಲು ಬಿಜೆಪಿ ಸಚಿವರು ಯತ್ನಿಸುತ್ತಿದ್ದಾರೆ ಎಂದು ಅದು ಹೇಳಿದೆ.

ಕ್ರಿಶ್ಚಿಯನ್ನರ ವಿರುದ್ಧ ಹೆಚ್ಚುತ್ತಿರುವ ಧಾಳಿಯನ್ನು ಪ್ರತಿಭಟಿಸಿ ನವದೆಹಲಿಯಲ್ಲಿ ಸಹಮತ್ ನೇತೃತ್ವದಲ್ಲಿ ಕಲಾವಿದರ ಧರಣಿ ಕಾರ್ಯಕ್ರಮ ಡಿ. 11 ರಂದು ನಡೆಯಿತು.




ಮುಂದುವರಿಯಲಿರುವ ಕರಾಳ ದಿನಗಳು

ಆರ್ಥಿಕ ಬಿಕ್ಕಟ್ಟಿನ ಕರಾಳ ದಿನಗಳು ಮುಂದಿನ ವರ್ಷಕ್ಕೂ ಮುಂದುವರಿಯಲಿವೆ. ಇದನ್ನು ಕೇಂದ್ರದ ಬಿಜೆಪಿ ಸರ್ಕಾರದ ಹಣಕಾಸು ಮಂತ್ರಿ ಮಹಾಶಯ ಯಶವಂತ ಸಿನ್ಹಾ ಅವರೇ ಸಂಸತ್ತಿನಲ್ಲಿ ಒಪ್ಪಿಕೊಂಡಿದ್ದಾರೆ. ಅವರ ಪ್ರಕಾರ ಮುಂದಿನ ಸಾಲು ಅಂದರೆ 1999 ರಲ್ಲಿ ಆರ್ಥಿಕ ಸ್ವಲ್ಪ ಸುಧಾರಿಸಲಿದೆ ಅದರ ಮುಂದಿನ ಸಾಲು ಅಂದರೆ 2000ದಲ್ಲಿ ಪರಿಸ್ಥಿತಿ ಇನ್ನೂ ಉತ್ತಮಗೊಳ್ಳುತ್ತದಂತೆ.

ಏರುತ್ತಿರುವ ಹಣಕಾಸು ಕೊರತೆ ಔದ್ಯಮಿಕ ಹಿಂಜರಿತದ ಮುಂದುವರಿಕೆ ಅತಿಯಾದ ಹಣದುಬ್ಬರ ಮತ್ತು ಸುಂಕಗಳ ಸಂಗ್ರಹದಲ್ಲಿ ಇಳಿಮುಖಗಳಂತಹ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿರುವ ದೇಶ ಇದೇ ಬಿಕ್ಕಟ್ಟಿನ ಸ್ಥಿತಿಯಲ್ಲಿ ಮುಂದುವರಿಯಲಿದೆ ಎಂಬುದು ಈಗ ನಿಶ್ಚಿತ ಯಾಕೆಂದರೆ ಈ ಪರಿಸ್ಥಿತಿ ಬದಲಾಗುವ ಲಕ್ಷಣಗಳೇ ಕಾಣುತ್ತಿಲ್ಲ.

ಈರುಳ್ಳಿ ಆಲೂಗಡ್ಡೆಗಳಿಂದಲೇ ನಮ್ಮನ್ನು ಅಳೆಯ ಬೇಡಿ ಎಂದು ಶ್ರೀ ಯಶವಂತ ಸಿನ್ಹಾ ಅವರು ಕೇಳಿಕೊಂಡಿದ್ದಾರೆ. ಆದರೆ ಈರುಳ್ಳಿ ಮತ್ತು ಆಲೂಗಡ್ಡೆಗಳು ಪ್ರಾತಿನಿಧಿಕ ಮಾತ್ರ ಎಂಬುದು ಈಗ ಸ್ಪಷ್ಟವಾಗಿರುವ ಸತ್ಯ. ತಜ್ಞರ ಪ್ರಕಾರ ಪರಿಸ್ಥಿತಿ ಆತಂಕಕಾರಿಯಾಗಿದೆ. ಇದಕ್ಕೆ ಮುಖ್ಯ ಕಾರಣ ಸರ್ಕಾರದ ದುರ್ಬಲ ನೀತಿಗಳೇ ಎಂಬುದೂ ತಜ್ಞರ ಅಭಿಪ್ರಾಯ. ಇಲ್ಲಿ ದುರ್ಬಲ ನೀತಿಗಳ ಪ್ರಶ್ನೆಯಿಲ್ಲ. ಯಾಕೆಂದರೆ ಬಿಜೆಪಿ ಸರ್ಕಾರ ಬಂಡವಾಳಿಗ ವರ್ಗದ ಹಿತಾಸಕ್ತಿಗೆ ಸರಿಯಾಗಿ ಕೆಲಸ ಮಾಡುತ್ತಿದೆ ಎಂಬುದು ಸ್ಪಷ್ಟ. ದೇಶದ ದುಡಿವ ಜನರ ಹಿತಾಸಕ್ತಿಗಳನ್ನು ಜನಸಾಮಾನ್ಯರ ಹಿತಾಸಕ್ತಿಗಳನ್ನು ಪೂರ್ತಿಯಾಗಿ ಕಡೆಗಣಿಸಿ ವ್ಯಾಪಾರಸ್ಥರ ಬಂಡವಾಳಿಗರ ಹಿತಾಸಕ್ತಿಗಳನ್ನು ಮಾತ್ರ ಕಾಯುತ್ತಿರುವ ಸರ್ಕಾರ ಎಂಬುದು ಎಲ್ಲರಿಗೂ ಗುತ್ತಾಗಿ ಹೋಗಿದೆ.



ಇಂತಹ ಸರ್ಕಾರ ಆರ್ಥಿಕವನ್ನು ಪುನಃ ಶ್ಚೇತನಗೊಳಿಸುವ ಮಾತಂತೂ ಒತ್ತಟ್ಟಿಗಿರಲಿ ಪರಿಸ್ಥಿತಿ ಇನ್ನೂ ಹದಗೆಡದಂತೆ ತಡೆಯುವ ಕನಿಷ್ಟ ಕೆಲಸವೂ ಅದರಿಂದ ಸಾಧ್ಯವಾಗದು. ಜಾಗತಿಕ ಆರ್ಥಿಕ ಹಿಂಜರಿತ ಮುಂದುವರಿಯುತ್ತಿರುವುದರಿಂದ ಬೆಲೆ ಏರಿಕೆ ನಮ್ಮ ದೇಶೀ ಆರ್ಥಿಕದ ಮುಖ್ಯ ಲಕ್ಷಣವಾಗಿ ಮುಂದುವರೆದಿರುವುದರಿಂದ ಹಾಗೂ ಏಶಿಯಾದ ಹಲವು ನಾಣ್ಯಗಳ ಬೆಲೆ ಕುಸಿತ ಮುಂದು ವರಿದು ರಫ್ತಿಗೆ ಅವಕಾಶ ತೀರ ಕಡಿಮೆ ಗೊಳಿಸಿರುವುದರಿಂದ ಆರ್ಥಿಕದಲ್ಲಿ ಯಾವುದೇ ತರಹದ ಸುಧಾರಣೆಗೆ ಸದ್ಯಕ್ಕಂತೂ ಆಸ್ಪದವೇ ಇದ್ದಂತೆ ಕಾಣಿಸುವುದಿಲ್ಲ.

ಕೇಂದ್ರದಲ್ಲಿನ ಸರ್ಕಾರದ ಬದಲಾವಣೆ ಪರಿಸ್ಥಿತಿಯನ್ನು ಸುಧಾರಿಸಬಹುದು.

ಸಂಪೂರ್ಣ ಮಾರಾಟ ಹಕ್ಕು ಟ್ರಿಪ್ಸ್‌ಗಿಂತ ಕೆಟ್ಟದ್ದು

ಪೇಟೆಂಟ್ ಕಾಯಿದೆಗೆ ತಿದ್ದುಪಡಿ ತಂದು ಮೇಲ್ಮನೆಯಲ್ಲಿ ಪಾಸು ಮಾಡಿಸಿಕೊಂಡಿದೆ ಬಿಜೆಪಿ ಸರ್ಕಾರ. ಮುಂದೆ ಸರ್ಕಾರ ರಚಿಸುವ ಆಸೆಯಿರಿಸಿಕೊಂಡಿರುವ ಕಾಂಗ್ರೆಸ್ ಈ ಮಸೂದೆ ಪಾಸಾಗಲು ಅಣಿವು ಮಾಡಿಕೊಟ್ಟಿದೆ. ಎಡ ಪಕ್ಷಗಳು ಜನತಾದಳ ಮತ್ತು ಸಮಾಜವಾದಿ ಪಕ್ಷಗಳು ಮಾತ್ರ ಈ ಮಸೂದೆಯನ್ನು ವಿರೋಧಿಸಿದಂತಿವೆ.

ಪೇಟೆಂಟ್ ಕಾಯಿದೆ ತಿದ್ದುಪಡಿಯ ಪ್ರಕಾರ ಪೂರ್ಣ ಮಾರಾಟದ ಹಕ್ಕನ್ನು ಕಂಪನಿಗಳಿಗೆ ನೀಡುವ ಅವಕಾಶವಿದೆ. ಈ ಅವಕಾಶ ಗ್ಯಾಟ್ ಒಪ್ಪಂದದ ಟ್ರಿಪ್ಸ್ ಅಂದರೆ ಟ್ರೇಡ್ ರಿಲೇಟಿಡ್ ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್ ಅಥವಾ ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳ ಒಪ್ಪಂದಕ್ಕಿಂತ ಹೆಚ್ಚು ಅಪಾಯಕಾರಿಯಾದದ್ದು ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಪೀಪಲ್ಸ್ ಕಮಿಷನ್ ಆನ್ ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್ ಎಂಭಾ ತಜ್ಞರ ವೇದಿಕೆಯ ಸದ್ಯ ಹಾಗೂ ಭಾರತೀಯ ಕೃಷಿ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ|| ಎಸ್.ಕೆ. ಸಿನ್ಹಾ ಅವರ ಪ್ರಕಾರ ಸಂಪೂರ್ಣ ಹಕ್ಕು ಅಥವಾ ಇ.ಎಮ್.ಆರ್.ನ ಅವಕಾಶಗಳು ಟ್ರಿಪ್ಸಿಗಿಂತ ಹೆಚ್ಚು ಹಾನಿಕಾರಕ.

ಟ್ರಿಪ್ಸ್‌ನ ಪ್ರಕಾರ ಉತ್ಪನ್ನ ಪೇಟೆಂಟ್ ಹೊಂದಿರುವ ಮತ್ತು ಟ್ರಿಪ್ಸ್‌ಗೆ ಸಹಿಮಾಡಿರುವ ಇತರ ದೇಶಗಳಲ್ಲಿ ಮಾರಾಟ ಹಕ್ಕಿರುವ ಕಂಪನಿ ಟ್ರಿಪ್ಸ್‌ಗೆ ಸಹಿ ಮಾಡದ (ಮುಂದೆ ಮಾಡುವ) ದೇಶಗಳಲ್ಲಿ ಪೂರ್ಣ ಮಾರಾಟದ ಹಕ್ಕು ಹೊಂದಿರುತ್ತದೆ.

ಟ್ರಿಪ್ಸ್ ಪೇಟೆಂಟ್ ಅರ್ಜಿಯ ಪರೀಕ್ಷೆ ಮತ್ತು ವಿರೋಧಕ್ಕೆ ಅವಕಾಶ ನೀಡುತ್ತದೆ. ಆದರೆ ಇಎಂಆರ್ ತಂತಾನೆ ಮಾರಾಟದ ಹಕ್ಕುಗಳನ್ನು ನೀಡಿಬಿಡುತ್ತದೆ.

ಇ.ಎಂ.ಆರ್ ಗೆ ಯಾವುದೇ ಸವಾಲು ಒಡ್ಡುವ ಸಾಧ್ಯತೆಗಳೇ ಇಲ್ಲದಿರುವುದರಿಂದ ನಮ್ಮ ಅರಿಶಿಣ, ಬೇವುಗಳಿಗೆ ಪೇಟೆಂಟ್ ಪಡೆದ ಕಂಪನಿಗಳಿಗೆ ತಂತಾನೆ ಪೂರ್ಣ ಮಾರಾಟ ಹಕ್ಕು ದೊರೆತುಬಿಡುವ ಸಾಧ್ಯತೆಯಿದೆ.

ಉತ್ಪನ್ನ ಪೇಟೆಂಟ್ ಪದ್ಧತಿ ಹೇಗಿದೆ ಯೆಂದರೆ ದೇಶೀ ಔಷದಿ ಯಾ ಕೃಷಿ ರಸಾಯನಿಕ ಉದ್ಯಮಗಳು ವಿದೇಶೀ ಕಂಪನಿಗಳ ಮಾರಾಟದ ಹಕ್ಕುಗಳನ್ನು ಪ್ರಶ್ನಿಸಬಹುದು. ಆದರೆ ಇ.ಎಂ.ಆರ್ ಇರುವ ಕಂಪನಿಯ ಹಕ್ಕನ್ನು ಯಾರೂ ಪ್ರಶ್ನಿಸುವಂತೇ ಇಲ್ಲ.

ಇಎಂಆರ್‌ನ ಇನ್ನೊಂದು ಅಪಾಯಕಾರಿ ಲಕ್ಷಣವೆಂದರೆ ಇಎಂಆರ್ ಹೊಂದಿರುವ ವಿದೇಶಿ ಕಂಪನಿಗಳು ದೇಶದೊಳಗೇ ಉತ್ಪಾದಿಸಬೇಕೆಂಬ ನಿರ್ಭಂದವನ್ನು ಹೇರುವಂತಿಲ್ಲ. ಹೀಗೆ ಇಎಂಆರ್ ಇರುವ ಕಂಪನಿಗಳಿಗೆ ಏಕಸ್ವಾಮ್ಯಾ ದೊರೆತು ಆ ಉತ್ಪನ್ನಕ್ಕಾಗಿ ಎಲ್ಲರೂ ಈ ಕಂಪನಿಯ ಮೇಲೆ ಅವಲಂಬಿತವಾಗಿರುವ ಪರಿಸ್ಥಿತಿ ಉಂಟಾಗುತ್ತದೆ.

ಪೇಟೆಂಟ್ ಮಸೂದೆಗೆ ತಂದಿರುವ ತಿದ್ದುಪಡಿಯನ್ನು ಪೀಪಲ್ಸ್ ಕಮಿಷನ್ ತೀವ್ರವಾಗಿ ವಿರೋಧಿಸಿದೆ. ಈ ಕಮಿಷನ್‌ನ ಇತರ ಸದಸ್ಯರೆಂದರೆ ಸುಪ್ರೀಮ್ ಕೋರ್ಟ್‌ನ ಮಾಜಿ ನ್ಯಾಯಾಧೀಶರಾದ ಎ.ಆರ್. ಕೃಷ್ಣಯ್ಯರ್ ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ನ ಮಾಜಿ ಅಧ್ಯಕ್ಷ ಪ್ರೊಫೆಸರ್ ಯಶಪಾಲ ಮತ್ತು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ|| ಪ್ರಭಾತ್ ಪಟ್ನಾಯಿಕ್.

ಜಪಾನಿನಲ್ಲಿ ದಾಖಲೆ ನಿರುದ್ಯೋಗ

ಮಾರುಕಟ್ಟೆ ಆರ್ಥಿಕ ಸ್ವರ್ಗವನ್ನೇ ತರುತ್ತದೆ ಎಂದು ಮಾರುಕಟ್ಟೆ ವಾದಿಗಳು ಹೇಳುತ್ತಾರೆ. ಆದರೆ ಅಭಿವೃದ್ಧಿ ಹೊಂದಿದ ದೇಶವಾದ ಜಪಾನಿನಲ್ಲೇ ಮಾರುಕಟ್ಟೆ ವಾದ ಎಂತ ಪರಿಸ್ಥಿತಿ ತಂದಿವೆ ಎಂಬುದನ್ನು ಗಮನಿಸಿದರೆ ಮಾರುಕಟ್ಟೆ ಆರ್ಥಿಕದ ವೈಫಲ್ಯದ ಅಗಾಧತೆ ಗೊತ್ತಾಗುತ್ತದೆ.

ಜಪಾನಿನ ಸರ್ಕಾರದ ಪ್ರಕಾರ ನವೆಂಬರ್‌ನಲ್ಲಿ ಜಪಾನಿನ ನಿರುದ್ಯೋಗದ ಪ್ರಮಾಣ ಶೇ. 4.4 ಕ್ಕೆ ಏರಿ ಕಳೆದ 46 ವರ್ಷಗಳಲ್ಲಿ ದಾಖಲೆ ಪ್ರಮಾಣವನ್ನು ಮುಟ್ಟಿದೆಯಂತೆ ಅಮೇರಿಕದಲ್ಲಿ ಈ ಪ್ರಮಾಣ ಶೇ. 4.4 ರಷ್ಟೇ ಇದೆಯಂತೆ ಆದರೆ ಅಮೇರಿಕದಲ್ಲಿ ಇದು ಶೇ. 4.6 ರಷ್ಟಿದ್ದದ್ದು ಶೇ. 4.4ಕ್ಕೆ ಇಳಿದಿದೆ. ಜಪಾನಿನ ಕಾರ್ಮಿಕ ಮಂತ್ರಿಯ ಪ್ರಕಾರ ಕಾರ್ಮಿಕ ಮಾರುಕಟ್ಟೆ ಪರಿಸ್ಥಿತಿ ತೀವ್ರ ಹದಗೆಡುತ್ತಲಿದೆಯಂತೆ.

ಜಪಾನಿನಲ್ಲಿ ಜೀವಾವಧಿ ಉದ್ಯೋಗ ನೀಡುವ ಪದ್ಧತಿಯಿದೆ. ಆದರೆ ಒಂದು ಕಂಪನಿ ಸೇರಿದ ವ್ಯಕ್ತಿ ಆ ಕಂಪನಿಯಲ್ಲೇ ನಿವೃತ್ತಿ ಹೊಂದುತ್ತಾನೆ ಈ ಪದ್ಧತಿಗೇ ಕುತ್ತು ಬರಬಹುದೆಂಬ ಶಂಕೆ ಮೂಡಿದೆ.

ಜೈ ಮಾರುಕಟ್ಟೆ ಆರ್ಥಿಕ ಏನ್ನೊಣವೇ?

ಸಮಾಧಾನಕ್ಕೆ ಈಗ ಒಳ್ಳೆಯ ಪ್ರತಿಕ್ರಿಯೆ

ವಿಡಿಐಎಸ್ ಎಂಬ ತೆರಿಗೆ ಸಮುದಾಯ ಯೋಜನೆಗೆ ಹಿಂದೆ ಒಳ್ಳೆಯ ಪ್ರತಿಕ್ರಿಯೆ ದೊರೆತು ಹತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಸಂಗ್ರಹವಾದದ್ದು ನೆನಪಿದೆಯಲ್ಲವೆ? ಈಗ ಬಿಜೆಪಿಯ ಸಮಾಧಾನ ವೆಂಬ ಕರ ವಿವಾದ ಸಮಾಧಾನ ಯೋಜನೆಗೂ ಉತ್ತಮ ಪ್ರತಿಕ್ರಿಯೆ ದೊರೆತು ಸುಮಾರು 2000-2500 ಕೋಟಿ ರೂಪಾಯಿಗಳು ಸಂಗ್ರಹ ಆಗಲಿದೆಯಂತೆ

ತೆರಿಗೆ ವಿವಾದ ಪ್ರಕರಣಗಳಲ್ಲಿನ ತೆರಿಗೆ ದಾರರಿಗೆ ಸಮಾಧಾನ ನೀಡುವ ಈ ಯೋಜನೆ 4000 ಅರ್ಜಿದಾರರನ್ನು ಕಾಣಲಿದೆಯಂತೆ ಅಂದರೆ ಅಷ್ಟೊಂದು ಜನ ತೆರಿಗೆ ತಪ್ಪಿದ ಪ್ರಕರಣಗಳಿದ್ದರೂ ಅದನ್ನು ವಿರೋಧಿಸಿಕೊಂಡು ಬಂದಿದ್ದರು ಎಂದರ್ಥ. ಈಗ ಅವರೆಲ್ಲರಿಗೂ ಕ್ಷಮಾದಾನ ನೀಡುವ ಸಮಾಧಾನವನ್ನು ಬಿಜೆಪಿ ಸರ್ಕಾರ ತಂದಿದೆ.

ತೆರಿಗೆ ತಪ್ಪಿಸುವವರಿಗೆ ಒಳ್ಳೆಯ ಪ್ರೋತ್ಸಾಹ ಮತ್ತು ಅವರಿಂದ ಒಳ್ಳೆಯ ಪ್ರತಿಕ್ರಿಯೆ ಅಲ್ಲವೆ?

ಉದಾರೀಕರಣ ತಂದ ಭಯೋತ್ಪಾದನೆ

ಉದಾರೀಕರಣ ಹೆಸರಿನಲ್ಲಿ ಶ್ರೀಮಂತರನ್ನು ಇನ್ನು ಹೆಚ್ಚು ಶ್ರೀಮಂತಗೊಳಿಸಿ ಆ ಮೂಲಕ ಬಹುತೇಕರ ಬಡತನ ಹೆಚ್ಚಿಸಿದರೆ ನಿರುದ್ಯೋಗ ತಾಂಡವವಾಡುತ್ತಿರುವ ದೇಶದಲ್ಲಿ ಎಂತಹ ಪರಿಸ್ಥಿತಿ ಉಂಟಾಗುತ್ತದೆ ಎಂಬುದು ತೀರ ಕುತೂಹಲಕಾರಿಯಾದದ್ದು.

ಮುಂಬಯಿಯಲ್ಲಿ ಶ್ರೀಮಂತ ರೊಬ್ಬರು ಮಿಟ್ಸುಬಿಷಿ ಲ್ಯಾನ್ಸರ್ ಕಾರು ಕೊಂಡರಂತೆ. ಅವರಿಗೆ ಭಯೋತ್ಪಾದಕರಿಂದ ಕರೆ ಬಂದಿತಂತೆ. ಆ ಕಾರಿನ ಬೆಲೆಯ ಶೇ. 10 ರಷ್ಟನ್ನು ನಮಗೆ ಕೊಡಿ ನಿಮಗೆ ಮಾನಸಿಕ ಶಾಂತಿ ಸಿಗುತ್ತದೆ ಎಂದು. ಅಂದರೆ ಮಾನಸಿಕ ದೈಹಿಕ ಶಾಂತಿಗಾಗಿ ಅವರು ಆ ಹಣ ತೆರಬೇಕು ಇದೊಂದು ಉದಾಹರಣೆ.

ಚಿನ್ನದ ಆಮದನ್ನು ಉದಾರೀಕರಿಸಿ ಚಿನ್ನ ಸ್ಮಗ್ಲರ್ ಮಾಡುತ್ತಿದ್ದವರ ಹೊಟ್ಟೆಯ ಮೇಲೆ ಸರ್ಕಾರ ಹೊಡೆಯಿತು. ಇವರನ್ನು ರಕ್ಷಿಸಬೇಕೆಂದಲ್ಲ. ಆದರೆ ಇವರು ಹೊಟ್ಟೆಪಾಡಿಗಾಗಿ ದುಡಿವವರು. ಸರ್ಕಾರ ಬದಲಿ ಉದ್ಯೋಗ ನೀಡುವ ಸ್ಥಿತಿಯಲ್ಲಿದೆಯಂತೆ? ಇಲ್ಲ. ಆದ್ದರಿಂದಲೇ ಉದಾರೀಕರಣ ಅಪರಾಧಗಳನ್ನು ಹೆಚ್ಚಿಸಿದೆ ಉದಾರೀಕರಣವನ್ನು ಅಪರಾಧೀಕರಣ ಎಂದು ಪುನರ್ನಾಮಕರಣ ಮಾಡೋಣವೇ?

ನಾವಿಕ ಪಡೆಯ ಮುಖ್ಯಸ್ಥರ ವಜಾ ಶಂಕೆ ಮೂಡಿಸುವ ಅನಗತ್ಯ ಕ್ರಮ

ಭಾರತೀಯ ನಾವಿಕ ಸೇನಾ ಪಡೆಯ ಸೇನಾಧಿಕಾರಿ ಅಡ್ಮಿರಲ್ ವಿಷ್ಣು ಭಾಗವತ್‌ರವರನ್ನು ವಜಾ ಮಾಡಿರುವ ಕ್ರಮ ಗಂಭೀರ ಶಂಕೆಗಳನ್ನು ಉಂಟು ಮಾಡಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಮೊತ್ತಮೊದಲ ಬಾರಿಗೆ ಕಾರ್ಯನಿರತ ಸೇನಾಧಿಪತಿಯೊಬ್ಬರನ್ನು ಸೇವೆಯಿಂದ ವಜಾ ಮಾಡಿರುವುದು ಒಂದು ಅತ್ಯಂತ ಗಂಭೀರ ಸಂಗತಿ. ವಾಜಪೇಯಿ ಸರಕಾರದ ಉದ್ದೇಶಗಳ ಬಗ್ಗೆ ಸಂದೇಹ ಮೂಡಿಸುವ ಅನಗತ್ಯ ಕ್ರಮ ಇದು ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ. ನಾವಿಕಪಡೆಯ ಉಪಸೇನಾಧಿಪತಿಯನ್ನು ನೇಮಿಸುವ ಬಗ್ಗೆ ವಿವಾದವನ್ನು ಸರಕಾರದ ರಾಜಕೀಯ ಮುಖಂಡತ್ವ ಸೂಕ್ತ ಮುತುವರ್ಜಿ ವಹಿಸಿದ್ದರೆ ಪರಿಹರಿಸಬಹುದಿತ್ತು. ಈಗಾಗಲೇ ಸೇನೆಯಲ್ಲಿ ನೇಮಕಗಳು ದುರದೃಷ್ಟವಶಾತ್ ನ್ಯಾಯಾಲಯಗಳಲ್ಲಿ ಖಟ್ಲೆಯ ವಿಷಯಗಳಾಗಿ ಬಿಟ್ಟಿದೆ ಎಂದಿರುವ ಪೊಲಿಟ್‌ಬ್ಯೂರೋ ಇತ್ತೀಚೆಗೆ ದಿಲ್ಲಿ ಹೈಕೋರ್ಟ್ ಸಂಪುಟದ ನೇಮಕ ಸಮಿತಿ ಮಾಡಿರುವ ಸೇವಾ ನೇಮಕವೊಂದನ್ನು ರದ್ದು ಮಾಡಿರುವ ಸಂಗತಿಯತ್ತ ಗಮನ ಸೆಳೆದಿದೆ.

ಸೇನಾಪಡೆಗಳ ಮೇಲೆ ನಾಗರಿಕ-ರಾಜಕೀಯ ಅಧಿಕಾರವಿದೆ ಎಂಬುದರಲ್ಲಿ ಸಂದೇಹವೇ ಇಲ್ಲವಾದರೂ ಸೇನಾ ಮುಖ್ಯಸ್ಥರ ಪಾತ್ರ ಮತ್ತು ಸೇನಾಧಿಕಾರದ ವ್ಯವಸ್ಥೆಯ ಸಮಗ್ರತೆಯಲ್ಲಿ ಮೂಗು ತೂರಿಸದಿರುವುದೂ ಮುಖ್ಯ. ಸೇನಾಪಡೆಗಳು ರಾಜಕೀಯ ವಲಯದಿಂದ ದೂರವಿದ್ದು, ತಟಸ್ಥ ನಿಲುವು ತಳೆದ ಉತ್ತಮ ದಾಖಲೆ ಹೊಂದಿವೆ. ಈ ಸಮತೋಲನವನ್ನು ಅಸ್ತವ್ಯಸ್ತಗೊಳಿಸಲು ಏನೂ ಮಾಡಬಾರದು ಎಂದು ಸಿಪಿಐ(ಎಂ) ಹೇಳಿದೆ. ಅಡ್ಮಿರಲ್ ಭಾಗವತ್‌ರ ಪ್ರತಿಷ್ಠೆಗೆ ಮಸಿ ಬಳಿಯಲು ಕೋಮುವಾದಿ ಅಪಾದನೆಗಳನ್ನು ಹಾಕಿರುವುದು ಅತ್ಯಂತ ಖಂಡನೀಯ. ಸರಕಾರ ಈ ಪ್ರಯತ್ನಗಳಿಗೆ ಬಲವಾಗಿ ಪ್ರತ್ಯುತ್ತರ ನೀಡಬೇಕಾಗಿತ್ತು. ಆದರೆ ಹಾಗೆ ಮಾಡುವಲ್ಲಿ ಅದು ವಿಫಲವಾಗಿದೆ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ. ಹಿಂದಿನ ಹಲವು ಸೇನಾಧಿಪತಿಗಳು ಈ ತೀವ್ರ ಕ್ರಮದ ದುಷ್ಪರಿಣಾಮಗಳ ಬಗ್ಗೆ ಹೇಳಿದ್ದಾರೆ. ಇಂತಹ ಪರಿಸ್ಥಿತಿಗೆ ವಾಜಪೇಯಿ ಸರಕಾರವನ್ನೇ ಹೊಣೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಎಂ.ಪಿ. ಕೃಪಾಪೋಷಿತ 2 ಕೋಟಿ ರೂ. ಯೋಜನೆ - ಅನಗತ್ಯ ನಿರ್ಣಯ

ಸಂಸತ್ ಸದಸ್ಯರಿಗೆ ಕೊಡುವ ಕ್ಷೇತ್ರ ನಿಧಿಯನ್ನು ದ್ವಿಗುಣಗೊಳಿಸಿ 2 ಕೋಟಿ ರೂ.ಗಳಾಗಿ ಮಾಡುವ ವಾಜಪೇಯಿ ಸರಕಾರದ ನಿರ್ಣಯ ಅನಗತ್ಯವಾಗಿತ್ತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ವಿಧಿಗಳನ್ನು ರಾಜ್ಯ ಸರಕಾರಗಳಿಂದ ಹಿಡಿದು ಪಂಚಾಯತುಗಳವರೆಗೆ ಒಂದು ವಿಕೇಂದ್ರೀಕೃತ ಯೋಜನಾ ಪ್ರಕ್ರಿಯೆಯ ಮೂಲಕ ಬಳಸುವುದಕ್ಕೆ ತದ್ವಿರುದ್ಧವಾಗಿರುವ ಒಂದು ಯೋಜನೆಯನ್ನು ಈ ನಿರ್ಣಯ ಶಾಶ್ವತಗೊಳಿಸಿದೆ. ಸಂಬಂಧಪಟ್ಟ ಮಂತ್ರಿಗಳು ಇದು ಜನಗಳ ಹೊಸವರ್ಷದ ಉಡುಗೊರೆ ಎಂದು ವರ್ಣಿಸಿರುವುದು ದುರದೃಷ್ಟಕರ ಎಂದಿರುವ ಸಿಪಿಐ(ಎಂ) ಸಂಸತ್ ಸದಸ್ಯರು ತಮ್ಮ ಕ್ಷೇತ್ರದಲ್ಲಿನ ಯೋಜನೆಗಳಿಗೆ ಪ್ರತಿವರ್ಷ 2 ಕೋಟಿ ರೂ. ಕೊಡಿಸುವುದನ್ನು ಕೃಪಾಪೋಷಿತ ವಿತರಣೆಯೆಂದೇ ನೋಡಬೇಕಾಗುತ್ತದೆ ಎಂದು ಹೇಳಿದೆ.

ಮಕ್ಕಳನ್ನು ಬಲಿತೆಗೆದುಕೊಳ್ಳುತ್ತಿರುವ ಶಕ್ತಿಮಾನ್ ಧಾರವಾಹಿ ರದ್ದು ಪಡಿಸಲು ಯುವಜನ ಫೆಡರೇಶನ್ ಆಗ್ರಹ

ಮಕ್ಕಳನ್ನು ಬಲಿ ತೆಗೆದುಕೊಳ್ಳುತ್ತಿರುವ ದೂರದರ್ಶನದ ಶಕ್ತಿಮಾನ್ ಹಿಂದಿ ಧಾರವಾಹಿಯ ಪ್ರಸಾರವನ್ನು ತತ್‌ಕ್ಷಣ ಕೂಡಲೇ ರದ್ದುಪಡಿಸಬೇಕೆಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದೆ. ಇಂತಹ ಅಜ್ಞಾನ, ಅಂಧಶ್ರದ್ಧೆ ಬಿತ್ತುವ ಜೈಹನುಮಾನ್, ಓಂನಮಶಿವಾಯದಂತಹ ಎಲ್ಲಾ ಧಾರವಾಹಿಗಳನ್ನು ಕೂಡಲೇ ನಿಷೇಧಿಸಲು ಡಿ.ವೈ.ಎಫ್.ಐ. ಒತ್ತಾಯಿಸಿದೆ.

ಅತ್ಯಂತ ಅವೈಜ್ಞಾನಿಕ ಹಾಗೂ ಅತಿರೇಕದ ಭ್ರಮಾಧೀನತೆಯನ್ನು ಹುಟ್ಟು ಹಾಕುತ್ತಿರುವ ಈ ಧಾರವಾಹಿ ಎಳೆಯರ ಮನಸ್ಸಿನ ಮೇಲೆ ಅಳಿಸಲಾಗದ ಘಾಸಿ ಮಾಡುತ್ತಿದೆ. ಇಷ್ಟೆಲ್ಲಾ ದುರಂತಗಳು ನಡೆಯುತ್ತಿದ್ದಾಗ್ಯೂ ಕೇಂದ್ರದ ಪ್ರಸಾರ ಖಾತೆಯವರು ಕಣ್ಣುಮುಚ್ಚಿ ಕುಳಿತಿರುವುದು ಖಂಡನೀಯವೆಂದು ಡಿ.ವೈ.ಎಫ್.ಐ. ಟೀಕಿಸಿದೆ.

ದೇಶೀಯ ಸಾಂಸತಿಯ ಬಗ್ಗೆ ಸದಾ ಬೊಬ್ಬೆ ಹೊಡೆಯುವ ಕೇಂದ್ರದ ಬಿಜೆಪಿಯ ಸರ್ಕಾರ ಕೊಳೆತು ನಾರುತ್ತಿರುವ ವಿದೇಶಿ ಸಂಸತಿಯನ್ನೇ ಅನುಸರಿಸುತ್ತಿರುವುದು ನಾಚಿಕೆಗೇಡಿನ, ದಿವಾಳಿತನದ ಸಂಗತಿಯಾಗಿದೆ ಎಂದು ಯುವಜನ ಫೆಡರೇಷನ್ ಆಕ್ರೋಶ ವ್ಯಕ್ತಪಡಿಸಿದೆ.

ಪ್ರಬಲ ಪೈಪೋಟಿ ನಡುವೆ ಸಿಐಟಿಯುಗೆ ಗೆಲುವು

ಕರೂರಿನ ರಾಮ್ಕೋ ಇಂಡಸ್ಟ್ರೀಸ್ ವರ್ಕ್‌ರ್ಸ್ ಯೂನಿಯನ್ನಿನ ಗೌರವ ಸದಸ್ಯರ ಸ್ಥಾನಗಳಿಗೆ ಇಂದು ನಡೆದ ಚುನಾವಣೆಯಲ್ಲಿ ಪ್ರಬಲ ಪೈಪೋಟಿ ನಡುವೆ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷ ನಿತ್ಯಾನಂದ ಸ್ವಾಮಿ ಮತ್ತು ದಾವಣಗೆರೆ ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎ.ಎಸ್. ಮೂರ್ತಿಯವರು ಎಐಟಿಯುಸಿಯ ವಿ.ಕೆ. ಆನಂದ ತೀರ್ಥ, ಹೆಚ್.ಕೆ. ರಾಮಚಂದ್ರಪ್ಪ ಮತ್ತು ಎಂ.ಎನ್. ಶ್ರೀನಿವಾಸ್‌ಗೌಡ ರನ್ನು ಪರಾಭವಗೊಳಿಸಿ ವಿಜಯಶಾಲಿಗಳಾಗಿದ್ದಾರೆಂದು ಎ.ಎಸ್. ಮೂರ್ತಿಯವರು ತಿಳಿಸಿದ್ದಾರೆ.

ಬಿಹಾರ ಒಡೆಯುವ ಮಸೂದೆ ಸಿಪಿಐ(ಎಂ) ವಿರೋಧ

ಒಂದು ಪ್ರತ್ಯೇಕ ವನಾಂಚಲ ರಾಜ್ಯವನ್ನು ನಿರ್ಮಿಸುವ ಮಸೂದೆಯನ್ನು ಲೋಕಸಭೆಯಲ್ಲಿ ತಂದ ರೀತಿಯನ್ನು ಬಲವಾಗಿ ವಿರೋಧಿಸುವುದಾಗಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಭಾರತ ಸಂಘದಲ್ಲಿನ ಒಂದು ರಾಜ್ಯವನ್ನು ವಿಭಜಿಸು ವುದು ಒಂದು ಗಂಬೀರ ವಿಷಯ. ಈ ಮಸೂದೆಯನ್ನು ಪ್ರಜಾಪ್ರಭುತ್ವ ವಿರೋಧಿ ವಿಧಾನದಲ್ಲಿ ತರಾತುರಿಯಿಂದ ತರುವ ಮೂಲಕ ಬಿಜೆಪಿ ನೇತೃತ್ವದ ಸರಕಾರ ಒಕ್ಕೂಟ ತತ್ವದ ಬಗ್ಗೆ ತನ್ನ ತಿರಸ್ಕಾರವನ್ನು ತೋರಿಸಿದೆ. ಬಿಹಾರ ವಿಧಾನಸಭೆ ಬಿಹಾರದ ವಿಭಜನೆಯ ಪ್ರಸ್ತಾವವನ್ನು ತಿರಸ್ಕರಿಸಿದೆ ಎಂದು ನೆನಪಿಸಿರುವ ಸಿಪಿಐ (ಎಂ) ಪೊಲಿಟ್ ಬ್ಯೂರೋ ಬಿಜೆಪಿ ನೇತೃತ್ವದ ಸರಕಾರ ಒಂದು ಪ್ರಧಾನ ಸಂವಿಧಾನ ತಿದ್ದುಪಡಿ ಮಸೂದೆಯನ್ನು ತನ್ನ ಸಂಕುಚಿತ ರಾಜಕೀಯ ಹಿತಾಸಕ್ತಿಗಳ ಈಡೇರಿಕೆಗಾಗಿ ಬಿಹಾರದ ಚುನಾಯಿತ ವಿಧಾನಸಭೆಯ ಆಶಯಗಳಿಗೆ ವಿರುದ್ಧ ಹೋಗುತ್ತಿರುವುದು ಆಘಾತಕಾರಿ ಎಂದಿದೆ. ರಾಜ್ಯಗಳ ಅಧಿಕಾರಿ ಗಳಿಗೆ ಒಂದು ಗಂಭೀರ ಬೆದರಿಕೆಯಾಗಿರುವ ಈ ಒಕ್ಕೂಟ ತತ್ವದ ಮೇಲಿನ ಧಾಳಿಯ ಜೊತೆಗೂಡಲು ಕೆಲವು ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳೂ ಸಿದ್ಧವಾಗಿರುವುದು ದುರದೃಷ್ಟಕರ ಎಂದಿರುವ ಸಿಪಿಐ(ಎಂ) ಬಿಹಾರದ ಜನತೆ ಹಾಗೂ ದೇಶದ ಪ್ರಜಾ ಪ್ರಭುತ್ವ ವಿಚಾರಗಳ ಜನ ಬಿಹಾರವನ್ನು ವಿಭಜಿಸುವ ಈ ಮಸೂದೆಯನ್ನು ಮಂಡಿಸಿ ರುವುದನ್ನು ಪ್ರತಿಭಟಿಸಬೇಕು ಎಂದು ಕರೆ ನೀಡಿದೆ.

ಕರ್ನಾಟಕದಲ್ಲಿ ಕಳೆದವಾರ

ಡಿಸೆಂಬರ್ 25

- ಸರ್ಕಾರ - ನೌಕರರ ಮಾತುಕತೆ ವಿಫಲ - ಮುಷ್ಕರ ಮುಂದುವರಿಕೆ
- ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಧರ್ಮಸಿಂಗ್ ಬದಲಾವಣೆಗೆ ಪಕ್ಷದಲ್ಲಿ ಒಂದು ಪಂಗಡ ವಿರೋಧ

ಡಿಸೆಂಬರ್ 26

- ಮೂಡಿದ ಒಪ್ಪಂದ - ನೌಕರರ ನಿರ್ಧಾರ ಇಂದು.
- ಮುಷ್ಕರಕ್ಕೆ 9 ರೋಗಿಗಳ ಬಲಿ, ಸರ್ಕಾರಿ ನೌಕರರಿಂದ ಕಲ್ಬುರ್ಗಿ ವಕೀಲರ ಕೋಟುಗಳಿಗೆ ಬೆಂಕಿ
- ತಂಬಾಕು ಬೆಲೆ ಕುಸಿತ ರಾಜ್ಯದ ಬೆಳಗಾರರು ಕಂಗಾಲು.

ಡಿಸೆಂಬರ್ 27

- ಸರ್ಕಾರಿ ನೌಕರರ ಮುಷ್ಕರ ಅಂತ್ಯ. ಖಜಾನೆ ನಷ್ಟದ ಭರ್ತಿ ನೌಕರರ ಹೊಣೆ - ಮುಖ್ಯಮಂತ್ರಿ.
- ರಾಜ್ಯದ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿ ಪಥದಲ್ಲಿ- ಉಪಮುಖ್ಯಮಂತ್ರಿ.
- ಅಂತರ್ರಾಷ್ಟ್ರೀಯ ಕೇಂದ್ರವಾಗಿ ಬಸವಕಲ್ಯಾಣ ಯೋಜನೆಗೆ - ಸಚಿವ ಅಟ್ಟೂರು

ಡಿಸೆಂಬರ್ 28

- ರಾಜ್ಯ ದಳ ನಾಯಕತ್ವ ಬದಲಾವಣೆಗೆ ಹಿರಿಯ ಸಚಿವರ ವಿರೋಧ
- ತುಂಗಭದ್ರಾ ಎಡದಂಡೆ ಕಾಲುವೆ ದುರಸ್ಥಿ ಪೂರ್ಣ, ನೀರು ಬಿಡುಗಡೆ
- ವಿದ್ಯುತ್-ತಮಿಳು ನಾಡು ಜೊತೆ ರಾಜ್ಯ ಶೀಘ್ರಒಪ್ಪಂದ.
- ರಾಮಚಂದ್ರ ಶರ್ಮರ 'ಸಪ್ತಪದಿ' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

ಡಿಸೆಂಬರ್ 29

- ರಾಜ್ಯ ಜನತಾದಳ ನಾಯಕರ ಜೊತೆ ಸಮಾಲೋಚನೆ ಮುಕ್ತಾಯ. ಬಿಕ್ಕಟ್ಟು ಪರಿಹಾರ ಶರದ್ ಯಾದವ್ ವಿಶ್ವಾಸ.
- ರಾಜ್ಯದ ಅಕ್ಕಿ ಲೆವಿ ಸಂಗ್ರಹಣೆ 50 ಸಹಸ್ರ ಪುಟ ಖೋತಾ
- ರೋಲ್‌ಕಾಲ್ ರೌಡಿಗಳ ಮೇಲೆ ವರ್ತಕರಿಂದ ಗುಂಡೇಟು

ಡಿಸೆಂಬರ್ 30

- ಸುರತ್ಕಲ್‌ನಲ್ಲಿ ಕೋಮು ಘರ್ಷಣೆ, ಬೆಂಕಿ, ಹಿಂಸಾಚಾರ, ಒಂದು ಸಾವು, ಕರ್ಫ್ಯೂ ಜಾರಿ
- ರಾಜ್ಯ ದಳದ ಬಿಕ್ಕಟ್ಟು ಮತ್ತಷ್ಟು ಕಗ್ಗಂಟು
- 'ಕಾರ್ಮಿಕ ಕಲ್ಯಾಣ' ನಿಧಿಗೆ ವಂತಿಗೆ ಪಾವತಿ ಕಡ್ಡಾಯ. ಕಾರ್ಮಿಕ ಕಲ್ಯಾಣ ಮಂಡಳಿ

ಡಿಸೆಂಬರ್ 31


- ಸುರತ್ಕಲ್ ಹಿಂಸಾಚಾರಕ್ಕೆ ಐವರ ಸಾವು. ಸ್ಥಳಕ್ಕೆ ಸಚಿವರ ತಂಡ
- 67ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಎಸ್.ಎಲ್.ಭೈರಪ್ಪ ಆಯ್ಕೆ.
- ಸಂಪುಟ ಪುನರ್ರಚನೆ, ಸದ್ಯ ನಿರ್ಧಾರ ಇಲ್ಲ -ಮುಖ್ಯಮಂತ್ರಿ ಪಟೇಲ್

ಕ್ರಿಯಾ ಪ್ರಕಾಶನ - ವಿಳಾಸ ಬದಲಾವಣೆ

ಕ್ರಿಯಾಪ್ರಕಾಶನವು ನಂ. 12, 18ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು -27 ಇಲ್ಲಿಗೆ ವರ್ಗಾವಾಗಿರುವುದರಿಂದ ಇನ್ನು ಮುಂದೆ ಯಾವುದೇ ರೀತಿಯ ಪತ್ರವ್ಯವಹಾರ, ಇನ್ನಿತರ ವ್ಯವಹಾರಗಳನ್ನು ಹಿಂದಿನ ವಿಳಾಸವಾದ ನಂ.9, ಶೋಭಾಲಾಡ್ಜ್ ಕಾಂಪ್ಲೆಕ್ಸ್, ಗಾಂಧಿನಗರ ವಿಳಾಸದೊಂದಿಗೆ ನಡೆಸಬಾರದೆಂದು ಕೋರಿಕೆ.

ವ್ಯವಸ್ಥಾಪಕರು

ಬಿಪಿಎಲ್, ಪೋರೆಸ್ ಕಾರ್ಮಿಕರ ಹೋರಾಟ ಬೆಂಬಲಿಸಿ ಭಾರಿ ಮೆರವಣಿಗೆ



ಕಳೆದ ಏಳು ತಿಂಗಳಿಂದ ಸತತ ಹೋರಾಟದಲ್ಲಿರುವ ಪೋರಸ್ ಹಾಗೂ ಕಳೆದ 45 ದಿನಗಳಿಂದ ಮುಷ್ಕರದಲ್ಲಿರುವ ಬಿಪಿಎಲ್ ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಬಿಪಿಎಲ್ ಕಾರ್ಮಿಕರ ಹೋರಾಟದ ಸೌಹಾರ್ದತಾ ಸಮಿತಿ ಡಿಸೆಂಬರ್ 30 ರಂದು ನಗರದಲ್ಲಿ ಭಾರಿ ಮೆರವಣಿಗೆ ಸಂಘಟಿಸಿತ್ತು.

ಬಿಪಿಎಲ್, ಪೋರೆಸ್ ಕಾರ್ಮಿಕರು ಸೇರಿದಂತೆ ಸೌಹಾರ್ದತಾ ಸಮಿತಿಯ ಹಲವಾರು ಸಂಘಟನೆಗಳ ಐದು ಸಾವಿರ ಕಾರ್ಮಿಕರು ಪುರಭವನದಿಂದ ಕೆ.ಆರ್ ವೃತ್ತದವರೆಗೆ ಮೆರವಣಿಗೆ ನಡೆಸಿದರು. ಮುಂಚೂಣಿಯಲ್ಲಿ ಸಿಐಟಿಯು ಮುಖಂಡರಾದ ಎಸ್. ಸೂರ್ಯನಾರಾಯಣ ರಾವ್, ವಿಜೆಕೆ.ನಾಯರ್, ಬಿಪಿಎಲ್ ಕಾರ್ಮಿಕ ಸಂಘದ ಆರ್.ಶ್ರೀನಿವಾಸ್, ಪೋರೆಸ್ ಕಾರ್ಮಿಕರ ಸಂಘದ ಕೆ.ಎಸ್.ಸುಬ್ರಮಣ್ಯಂ ಸೇರಿದಂತೆ ಕನ್ನಡ ಚಳವಳಿಯ ಪ್ರಭಾಕರ ರೆಡ್ಡಿ, ಜಾಣಗೆರೆ ವೆಂಕಟರಾಮಯ್ಯ, ರಾಜ್ ಕುಮಾರ್ ಅಭಿಮಾನಿಗಳ ಸಂಘದ ಸಾ.ರಾ. ಗೋವಿಂದು, ನಗರ ಪಾಲಿಕೆ ಸದಸ್ಯ ನ.ನರೇಂದ್ರಬಾಬು ಇನ್ನಿತರ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಈ ಕಾರ್ಖಾನೆಗಳ ಮಾಲಿಕರ ಹುಂಬತನ, ಕಾರ್ಮಿಕ ಆಯುಕ್ತರ ಇಬ್ಬಂದಿತನ ಹಾಗೂ ಸರ್ಕಾರದ ನಿಷ್ಕ್ರಿಯತೆ ಬಗ್ಗೆ ಆಕ್ರೋಶಗೊಂಡ ಕಾರ್ಮಿಕರು ಘೋಷಣೆಗಳೊಂದಿಗೆ ಪೊಲೀಸ್ ಕಾವಲು ಭೇದಿಸಿ ವಿಧಾನ ಸೌಧದತ್ತ ಸಾಗತೊಡಗಿದಾಗ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು. ಕೆ.ಆರ್. ವೃತ್ತದಲ್ಲಿ 2 ಘಂಟೆಕಾಲ ಧರಣಿ ನಡೆಸಿದರು.

ಧರಣಿಕಾರರನ್ನುದ್ದೇಶಿಸಿ ಕನ್ನಡ ಚಳವಳಿಯ ಪ್ರಭಾಕರ ರೆಡ್ಡಿ ಮಾತನಾಡಿ ಕರ್ನಾಟಕದಲ್ಲಿ ದುಡಿಯುವವರೆಲ್ಲ ಕನ್ನಡಿಗರೆ, ನಿಮ್ಮ ಹೋರಾಟಕ್ಕೆ ಸದಾ ನಮ್ಮ ಬೆಂಬಲವೆಂದರು. ಸಾ.ರಾ.ಗೋವಿಂದು, ಜಾಣಗೆರೆ ಕೂಡಲೇ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿದರು. ನಗರ ಪಾಲಿಕೆ ಸದಸ್ಯ ನ.ನರೇಂದ್ರಬಾಬು ಮಾತನಾಡಿ ಸರ್ಕಾರದ ನಿರ್ಲಕ್ಷತೆಯನ್ನು ಖಂಡಿಸಿದರು.

ವಿಜೆಕೆ ನಾಯರ್ ಮಾತನಾಡಿ ಕಾರ್ಮಿಕರ ಸಂಘ ರಚಿಸಿಕೊಳ್ಳುವ ಮೂಲಭೂತ ಹಕ್ಕನ್ನು ನಿರಾಕರಿಸುವ ಮಾಲಿಕರ ಜತೆ ಕಾರ್ಮಿಕ ಇಲಾಖೆಯು ಪೈಪೋಟಿಯಲ್ಲಿರುವುದನ್ನು ತೀವ್ರವಾಗಿ ಖಂಡಿಸಿದರು. ರೈತ ಸಂಘದ ಪಿ.ಜಗನ್ನಾಥ, ಡಿವೈಎಫ್‌ಐನ ಗುರುಶಾಂತ್, ಮಹಿಳಾ ಸಂಘಟನೆಯ ಎಸ್.ವರಲಕ್ಷ್ಮಿ ಮೊದಲಾದವರು ಮಾತನಾಡಿ ಹೋರಾಟ ನಿರತ ಕಾರ್ಮಿಕರಿಗೆ ತಮ್ಮ ಸೌಹಾರ್ದ ಬೆಂಬಲ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಸೂರ್ಯನಾರಾಯಣ ರಾವ್ ಅಕ್ರಮ ಕಾರ್ಮಿಕ ನಡವಳಿಕೆಯ ಮಾಲಿಕರ ಬೆನ್ನಲುಬಾಗಿರುವ ರಾಜ್ಯ ಸರ್ಕಾರ ಕಾರ್ಮಿಕರನ್ನು ವಂಚಿಸುತ್ತಿರುವುದು ದುರದೃಷ್ಟವೆಂದರು. ಕೇಂದ್ರ ರಾಜ್ಯ ಸರ್ಕಾರ ಅನುಸರಿಸುತ್ತಿರುವ ಹೊಸ ಆರ್ಥಿಕ, ಕೈಗಾರಿಕ ನೀತಿಯ ಇಂತಹ ದುಷ್ಪರಿಣಾಮಗಳ ವಿರುದ್ಧ ಸಂಘಟಿತ ಹೋರಾಟವೊಂದೇ ಮಾರ್ಗವೆಂದರು.

ಕಾರ್ಮಿಕ ಸಚಿವ ಬಿ.ಸತ್ಯನಾರಾಯಣ ಮನವಿ ಸ್ವಿಕರಿಸಲು ಬಂದಾಗ ಆಕ್ರೋಶಗೊಂಡ ಸಾವಿರಾರು ಕಾರ್ಮಿಕರು ಧಿಕ್ಕಾರದ ಘೋಷಣೆ ಮುಖಾಂತರ ಆಕ್ರೋಶ ವ್ಯಕ್ತಪಡಿಸಿದರು. ಮನವಿ ಸ್ವಿಕರಿಸಿದ ಸಚಿವರು ಜನವರಿ ಒಂದರಂದು ಉನ್ನತ ಮಟ್ಟದ ಸಭೆ ಕರೆದು, ಈ ಎರಡು ಕಾರ್ಖಾನೆ ಕಾರ್ಮಿಕರ ಸಮಸ್ಯೆ ಇತ್ಯರ್ಥಗೊಳಿಸುವ ಭರವಸೆ ನೀಡಿದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಮಿನಾಕ್ಷಿ ಸುಂದರಂ ನಿರೂಪಿಸಿ ವಂದಿಸಿದರು.

ದೇವದುರ್ಗ ತಾಲೂಕು ಸಿಪಿಐ(ಎಂ) ಪ್ರಥಮ ಸಮ್ಮೇಳನ

ಡಿಸೆಂಬರ್ 12 ಮತ್ತು 13 ರಂದು ಸಿಪಿಐ(ಎಂ) ದೇವದುರ್ಗ ತಾಲೂಕ ಪ್ರಥಮ ಸಮ್ಮೇಳನ ನಡೆಯಿತು. ಇದರ ಅಂಗವಾಗಿ ಬೃಹತ್ ರ್‍ಯಾಲಿ ನಡೆಸಿದ್ದು, ಹಳ್ಳಿಯಿಂದ ಬಂದ ಸುಮಾರು 800 ಜನರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ನಂತರ ಸಾರ್ವಜನಿಕ ಕ್ಲಬ್‌ನಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಕಾಂ|| ಎನ್. ಉಪಧ್ಯಾಯರು ಮಾತನಾಡುತ್ತಾ ನಾವು ಬ್ರಿಟಿಷರ ವಿರುದ್ಧ ಹೋರಾಡಿದ ಕಾರಣ ಸ್ವಾತಂತ್ರ ಬಂದಿತು. ಅಂಥಹ ಹೋರಾಟದ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮಾತ್ರ ಇಂದಿಗೂ ಭೂಮಾಲಿಕರ ವಿರುದ್ಧ ಭೂಮಿಗಾಗಿ ಬಂಡವಾಳಶಾಹಿಗಳ ವಿರುದ್ಧ ಹೋರಾಡುತ್ತಿದೆ, ಈ ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಲು ಸಿ.ಪಿ.ಐ (ಎಂ) ನಿಂದ ಮಾತ್ರ ಸಾಧ್ಯ ಎಂದರು. ಇದೇ ಸಂದರ್ಭದಲ್ಲಿ ಸ್ವಾತಂತ್ರ ಹೋರಾಟಗಾರರಾದ ಕಾಂ|| ಎನ್.ಕೆ. ಉಪಧ್ಯಾಯರನ್ನು ಕಾಂ|| ಬಸವಲಿಂಗಪ್ಪ ಸನ್ಮಾನಿಸಿದರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕಾಂ|| ಚಂದ್ರ ಶೇಕರ ಬಾಳೆಯುವರು ಮಾತನಾಡುತ್ತಾ ಕೇಂದ್ರ ಸರಕಾರ ಹಾಗೂ ರಾಜ್ಯ ಸರ್ಕಾರಗಳ ದುರಾಡಳಿತದಿಂದ ಬೆಲೆ ಏರಿಕೆಯಾಗಿದ್ದು ಸಾಮಾನ್ಯ ಜನರು ತತ್ತರಿಸುವಂತಾಗಿದೆ. ಇದಕ್ಕೆ ಮೂಲ ಕಾರಣ ಬಂಡವಾಳಶಾಹಿ ಭೂಮಾಲಿಕ ಪರವಾದ ಆರ್ಥಿಕ ನೀತಿ ಕಾರಣವಾಗಿದೆ. ಪಕ್ಷಗಳಲ್ಲಿ ಭಷ್ಟಾಚಾರ ತಾಂಡವವಾಡುತ್ತಿದೆ. ಇದರ ವಿರುದ್ಧ ಸಿಪಿಐ(ಎಂ) ಹೋರಾಡುತ್ತದೆ ಎಂದು ಹೇಳಿದರು.

ಕೇಂದ್ರ ಹಾಗೂ ರಾಜ್ಯದಲ್ಲಿ ನಡೆದಂತಹ ದುರಾಡಳಿತ ದೇವದುರ್ಗ ತಾಲೂಕಿನಲ್ಲಿಯೂ ನಡೆದಿದ್ದು ಇಂದು ಸಿಪಿಐ(ಎಂ) 3ನೇ ಶಕ್ತಿಯಾಗಿ ಬೆಳೆದಿದೆ, ದೇವದುರ್ಗ ಒಂದು ಕೊಳಚಿ ಪ್ರದೇಶವಾಗಿದ್ದು, ಇದರ ಅಭಿವೃದ್ಧಿಗಾಗಿ ಸಿಪಿಐ(ಎಂ) ಹೋರಾಟ ಮಾಡಬೇಕಾಗಿದೆ ಎಂದು ಹೇಳಿದರು. ದೇವದುರ್ಗ ತಾಲೂಕಿನ ಮೀಸಲು ಕ್ಷೇತ್ರವನ್ನು ಸಾಮಾನ್ಯ ಕ್ಷೇತ್ರ ಮಾಡಬೇಕೆಂದು ಒಂದು ಗುಂಪು ಒತ್ತಾಯಿಸಿದರೆ ಮಿಸಲಾತಿ ಮುಂದುವರಿಯಬೇಕು ಎಂದು ಇನ್ನೊಂದು ಗುಂಪು ಒತ್ತಾಯಿಸುತ್ತದೆ. ಆದರೆ ಸಾಮಾನ್ಯ ಕ್ಷೇತ್ರದಲ್ಲಿರುವ ಎಂ.ಪಿ. ಎಂ.ಎಲ್.ಸಿ. ತಾ.ಪಂ.ಜಿ.ಪಂ. ಯಿಂದ ಯಾವ ಅಭಿವೃದ್ಧಿಯಾಗಿದೆ ಮೀಸಲು ಕ್ಷೇತ್ರದಿಂದ ದಲಿತರ ಅಭಿವೃದ್ಧಿಯಾಗಿದೆಯೇ ಎಂದು ಪ್ರಶ್ನಿಸಿದರು.

ಈ ಜಿಲ್ಲೆಯಲ್ಲಿ ನಾರಾಯಣಪುರ ಬಲದಂಡೆ ಕಾಲುವೆ ಬರಬೇಕಾದರೆ ಸಿಪಿಐ(ಎಂ) ನ ಹೋರಾಟವೇ ಪ್ರಮುಖ ಕಾರಣ ಆದರೆ ಹಲವಾರು ರಾಜಕೀಯ ಪಕ್ಷಗಳ ಮುಖಂಡರು ಗುತ್ತೇದಾರಿಕೆಯಿಂದ ಭ್ರಷ್ಟಾಚಾರದಲ್ಲಿ ತೊಡಗಿರುವುದು ವಿಷಾಧನೀಯ ಎಂದು ಬಾಳೆಯುವರು ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ|| ಮಲ್ಲಯ್ಯ ಜಾಲಹಳ್ಳಿ ಜಿಲ್ಲಾ ಸಮಿತಿ ಸದಸ್ಯರಾದ ಕಾಂ|| ವೈ. ರಾಮಣ್ಣ ಮಾತನಾಡಿದರು.

ನಂತರ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿ ಜಿಲ್ಲಾ ಕಾರ್ಯದರ್ಶಿ ಕಾಂ|| ಬಿ. ಲಿಂಗಪ್ಪ ಕಾಂ|| ಕರಿಯಪ್ಪ ಅಚ್ಚೊಳ್ಳಿ ಕಾಂ|| ಚಂದ್ರ ಶೇಖರ ಬಾಳೆ ಮಾತನಾಡಿದರು.

ಸುಮಾರು 20 ಜನ ಪ್ರತಿನಿಧಿಗಳು ವರದಿಯ ಮೇಲೆ ಚರ್ಚೆಮಾಡಿದರು ಅಧ್ಯಕ್ಷ ಮಂಡಳಿಯ ಪರವಾಗಿ ಕಾಂ|| ರಾಮಣ್ಣ ಕೊನೆಯಲ್ಲಿ ಮಾತನಾಡಿದರು.

10 ಜನರ ತಾಲೂಕ ಸಮಿತಿಯನ್ನು ಆಯ್ಕೆ ಮಾಡಲಾಯಿತು. ತಾಲೂಕ ಕಾರ್ಯದರ್ಶಿಯಾಗಿ ವೈ. ರಾಮಣ್ಣ ಆಯ್ಕೆಯಾದರು, ಕಾಂ|| ಮಲ್ಲಯ್ಯ ಜಾಲಹಳ್ಳಿ ಬಸನಗೌಡ ದೇಸಾಯಿ ವಕೀಲರು, ಪಿ.ಗಿರಿಯಪ್ಪ, ರಾಮಲಿಂಗಪ್ಪ ಗೌಡ, ಬಸವಲಿಂಗಪ್ಪ, ತಿಪ್ಪಯ್ಯನಾಯಕ, ಚಂದ್ರ ಶೇಖರ ನಾಡಗೌಡ, ಚಂದಪ್ಪ ಬುದ್ದಾನ್ನಿ ಬಸವರಾಜ ತೇಕೂರು ತಾಲೂಕ ಸಮಿತಿಗೆ ಆಯ್ಕೆಯಾದರು ಗೆಲವು ನಮ್ಮದು ಎನ್ನುವ ಹಾಡಿನೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ಬಂಟ್ವಾಳ ತಾಲೂಕು ರೈತ ಸಂಘದ ಸಮ್ಮೇಳನ

ಅಖಿಲ ಭಾರತ ಕಿಸಾನ್ ಸಭಾ ನೋಂದಣಿಯಾಗಿರುವ ಬಂಟ್ವಾಳ ತಾಲೂಕು ರೈತ ಸಂಘದ ಸಮ್ಮೇಳನವು ತಾ. 26-12-98 ರಂದು ಬಂಟ್ವಾಳದಲ್ಲಿ ನಡೆಯಿತು.

ಸಮ್ಮೇಳನವನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಹಾಗೂ ರೈತ ಸಂಘದ ಮುಂದಾಳು ಕಾಂ|| ಕೆ.ಆರ್. ಶ್ರೀಯಾನ್‌ರವರು ಉದ್ಘಾಟಿಸಿ ಮಾತನಾಡಿದರು. ದೇಶ ಸ್ವಾತಂತ್ರ್ಯ ಪಡೆದು ಐವತ್ತು ವರ್ಷಗಳನ್ನು ದಾಟಿದರೂ, ಗ್ರಾಮಾಂತರ ಪ್ರದೇಶದ ರೈತರು ಇಂದು ಕಷ್ಟಕರವಾದ ಜೀವನ ನಡೆಸುತ್ತಿರುವುದಕ್ಕೆ ಉಂಟಾಗಿರುವ ಸ್ಥಿತಿಗಳ ಬಗ್ಗೆ ವಿವರಿಸಿದರು. ಸಮಗ್ರ ಭೂ ಸುಧಾರಣೆಯಾಗದಿರುವುದು, ಹಿಂದೆ ಕೇಂದ್ರದಲ್ಲಿ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರದ ಹೊಸ ಆರ್ಥಿಕ ನೀತಿಯನ್ನು ಹಾಗೆಯೇ ಮತ್ತು ತೀವ್ರವಾಗಿ ಜಾರಿಗೆ ತರುತ್ತಿರುವ ಈಗಿನ ಬಿಜೆಪಿ ಸರ್ಕಾರದಿಂದ ಮತ್ತೂ ಕಷ್ಟ ನಷ್ಟಗಳನ್ನು ಎದುರಿಸಬೇಕಾಗಿರುವುದನ್ನು ವಿವರಿಸಿದ ಕೆ.ಆರ್. ಶ್ರೀಯಾನ್‌ರವರು ರೈತರಿಗೆ ಮಾರಕವಾಗುವ ಪೇಟೆಂಟ್ ಕಾಯಿದೆ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಿರುವ ಬಿಜೆಪಿ ನೀತಿಯನ್ನು ತೀವ್ರವಾಗಿ ಖಂಡಿಸಿದರು.

ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ರೈತ ಸಂಘದ ಜಿಲ್ಲಾ ಸಮಿತಿಯ ಸಹ ಕಾರ್ಯದರ್ಶಿ ಕಾ|| ರಾಮಚಂದ್ರ ಉಚ್ಚಿಲ್‌ರವರು, ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಪರಿಹಾರಕ್ಕೆ ಬಲಿಷ್ಠ ಸಂಘಟನೆಯನ್ನು ಕಟ್ಟಿ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ತಾಲೂಕು ರೈತ ಸಂಘದ ಕಾ|| ಬಿ. ವಾಸು ಗಟ್ಟಿಯವರು ವಹಿಸಿದರು. ಪ್ರಾರಂಭದಲ್ಲಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿಯಾಗಿದ್ದು, ಇತ್ತೀಚಿಗೆ ನಿಧನ ಹೊಂದಿದ ಕಾ|| ಜನಾರ್ಧನ ನಾಯಕ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯವನ್ನು ಮಂಡಿಸಿತು.

ಪಾಣೆಮಂಗಳೂರು ರಸ್ತೆ ಸೇತುವೆಯ ಕಾಮಗಾರಿ, ಮಂಗಳೂರು-ಬೆಂಗಳೂರು ಮೀಟರ್ ಗೇಜ್‌ನಿಂದ ಬ್ರಾಡ್ ಗೇಜ್‌ಗೆ ಪರಿವರ್ತನೆ, ಕಾಮಗಾರಿಯು ಕುಂಠಿತವಾಗಿರುವುದನ್ನು ಖಂಡಿಸಿ, ತೀವ್ರಗತಿಯಲ್ಲಿ ಕಾಮಗಾರಿ ನಡೆಸಬೇಕು, ರೈತರ ಪಂಪು ಸೆಟ್ಟುಗಳಿಗೆ ಪಡಿತರ ಮೂಲಕ ಕನಿಷ್ಟ ತಿಂಗಳಿಗೆ 60 ಲೀಟರ್ ಸೀಮೆ ಎಣ್ಣೆ, ಅತೀ ವೃಷ್ಟಿಯಿಂದ ಬೆಳೆ ಹಾನಿಯಾಗಿ ನಷ್ಟ ಅನುಭವಿಸಿದ ರೈತರಿಗೆ ಎಕರೆಗೆ ಎರಡು ಸಾವಿರಕ್ಕೆ ಕಡಿಮೆಯಾಗದಂತೆ ಪರಿಹಾರ, ರಸಗೊಬ್ಬರವೂ ಸೇರಿದಂತೆ ರೈತರ ಕೃಷಿಗೆ ಒದಗಿಸುವ ಎಲ್ಲಾ ಸಾಮಾಗ್ರಿಗಳನ್ನು ಶೇಕಡ 40 ರ ಸಬ್ಸಿಡಿಯಂತೆ ರೈತರಿಗೆ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುವ ಮತ್ತಿತರ ಒಟ್ಟು ಹತ್ತು ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿತು.

ಸಮ್ಮೇಳನ 31 ಜನರ ತಾಲೂಕು ಸಮಿತಿಯನ್ನು ಆಯ್ಕೆಮಾಡಿ ಈ ಕೆಳ ಕಂಡವರು ಅಧಿಕಾರ ವರ್ಗಕ್ಕೆ ಆಯ್ಕೆಯಾದರು.

ಅಧ್ಯಕ್ಷರು. ಎ.ವಿ. ರಮೇಶ್, ಉಪಾಧ್ಯಕ್ಷರುಗಳು ಬಿ. ವಾಸುಗಟ್ಟಿ, ಮೋನಪ್ಪ ಸಪಲ್ಯ, ಜನಾರ್ಧನ, ಶೀಲ ಬಂಗೇರ, ಪ್ರಧಾನ ಕಾರ್ಯದರ್ಶಿ ಬಿ. ನಾರಾಯಣ, ಸಹ ಕಾರ್ಯದರ್ಶಿಗಳು ಲಿಂಗಪ್ಪ ಕರ್ಕೇರ, ಎ. ರಾಮಣ್ಣ ಎನ್. ಗೋಪಾಲ, ಖಜಾಂಚಿ ಸಂಜೀವ ಬಂಗೇರ ಮತ್ತು 1999 ಜನವರಿ 3 ಮತ್ತು 4 ರಂದು ಬೆಳ್ತಂಗಡಿಯಲ್ಲಿ ನಡೆಯಲಿರುವ ಜಿಲ್ಲಾ ಸಮ್ಮೇಳನಕ್ಕೆ 33 ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಆರಂಭದಲ್ಲಿ ಕಾರ್ಯದರ್ಶಿ ಬಿ. ನಾರಾಯಣರವರು ಸ್ವಾಗತಿಸಿ, ಕಳೆದ ಸಾಲಿನ ಚಟುವಟಿಕೆಯ ವರದಿಯನ್ನು ಸಮ್ಮೇಳನದ ಮುಂದೆ ಇಟ್ಟು, ಪ್ರತಿನಿಧಿಗಳು ಚರ್ಚಿಸಿದ ನಂತರ ಅಂಗೀಕಾರ ಪಡೆಯಿತು. ಕೊನೆಯಲ್ಲಿ ಶೀನ ಬಂಗೇರ ವಂದಿಸಿದರು.

ಅಮೇರಿಕಾ ಸಾಮ್ರಾಜ್ಯಶಾಹಿ ಪ್ರತಿಕೃತಿ ದಹನ

ಭಟ್ಕಳ:- ಅಮೇರಿಕಾವು ಇರಾಕಿನ ಮೇಲೆ ನಡೆಸಿರುವ ಅಪ್ರಚೋದಿತ ಬಾಂಬ್ ದಾಳಿಯನ್ನು ಖಂಡಿಸಿ ಸಾವಿರಾರು ಜನರ ಸಾವಿಗೆ ಕಾರಣವಾದ ಅಮೇರಿಕಾ ಸಾಮ್ರಾಜ್ಯಶಾಹಿ ನೀತಿ ವಿರೋಧಿಸಿ ಸಾವಿರಾರು ಸಿಪಿಐ(ಎಂ) ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ 17 ರ ಮುರ್ಡೇಶ್ವರ ನಾಕೆ ಪ್ರದೇಶದಲ್ಲಿ "ಅಮೇರಿಕನ್ ಸಾಮ್ರಾಜ್ಯಶಾಹಿ ಭೂತ ದಹನ" ಕಾರ್ಯಕ್ರಮ ನಡೆಸಿತು.

"ಅಮೇರಿಕನ್ ಬ್ರಿಟನ್ ಯುದ್ಧಕೋರ ನೀತಿಗೆ ಧಿಕ್ಕಾರ ವಿಶಶಾಂತಿ ಚಿರಾಯುವಾಗಲಿ ವಿಶ್ವಸಂಸ್ಥೆ ನಿಯಮ ಉಲ್ಲಂಘಿಸಿದ ಸಾಮ್ರಾಜ್ಯಶಾಹಿಗಳಿಗೆ ಧಿಕ್ಕಾರ ಮುಂತಾದ ಘೋಷಣೆ ಕೂಗುತ್ತಾ ಸಿಪಿಐ(ಎಂ) ರಾಜ್ಯ ಸಮಿತಿ ಕರೆ ಮೇರೆಗೆ ಭಾರತ ಕಮುನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ) ಭಟ್ಕಳ ತಾಲೂಕಾ ಸಮಿತಿ ಆಶ್ರಯದಲ್ಲಿ ಬೃಹತ್ ಮೆರವಣಿಗೆ ನಡೆಸಿ ಜನನಿಬಿಡ ಮುಖ್ಯ ಸ್ಥಳದಲ್ಲಿ ಪ್ರತಿಕೃತಿಗೆ ಬೆಂಕಿ ಹಚ್ಚಿ ದಹಿಸಲಾಯಿತು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಸುಭಾಸ ಕೊಪ್ಪಿಕರ್ ಮಾತನಾಡಿದರು.

ಇನ್ನೊರ್ವ ಸಿಪಿಐ(ಎಂ) ಮುಖಂಡರು ತಿಲಕ್ ಗೌಡ ಸಿಪಿಐ(ಎಂ) ಚಿತ್ತಾಪುರ ಟೈಲ್ ಘಟಕದ ಕಾರ್ಯದರ್ಶಿ ನಾಗಪ್ಪ ದೇವಾಡಿಗ, ಮುನ್ವೇಲ್ ಡಿಕೊಸ್ಟಾ, ವೆಂಕಟೇಶ ದೇವಾಡಿಗ, ಸಿಪಿಐ(ಎಂ) ಮುರ್ಡೇಶ್ವರ ಶಾಖೆ ಕಾರ್ಯದರ್ಶಿ ಚಂದ್ರು ನಾಯ್ಕ, ಗಣಪತಿ ದೇವಾಡಿಗ, ಶಿವರಾಜ ನಾಯ್ಕ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹೊನ್ನಾವರ: ಸಿಪಿಐ(ಎಂ) ಕಛೇರಿಯಲ್ಲಿ ತಿಲಕ್ ಗೌಡ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಸದಸ್ಯರು ಅಮೇರಿಕಾ, ಬ್ರಿಟನ್‌ನ ಯುದ್ಧಕೋರ ನೀತಿಯನ್ನು ತೀವ್ರವಾಗಿ ಖಂಡಿಸಿದರು. ಸಭೆಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಸುಬಾಸ ಕೊಪ್ಪಿಕರ ಮಾವಿನಕುರ್ವಾ ಶಾಖಾ ಕಾರ್ಯದರ್ಶಿ ಶಿವಾನಂದ ನಾಯ್ಕ, ಅಣ್ಣಪ್ಪ ಗೌಡ, ರಾಮಾ ಶಿವಯ್ಯ ಗೌಡ, ಮಂಜುನಾಥ ನಾಯ್ಕ ಹಾಜರಿದ್ದರು.

ಹರಿಹರ: ಸ್ಥಳೀಯ ಸಿಪಿಎಂ ಪಕ್ಷದ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಡಿ. 1ರಂದು ಸಂಜೆ ಮೆರವಣಿಗೆ ನಡೆಸಿ ಇರಾಕ್‌ಮೇಲೆ ದಾಳಿ ನಡೆಸಿರುವ ಬಿಲ್ ಕ್ಲಿಂಟನ್ ಪ್ರತಿಕೃತಿಯನ್ನು ಗಾಂಧಿ ಸರ್ಕಲ್‌ನಲ್ಲಿ ದಹನ ಮಾಡಿದರು.

ಮೆರವಣಿಗೆಯ ನೇತೃತ್ವವನ್ನು ನಿತ್ಯಾನಂದ ಸ್ವಾಮಿ ವಹಿಸಿದ್ದರು. ಎ.ಎಸ್. ಮೂರ್ತಿ ಎಸ್. ಎಫ್.ಐ.ನ ಮಹಾಂತೇಶ್, ಸುರೇಶ್ ತೇರದಾಳ್, ಮುಂತಾದವರು ಇದ್ದರು.

ಗ್ರಾಮ ಪಂಚಾಯತ್ ನೌಕರರ ಹೋರಾಟ ಏತಕ್ಕೆ?

ಕರ್ನಾಟಕ ರಾಜ್ಯದ 5700 ಗ್ರಾಮ ಪಂಚಾಯತಿಗಳಲ್ಲಿ ಸುಮಾರು 28,000 ಗುಮಾಸ್ತರು ಬಿಲ್ ಕಲೆಕ್ಟರರು, ಪಂಪ ಆಪರೇಟರರು ಸಿಪಾಯಿಗಳು, ಕಸಗುಡಿಸುವವರು ಬಾಲವಾಡಿ ಶಿಕ್ಷಕಿಯರು, ಕೆಲಸಮಾಡುತ್ತಿದ್ದಾರೆ. ಇವರ ಸಮಸ್ಯೆಗಳೇನು, ಇವುಗಳ ಪರಿಹಾರಕ್ಕೆ ನಡೆಸಿರುವ ಇವರ ಹೋರಾಟ ಈಗ ಯಾವ ಹಂತ ತಲುಪಿದೆ - ಕರ್ನಾಟಕದ ರಾಜ್ಯ ಪಂಚಾಯತ್ ನೌಕರರ 3ನೇ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಸಂಘದ ಗೌರವ ಅಧ್ಯಕ್ಷ ಎನ್.ಕೆ.ಉಪಾಧ್ಯಾಯ ವಿವರಿಸುತ್ತಾರೆ.

1993 ಕ್ಕಿಂತ ಮುಂಚೆ 1985 ರಲ್ಲಿ ಮಂಡಲ ಪಂಚಾಯತ್ ಅಸ್ತಿತ್ವಕ್ಕೆ ಬಂದಾಗ ಹಿಂದಿನ ಗ್ರೂಪ್ ಪಂಚಾಯತಿಗಳಲ್ಲಿ ದುಡಿಯುತ್ತಿದ್ದವರನ್ನೆಲ್ಲಾ ಮಂಡಲ ಪಂಚಾಯತಿಯಲ್ಲಿ ನೇಮಿಸಿಕೊಂಡರೂ ಅವರಿಗೆ ಯಾವದೇ ಸೇವಾ ಭದ್ರತೆ ಇಲ್ಲದೆ ನಿವೃತ್ತಿ ಸೌಲಭ್ಯಗಳಿಲ್ಲದೆ ತಿಂಗಳಿಗೆ ಬರೇ 25 ರಿಂದ ರೂ. 50 ರವರೆಗೆ ಗುಲಾಮರಂತೆ ದುಡಿಯುವ ಪರಿಸ್ಥಿತಿಯಿತ್ತು. 1985 ರಲ್ಲಿ ಜಿಲ್ಲಾ ಪರಿಷತ್ತು/ ಮಂಡಲ ಪಂಚಾಯತ್ ವ್ಯವಸ್ಥೆ ಅನುಷ್ಟಾನಕ್ಕೆ ಬಂದ ನಂತರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯಿಂದ ಜಿಲ್ಲಾ ಪರಿಷತ್ತಿಗೆ ಆರಿಸಿ ಬಂದ ಮಾರುತಿ ಮಾನ್ಪಡೆಯವರು ಮಂಡಲ ಪಂಚಾಯತಿ ನೌಕರರನ್ನು ಸಂಘಟಿಸಿ ಹೋರಾಟ ನಡೆಸಿದರು. ಅದರ ಪತ್ರಿಫಲವಾಗಿ ಬಿಲ್ ಕಲೆಕ್ಟರರಿಗೆ ರೂ 980, ಪಂಪ ಅಪರೇಟರಿಗೆ ರೂ 760, ಸಿಪಾಯಿ ಕಸಗುಡಿಸುವವರಿಗೆ ರೂ 500 ಮಾಹೆಯಾನ ಸಂಬಳ ಸಿಗುವಂತೆ ಹಾಗೆಯೇ ಎಲ್ಲ ಕೆಲಸಗಾರರ ಸರ್ವಿಸ್ ಪುಸ್ತಕ ತಯಾರಿಸುವ ನಿರ್ಣಯುವನ್ನು ಗುಲ್ಬರ್ಗ ಜಿಲ್ಲಾ ಪರಿಷತ್ತಿನಲ್ಲಿ ಪಾಸುಮಾಡಿಸಿ ನೌಕರರಿಗೆ ಹೆಚ್ಚಿನ ಪಗಾರ ಕೊಡಿಸಲು ಸಾಧ್ಯವಾಯಿತು. ಇದರ ಉಪಯೋಗ ಮಾಡಿಕೊಂಡು ರಾಜ್ಯದ 3000 ಮಂಡಲ ಪಂಚಾಯತಿಗಳ ಸುಮಾರು 16000 ಕೆಲಸಗಾರರಿಗೂ ಈ ಸೌಲಭ್ಯ ಕೊಡಿಸಬೇಕೆಂಬ ಉದ್ದೇಶದಿಂದ ಮಾರುತಿ ಮಾನ್ಪಡೆ ಅಧ್ಯಕ್ಷರಾಗಿಯೂ ಎನ್.ಕೆ.ಉಪಾಧ್ಯಾಯರು ಕಾರ್ಯದರ್ಶಿಯಾಗಿರುವ ಕರ್ನಾಟಕ ರಾಜ್ಯ ಮಂಡಲ ಪಂಚಾಯತ್ ನೌಕರರ ಸಂಘ ಭಾರತ ಕಾರ್ಮಿಕ ಸಂಘಗಳ ಕಾಯ್ದೆಗಳನುಗುಣವಾಗಿ ಸ್ಥಾಪಿಸಲಾಯಿತು. 1985-1987 ರ ಅವಧಿಯಲ್ಲಿ ಬೀದರ್, ಬಿಜಾಪುರ ಜಿಲ್ಲೆಗಳಲ್ಲಿ ಸಂಘ ಕಟ್ಟಿ ಗುಲ್ಬರ್ಗ ಜಿಲ್ಲಾ ಪರಿಷತ್ತಿನ ನಿರ್ಣಯುಗಳನ್ನು ಈ ಜಿಲ್ಲೆಗಳಲ್ಲೂ ಪಾಸುಮಾಡಿಸಲು ಸಾಧ್ಯವಾಯಿತು. ಇಡೀ ಕರ್ನಾಟಕ ರಾಜ್ಯದಲ್ಲಿ ಏಕ ರೂಪ ಸಂಬಳ ಸೇವಾ ನಿಯಮಗಳು ಬೇಕೆಂಬ ಉದ್ದೇಶದಿಂದ ರಾಜ್ಯದ ಬೇರೆ ಜಿಲ್ಲೆಗಳಲ್ಲಿಯೂ ಸಂಘಟನೆ ಮಾಡಿ ಹೋರಾಟಗಳನ್ನು ನಡೆಸಲಾಯಿತು. ಇದೇ ಸಮಯದಲ್ಲಿ ಬೇರೆ ಸಂಘ ಪ್ರಾರಂಭವಾದರೂ ಈಗ ಅದು ನಿಷ್ಕ್ರಿಯವಾಗಿದೆ. ನಮ್ಮ ಸಂಘಟನೆ ನಾಲ್ಕೈದು ಸಲ ವಿಧಾನ ಸೌಧ ಚಲೋ ಕಾರ್ಯಕ್ರಮ ನಡೆಸಿ ನಿರಂತರವಾಗಿ ನೌಕರರ ಹಿತಕ್ಕಾಗಿ ಹೋರಾಟ ಮುಂದುವರಿಸಿ ಕೆಲವು ಅನುಕೂಲತೆಗಳನ್ನು ಒದಗಿಸಲು ಸಾಧ್ಯವಾಗಿದೆ.

ಮೊದಲ ಹೋರಾಟ

ಗ್ರಾಮೀಣ ಜನ ಸಾಮಾನ್ಯರ ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿ ಗ್ರಾಮ ನೈರ್ಮಲ್ಯ ಗ್ರಾಮೀಣ ನೀರು ಪೂರೈಕೆ ತೆರಿಗೆ ಸಂಗ್ರಹ ವರ್ಷಕ್ಕೆ ರೂ 900 ಕೋಟಿಗಳಿಗೂ ಹೆಚ್ಚು ಮೊತ್ತದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜ್ಯಾರಿಗೊಳಿಸುವ ಜವಾಬ್ದಾರಿ ಹೊತ್ತಿರುವ ಈ ಮಂಡಳ ಪಂಚಾಯತಿ ನೌಕರರಿಗೆ ಸಂಬಂಧಿಸಿ ಐದು ಅಂಶಗಳ ಬೇಡಿಕೆಗಳನ್ನು ಮುಂದಿಟ್ಟು 5000 ದಷ್ಟು ನೌಕರರು ಮೊದಲಬಾರಿ 30-3-1989 ರಂದು ವಿಧಾನ ಸೌಧದ ಮುಂದೆ ಮತ ಪ್ರದರ್ಶನ ನಡೆಸಿದರು.

ಈ ಬೇಡಿಕೆಗಳನ್ನು ಆಲಿಸಿದ ಮಂತ್ರಿ ಎಂ.ಪಿ. ಪ್ರಕಾಶ ಅವರು ಕನಿಷ್ಟ ರೂ 500 ಯಷ್ಟಾದರೂ ವೇತನ ನೀಡುವ ಭರವಸೆ ಇತ್ತರು. ಆದರೆ ಕೆಲವೇ ದಿವಸಗಳಲ್ಲಿ ಸರಕಾರ ಬಿದ್ದು ಹೋಯಿತು. ಅನಂತರ ಅಧಿಕಾರಕ್ಕೆ ಬಂದ ಕಾಂಗ್ರೆ ಪಕ್ಷದ ಮೊಯಿಲಿ ಸರಕಾರದಲ್ಲಿದ್ದ ಬಿ.ಬಸವಲಿಂಗಪ್ಪನವರು ಮಂಡಲ ಪಂಚಾಯತಿ ನೌಕರರನ್ನು ಕೀಳಮಟ್ಟದಲ್ಲಿ ಪರಿಗಣಿಸಿದರು. 1-4-87 ರಿಂದೀಚೆಗೆ ನೇಮಿಸಲ್ಪಟ್ಟ ನೌಕರರಲ್ಲಿ 240 ದಿನಗಳಿಗಿಂತ ಕಡಿಮೆ ಕಾಲ ಕೆಲಸ ಮಾಡಿದವರನ್ನು ನೌಕರಿಯಿಂದ ತೆಗೆದು ಹಾಕ ಬೇಕೆಂದೂ ಇನ್ನು ಮುಂದೆ ಮ.ಪಂ. ಗಳಿಗೆ ಯಾವುದೇ ನೌಕರರನ್ನು ನೇಮಿಸಿಕೊಳ್ಳಬಾರದೆಂಬ ನೌಕರ ವಿರೋಧಿ ನೀತಿಯ ವಿರುದ್ಧ ಹಾಗೆಯೇ ಇತರ ಬೇಡಿಕೆಗಳ ಸಲುವಾಗಿ 30-3-90 ರಂದು ಎರಡನೇಬಾರಿ ವಿಧಾನ ,ಸೌಧ ಚಲೋ ಕಾರ್ಯಕ್ರಮ ಹಮ್ಮಿ ಕೊಳ್ಳಲಾಯಿತು. ಅದರಿಂದಾಗಿ ಪ್ರಮುಖ ಬೇಡಿಕೆ ಸಿಗದಿದ್ದಾಗ ಕೆಲಸಗಾರರನ್ನು ತೆಗೆದು ಹಾಕುವ, ಹೊಸಬರನ್ನು ನೇಮಿಸಿಕೊಳ್ಳಬಾರದೆಂಬ ಸರಕಾರದ ಸುತ್ತೋಲೆ ರದ್ದುಪಡಿಸಿ ಸೇವಾ ನಿಯಮ ರಚನೆಗೆ ಚಾಲನೆ ನೀಡಲು ಸಾಧ್ಯವಾಯಿತು. ಆದರೆ ಮೂಲವೇತನ ಹೆಚ್ಚಳದ ಕುರಿತು ಸಂಪನ್ಮೂಲಗಳ ಅಭಾವವಿದೆಂಬ ನೆಪದಡಿಯಲ್ಲಿ ಚರ್ಚೆ ಫಲಿಸದೆ ಉಳಿಯಿತು.

ಸಂವಿಧಾನಕ್ಕೆ 73 ನೇ ತಿದ್ದುಪಡಿ ತಂದ ಮೂಲಕ 1993 ರಲ್ಲಿ ರಾಜ್ಯದಲ್ಲಿ ಪಂಚಾಯತ್ ರಾಜ್ ವಿಧೇಯಕ ಜ್ಯಾರಿಯಲ್ಲಿ ಬಂತು. ಅದರಲ್ಲಿ ಪಂಚಾಯತ್ ಕಾರ್ಯದರ್ಶಿ ಸರಕಾರಿ ಅಧಿಕಾರಿಯಾಗಿದ್ದು ಜಿಲ್ಲಾ ಪಂಚಾಯತಿ ನಿಧಿಯಿಂದ ಸಂಬಳ ಮತ್ತು ಭತ್ತೆ ಪಡೆಯಬಹುದೆಂದೂ ಗ್ರಾಮ ಪಂಚಾಯತಿಗಳ, ಸಿಬ್ಬಂದಿ ಸ್ವರೂಪ ವೇತನ ಶ್ರೇಣಿಗಳು ಮತ್ತು ನೇಮಕಾತಿ ವಿಧಾನಗಳನ್ನು ಸರಕಾರ ಆದೇಶದ ಮೂಲಕ ನಿರ್ದಿಷ್ಟಪಡಿಸ ಬಹುದೆಂದಿದೆ. ಸಿಬ್ಬಂದಿ ಸಂಬಳ ಗ್ರಾಮ ಪಂಚಾಯತಿ ನಿಧಿಯಿಂದ ಸಂದಾಯ ಮಾಡಬೇಕೆಂದಿದೆ. ಆದರೆ ಗ್ರಾಮ ಪಂಚಾಯತಿ ನೌಕರರ ಬೇಡಿಕೆಗಳ ಕುರಿತು ಮತ್ತೇನೂ ಉಲ್ಲೇಖ ಇಲ್ಲ. ಪಂಚಾಯತ್ ವಿಧೇಯಕದ ಪ್ರಕಾರ ತನಗಿರುವ ಅಧಿಕಾರವನ್ನು ಚಲಾಯಿಸಲೂ ಸರಕಾರ ತಯಾರಿಲ್ಲ. ವಿಧೇಯಕದಲ್ಲಿ ಸರಕಾರಕ್ಕೆ ಇಂಥ ಅಧಿಕಾರವಿದೆಂಬ ಅಂಶವೂ ಅಧಿಕಾರಿಗಳ ಗಮನಕ್ಕೆ ಬಂದಿಲ್ಲ. ಬೇಡಿಕೆಗಳ ಕುರಿತು ಮಂತ್ರಿಗಳ ಜೊತೆಯಲ್ಲಿ ಚರ್ಚೆ ನಡೆದಾಗ ನಾವೇ ಈ ಅಂಶವನ್ನು ಅಧಿಕಾರಿಗಳ ಗಮನಕ್ಕೆ ತರಬೇಕಾದಂತ ಪರಿಸ್ಥಿತಿ ಉಂಟಾಗಿತ್ತು.

ರಾಜ್ಯಮಟ್ಟದ ವೇತನ ಶ್ರೇಣಿ

1993 ನವೆಂಬರಿನಲ್ಲಿ ಮತ್ತೊಮ್ಮೆ ವಿಧಾನ ಸೌದ ಚಲೋ ಕಾರ್ಯಕ್ರಮ ಹಮ್ಮಿಕೊಂಡು ಆಮರಣ ಉಪವಾಸದ ನೋಟೀಸು ಕೊಡಲಾಯಿತು. ಆಗ ಪಂಚಾಯತ್ ರಾಜ್ ಮಂತ್ರಿಯಾಗಿದ್ದ ಎಂ.ವೈ.ಘೋರ್ಪಡೆಯವರು ರಾಜ್ಯಾದ್ಯಂತ ಏಕರೂಪದ ವೇತನ ಶ್ರೇಣಿ ಆಗಬೇಕೆಂಬ ನಮ್ಮ ಬೇಡಿಕೆಯನೊಪ್ಪಿಕೊಂಡು ಸರಕಾರದ ಮಾದರಿ ಗರಿಷ್ಟ ವೇತನ ಶ್ರೇಣಿಯಾಗಿ ರೂ 900, ರೂ 600, ರೂ 500 ಪ್ರಕಟಿಸಿದರು. ಗುಲ್ಬರ್ಗ ಬಿಜಾಪುರ ಬೀದರ್ ಜಿಲ್ಲೆಗಳ ಜಿಲ್ಲಾ ಪರಿಷತ್ತುಗಳು 960 ರೂ ,750, 500 ಕನಿಷ್ಟವೆಂದು ಪ್ರಕಟಿಸಿದಾಗ ಸರಕಾರದವರು ಅದಕ್ಕಿಂತ ಕಡಿಮೆ ಪ್ರಮಾಣ ಪ್ರಕಟಿಸಿದರೂ ರಾಜ್ಯಮಟ್ಟದಲ್ಲಿ ಒಂದು ವೇತನ ಶ್ರೇಣಿ ಬಂತಲ್ಲ ಎಂದು ಸಮಾಧಾನ ಪಡಬೇಕಾಯಿತು. ಇದರ ಲಾಭವನ್ನು ಹೆಚ್ಚಾಗಿ ಬಿಲ್ ಕಲೆಕ್ಟರರು ಪಡೆದಿದ್ದಾರೆ. ಆದರೆ ಪಂಪ ಅಪರೇಟರಿಗೆ ಮತ್ತು ಕಸಗುಡಿಸುವವರಿಗೆ ಅದರ ಲಾಭ ಲಭ್ಯವಾಗಿಲ್ಲ.

ಪಶ್ಚಿಮ ಬಂಗಾಲದ ಎಡರಂಗ ಸರಕಾರ ಮತ್ತು ಕೇರಳ ಸರಕಾರಗಳು ಅರ್ಥಪೂರ್ಣವಾಗಿ ಅಧಿಕಾರ ವಿಕೇಂದ್ರಕರಣವಾಗಬೇಕೆಂಬ ಉದ್ದೇಶದಿಂದಲೇ ಪಂಚಾಯತಿ ನೌಕರರಿಗೂ ರಾಜ್ಯ ಸರಕಾರಿ ನೌಕರರ ವೇತನ ರಜೆ, ಮೊದಲಾದ ಎಲ್ಲಾ ಸವಲತ್ತುಗಳನ್ನು ಕೊಡಮಾಡಿವೆ. ಹಾಗೆಯೇ ಸೇವಾ ನಿಯಮ ರಚಿಸಿದೆ. ಇದನ್ನು ಖಚಿತಪಡಿಸಲು ಸಿ.ಆರ್. ಭಟ್ ಕೇರಳಕ್ಕೆ ಹೋಗಿ ಬಂದರು. ಪಶ್ಚಿಮ ಬಂಗಾಲದಿಂದ ಪಂಚಾಯತಿ ನೌಕರರಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ತರಿಸಿ ಯೂನಿಯನ್ನಿನ ಹೆಸರಿನಲ್ಲಿ ಒಂದು ಪುಸ್ತಕವನ್ನು ಪ್ರಕಟಿಸಲಾಯಿತು. ನಮ್ಮ ಒತ್ತಾಯಕ್ಕೆ ಮಣಿದು ಎಂ.ಪಿ. ಪ್ರಕಾಶ್ ಅವರು ಪಂಚಾಯತ್ ರಾಜ್ ಡೈರೆಕ್ಟರ್ ಮತ್ತು ಸಿಪಿಐ(ಎಂ) ಶಾಸಕ ಶ್ರೀರಾಮ ರೆಡ್ಡಿ ಯವರನ್ನು ಪಶ್ಚಿಮ ಬಂಗಾಲಕ್ಕೂ, ಪಂಚಾಯತ್‌ರಾಜ್ ಕಾರ್ಯದರ್ಶಿಯಾದ ಶ್ರೀನಿವಾಸ ಮೂರ್ತಿಯವರನ್ನು ಕೇರಳಕ್ಕೂ ಕಳುಹಿಸಿ ಎಲ್ಲಾ ಮಾಹಿತಿ ಸಂಗ್ರಹಿಸಿದ ನಂತರ ನಮ್ಮ ಬೇಡಿಕೆಯಲ್ಲಿ ಅರ್ಥ ಇದೆಂಬುದನ್ನು ಮನಗಂಡು ಪಂಚಾಯತಿ ನೌಕರರು ಪಾರ್ಟ್ ಟೈಮ್ (ಅರೆಕಾಲಿಕ) ನೌಕರರೆಂಬ ಹುಚ್ಚು ತಿಳುವಳಿಕೆಯ ಕವಚವನ್ನು ತೆಗೆದ್ಸು ಸಂಬಳ ಹೆಚ್ಚಿಸಬೇಕು, ಸೇವಾ ನಿಯಮ ರಚಿಸಿ ನೌಕರರಿಗೆ ರಕ್ಷಣೆ ನೀಡಬೇಕೆಂಬ ಒಟ್ಟಭಿಪ್ರಾಯಕ್ಕೆ ಬರುವಂತೆ ತಿಳುವಳಿಕೆ ನೀಡುವಲ್ಲಿ ತಾವು ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದ್ದೇವೆ.

ಜನತಾದಳ ಅಧಿಕಾರಕ್ಕೆ ಬಂದ ನಂತರ 1995 ರಲ್ಲಿ ಬೆಂಗಳೂರು ಮತ್ತು ಭೀಮರಾಯನ ಗುಡಿಯಲ್ಲಿ ಸಾವಿರಾರು ಗ್ರಾಮಪಂಚಾಯತಿ ನೌಕರರು ಮುಖ್ಯಮಂತ್ರಿ ದೇವೇಗೌಡರ ನಿವಾಸದ ಮುಂದೆ ಮತಪ್ರದರ್ಶನ ನಡೆಸಿದರು. 1996 ರಲ್ಲಿ ಪುನ 6000 ನೌಕರರು ಬೆಂಗಳೂರು ಚಲೋ ಕಾರ್ಯಕ್ರಮ ನಡೆಸಿದರು. ಆಗ ಮಂತ್ರಿ ಎಂ.ಪಿ. ಪ್ರಕಾಶ ಅವರು ಮೇ 1996 ರ ರೊಳಗೆ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರು. ಆದರೆ ಸರಕಾರ ತಾನಿತ್ತ ಆಶ್ವಾಸನೆಯಂತೆ ವರ್ತಿಸದೆ ವಿಳಂಬ ನೀತಿ ಅನುಸರಿಸುತ್ತಿರುವುದನ್ನು ಪ್ರತಿಭಟಿಸಿ 1997 ರ ಫೆಬ್ರವರಿ 11,12,13 ರಂದು ಮುಖ್ಯಮಂತ್ರಿ ಜೆ.ಹೆಚ್. ಪಟೇಲ್, ಪಂಚಾಯತ್ ಮಂತ್ರಿ ಎಂ.ಪಿ.ಪ್ರಕಾಶ್, ಹಣಕಾಸು ಮಂತ್ರಿ ಸಿದ್ರಾಮಯ್ಯನವರ ಮನೆ ಮುಂದೆ ಧರಣಿ ನಡೆಸಲಾಯಿತು. ಆಗಲೇ ಸಿದ್ರಾಮಯ್ಯ ನವರು ಗ್ರಾಮ ಪಂಚಾಯತಿಗಳಿಗೆ ಅನುದಾನ ಹೆಚ್ಚಿಸುವ ಭರವಸೆ ನೀಡಿದ್ದರು. ಪಂಚಾಯತ್ ಮಂತ್ರಿ ಅದರ ಲಾಭ ಪಡೆಯಲಿಲ್ಲ. ಮಾತ್ರವಲ್ಲ ಪಂಚಾಯತ್ ನೌಕರರ ಬೇಡಿಕೆ ಕುರಿತು ಸುಳ್ಳಿನ ಕಂತೆ ಬಿಚ್ಚುತ್ತಾ ಹೋದರು.

2ನೇ ಸಮ್ಮೇಳನ ಮತ್ತು ನಂತರ

ಮುಂದಿನ ಕಾರ್ಯಕ್ರಮ ರೂಪಿಸಲು ಗುಲ್ಬರ್ಗಾದಲ್ಲಿ 2ನೇ ಸಮ್ಮೇಳನ ನಡೆಸಿ ಬೇಡಿಕೆಗಳಿಗೆ ನಿರ್ದಿಷ್ಟ ರೂಪ ನೀಡಿ, ಹೋರಾಟದ ದಾರಿ ನಿರ್ಧರಿಸಿತು.

ಗ್ರಾಮ ಪಂಚಾಯತ್‌ಗಳು ಸರಕಾರಿ ಸಂಸ್ಥೆಯಾದ್ದರಿಂದ ಪುರಸಭೆ ನೌಕರರಿಗೆ ಸಿಗುವಂತೆ ಎಲ್ಲಾ ಸೌಲಭ್ಯಗಳೂ ಪಂಚಾಯತಿ ನೌಕರರಿಗೂ ದೊರೆಯಬೇಕು. ಮಧ್ಯಂತರ ಪರಿಹಾರವಾಗಿ ಕನಿಷ್ಟ ರೂ. 900, ರೂ. 1200, ರೂ. 1000 ಶ್ರೇಣಿಯಲ್ಲಿ ವೇತನ ದೊರೆಯಬೇಕು ಮತ್ತಿತರ ಬೇಡಿಕೆಗಳ ಸಲುವಾಗಿ ಒತ್ತಾಯಿಸಲು 1997 ರ ಧರಣಿ ಪ್ರತಿಫಲ ನೀಡದಿದ್ದಾಗ 1998 ಮೇ 11 ರಿಂದ ಅನಿರ್ದಿಷ್ಟಕಾಲ ಧರಣಿ ಮತ್ತು 13 ರಿಂದ ಆಮರಣ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಯಿತು. ಆದರೆ ಕೊನೆಗಳಿಗೆಯಲ್ಲಿ ಮಂತ್ರಿಗಳು ಬೇಡಿಕೆಗಳ ಕುರಿತು ಚರ್ಚಿಸಲು 16.5.98 ದಿನಾಂಕವನ್ನು ಬರೆದು ತಿಳಿಸಿದ್ದರಿಂದ ಹೋರಾಟ ತಾತ್ಕಾಲಿಕವಾಗಿ ನಿಂತಿತು.

1996 ರಿಂದಲೂ ಮಂತ್ರಿ ಮತ್ತು ಅಧಿಕಾರಿಗಳನ್ನು ಸೇರಿಸಿ ಚರ್ಚೆ ನಡೆಯುತ್ತಲೇ ಇದೆ. 1998 ಮೇ ತಿಂಗಳಿಂದಂತೂ ನಡೆದ ಚರ್ಚೆ ಮಂತ್ರಿ ಮಹಾಶಯರಲ್ಲಿ ಮತ್ತು ಅಧಿಕಾರಿಗಳಲ್ಲಿ ಬಡ ಗ್ರಾಮ ಪಂಚಾಯತಿ ನೌಕರರ ಕುರಿತಿರುವ ತಪ್ಪು ಭಾವನೆಗಳನ್ನು ತೆಗೆದುಹಾಕಿ ಈಗಿರುವ ಗರಿಷ್ಟ ವೇತನದ ಬದಲಾಗಿ ಕನಿಷ್ಟ ರೂ. 1500, ರೂ. 1200, ರೂ. 900 ರಷ್ಟು ಅಥವಾ ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡುವ, ಜೀವ ವಿಮೆ ಜಾರಿಯಲ್ಲಿ ತರುವ, ಸೇವಾ ನಿಯಮ ಪ್ರಕಟಿಸುವ, ಕಾರ್ಯದರ್ಶಿ ಹುದ್ದೆಗೆ ಶೇ 40 ರಷ್ಟು ಮೀಸಲಿಡುವಂಥ ಒಟ್ಟಭಿಪ್ರಾಯಕ್ಕೆ ಬರುವಂತೆ ಮಾಡಲು ಸಾಧ್ಯವಾಗಿದೆ. ಯೂನಿಯನ್ ಮುಖಂಡರ ನಿರಂತರ ಪ್ರಯತ್ನ ಇದನ್ನು ಸಾಧಿಸಿದೆಯಾದರೂ ಕೂಡ ಪಂಚಾಯತ್ ಮಂತ್ರಿ ಎಂ.ಪಿ.ಪ್ರಕಾಶ್ ಅವರು ಈ ಅಭಿಪ್ರಾಯಗಳ ಕುರಿತು ಪತ್ರಿಕಾ ಹೇಳಿಕೆ ನೀಡಿದ್ದರೂ ಕೂಡ, ತಾವು ಒಪ್ಪಿಕೊಂಡಿರುವ ಕನಿಷ್ಟ ಬೇಡಿಕೆಗಳ ಕುರಿತು ನಿರ್ದಿಷ್ಟವಾದ ರಾಜಕೀಯ ನಿಲುಮೆ ತಳೆದು ಸರಕಾರದ ಗಜೆಟ್ಟಿನಲ್ಲಿ ಪ್ರಕಟಿಸುವ ಧೈರ್ಯ ತೋರಿಸುತ್ತಿಲ್ಲ.

1985 ರಿಂದ ರೂಪುಗೊಂಡ ನಮ್ಮ ಸಂಘಟನೆ ಕೇರಳ-ಪಶ್ಚಿಮ ಬಂಗಾಳದ ಗ್ರಾ.ಪಂ. ನೌಕರರಂತೆಯೇ ಇಲ್ಲಿಯ ನೌಕರರನ್ನೂ ಪರಿಗಣಿಸುವಂತೆ ಮಾಡಲು ಸಾಧ್ಯವಾಗದಿದ್ದರೂ ಈಗಿನ ಪರಿಸ್ಥಿತಿಯಲ್ಲಿ ಮಧ್ಯಂತರ ಪರಿಹಾರ ಒದಗಿಸುವುದರಲ್ಲಿ ಯಶಸ್ವಿಯಾಗಿದೆ.

ದುಡಿಯುವ ಜನತೆಯ ಕುರಿತು ನೀತಿ ನಿರೂಪಣೆ, ಧ್ಯೇಯ, ಧೋರಣೆಗಳಿಲ್ಲದಂಥ ಸರಕಾರ ಇದಾಗಿದೆ. ಈ ಸರಕಾರವನ್ನು ಮಣಿಸಲು ಬಲಿಷ್ಟವಾದ ಸಂಘಟನೆ ಅಗತ್ಯ. ರಾಜ್ಯದಲ್ಲಿರುವ 6000 ಗ್ರಾಮ ಪಂಚಾಯತಿಗಳಲ್ಲಿಯ ನೌಕರರು ಸಂಘ ಕಟ್ಟಬೇಕು. ಸಂಘ ಕರೆ ಕೊಟ್ಟಾಗ 6000 ಪಂಚಾಯತಿಗಳಲ್ಲೂ ಮುಷ್ಕರ ನಡೆದಾಗ, ಮುಖ್ಯಮಂತ್ರಿಯವರ ಕಾರು ಡ್ರೈವರನೂ ಮುಷ್ಕರದಲ್ಲಿ ಭಾಗವಹಿಸಿದ್ದ ಎಂಬುದನ್ನು ನೆನಪಿಡಬೇಕು. ಆ ರೀತಿಯ ಐಕ್ಯ, ಶಿಸ್ತು ಬದ್ಧ ಹೋರಾಟಕ್ಕೆ ತಯಾರಾಗಬೇಕು. ಆಗ ಮಾತ್ರ ಕೇರಳ, ಪಶ್ಚಿಮ ಬಂಗಾಳದ ನೌಕರರಂತೆ ನಾವೂ ಮನುಷ್ಯರಾಗಿ ಬಾಳಲು ಸಾಧ್ಯವಾದೀತು. ಅಂಥ ಬಲಿಷ್ಟವಾದ ಸಂಘಟನೆ ಕಟ್ಟಲು ಮುಂದಾಗಬೇಕು. ಧೀರ ಹೋರಾಟ ನಡೆಸಿ ಬೇಡಿಕೆಗಳನ್ನು ಪಡೆಯಬೇಕು.

ಕ್ಯಾಪ್ಟನ್ ಜನಾರ್ಧನ ನಾಯಕ್ ಇನ್ನಿಲ್ಲ

ಸಿ.ನಂಜುಂಡಪ್ಪ

ಮಂಗಳೂರು ಮೂಡುಬಿದರೆ ರಸ್ತೆಯಲ್ಲಿ ಮಿಜಾರು ಎಡ ಮೇಲ್ಪದಿಯ ಒಣಗಿದ ಗದ್ದೆಯ ಮೈದಾನವೊಂದರಲ್ಲಿ 1969 ಮಾರ್ಚ್‌ತಿಂಗಳಿನ ಒಂದು ದಿವಸ ಲೆಫ್ಟ್-ರೈಟ್, ಲೆಫ್ಟ್-ರೈಟ್, ಲೆಫ್ಟ್ -ರೈಟ್ ಅಟೆಂಷನ್-ಸ್ಟಾಂಡ್-ಅಟ್‌ಈಸ್ ಕೇಳುತ್ತಿದ್ದಿತ್ತು. ಸಮವಸ್ತ್ರ ಧರಿಸಿದ ಎತ್ತರದ ವ್ಯಕ್ತಿಯೊಬ್ಬರ ಬಾಯಿಂದ ಈ ನಿರ್ದೇಶನಗಳು ಹೊರ ಹೊಮ್ಮುತ್ತಿದ್ದುವು. ಆ ವ್ಯಕ್ತಿಯೇ ಕ್ಯಾಪ್ಟನ್ ಯು. ಜನಾರ್ಧನ ನಾಯಕ್. ಆಗ ಸ್ವಯಂಸೇವಕರ ಶಿಬಿರವೊಂದು ಅಲ್ಲಿ ನಡೆಯುತ್ತಿದ್ದಿತು. ಅನಂತರ ಕೆಲವು ಶಿಬಿರಗಳಲ್ಲಿ ಅವರು ಆ ಪಾತ್ರವನ್ನು ವಹಿಸಿದ್ದುದನ್ನು ನಾನು ಕಂಡಿದ್ದೆ.

ಬೋಳಾರದ ಮುಳಿಹಿತ್ಲುವಿನಲ್ಲಿರುವ ಎಸ್.ಕೆ. ಟೈಲ್‌ವರ್ಕರ್ಸ್ ಯೂನಿಯನ್ ಆಫೀಸಿನಲ್ಲಿ ಒಂದು ದಿವಸ ಪಕ್ಷದ ರಾಜ್ಯ ಸಮಿತಿಯ ಅಂದಿನ ಕಾರ್ಯದರ್ಶಿ ನಾಯಕ್‌ರನ್ನು ನನಗೆ ಪರಿಚಯ ಮಾಡಿಸುತ್ತಾ "ನೋಡಿ ಸಿ.ಎನ್. ಇವರು ಪಾರ್ಟಿಯ ಮಂಗಳೂರು ತಾಲೂಕು ಸಮಿತಿಯ ಕಾರ್ಯದರ್ಶಿ ಯು. ಜನಾರ್ಧನನಾಯಕ್, ಇವರಿಗೆ ಒಬ್ಬ ಒಳ್ಳೆಯ ಖಜಾಂಚಿ ಬೇಕಾಗಿದೆ ನೋಡಿ ಎಂದರು. ಅಂದು ಜನಾರ್ಧನ ನಾಯಕರ ವ್ಯಕ್ತಿತ್ವವು ಕಳಾಪೂರಿತವಾಗಿದ್ದಿತು. ಸ್ವಲ್ಪ ಸಮಯದ ಹಿಂದೆ ತಾಲೂಕು ಅಭಿವೃದ್ಧಿ ಮಂಡಳಿಯ ಚುನಾವಣೆ ನಡೆದು ಉಳ್ಳಾಲ ಕ್ಷೇತ್ರದಿಂದ ಅವರು ಗೆದ್ದಿದ್ದರು.

ಹನ್ನೆರಡು ವರ್ಷಗಳ ಕಾಲ ನಾನೂ ನಾಯಕರೂ ಒಂದೇ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದೆವು, ಕೆಲವು ವರ್ಷಗಳು ಒಂದೇ ರಾಜ್ಯ ಸಮಿತಿಯ ಸದಸ್ಯರಾಗಿದ್ದೆವು. ಮತ್ತೆ ಈ ವರ್ಷ ಒಂದೇ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿದ್ದೆವು.

ಈ ಮೂವತ್ತು ವರ್ಷಗಳಲ್ಲಿ ನಾನು ಎಂದೂ ಜನಾರ್ಧನ ನಾಯಕರನ್ನು ದೂರಿಲ್ಲ. ಇತರರು ದೂರುವ ಸಂದರ್ಭದಲ್ಲಿ ಕಿವಿಗೊಡಲಿಲ್ಲ.

ಅವರು ಒಂದು ಕಾಡುಕೊಂಕಣಿ ಕುಟುಂಬದಲ್ಲಿ ಜನಿಸಿ, ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯಲಾಗದೆ ಬೀಡಿ ಕಾರ್ಮಿಕನಾಗಿ ಚಳುವಳಿ ಹೋರಾಟಗಳಲ್ಲಿ ತೊಡಗಿ ದಿನನಿತ್ಯ ಪತ್ರಿಕೆಗಳನ್ನು ಕನ್ನಡ ಪುಸ್ತಕಗಳನ್ನು ಓದುತ್ತಾ ವರ್ಗಪ್ರಜ್ಞೆ ರಾಜಕೀಯ ಪ್ರಜ್ಞೆಯನ್ನು ಗಳಿಸಿದವರು.

ಹಿರಿಯ ಮುಖಂಡರಾದ ಎ.ಕೆ.ಗೋಪಾಲನ್, ಇ.ಎಂ.ಎಸ್. ನಂಬೂದರಿಪಾದ್‌ರು ಗುರುತಿಸುವ ಕಾರ್ಯಕರ್ತನಾಗಿ ನಾಯಕ್ ಬೆಳೆದರು.

ಜನಾರ್ಧನ ನಾಯಕ್ ಸ್ನೇಹಪ್ರಿಯ ಮತ್ತು ಭಕ್ಷಣಪ್ರಿಯ ಸಂಗಾತಿ.

ಕೋಟೆಕಾರ್ ಸರ್ಕಲಿನಲ್ಲಿ ಅವರು ಅದೆಷ್ಟು ಯುವಕರನ್ನು ಪಕ್ಷದ ಹತ್ತಿರ ತಂದಿದ್ದಾರೆ ಎಂದು ಲೆಕ್ಕ ಹಾಕಲು ಸಾಧ್ಯವಿಲ್ಲ. ನನ್ನನು ಪಾರ್ಟಿಗೆ ತಂದವರು ಎಂದೋ, ಪಾರ್ಟಿಯ ಹತ್ತಿರ ತಂದವರು ಜನಾರ್ಧನ ನಾಯಕ್ ಎಂದೋ ಕೆಲವರು ನನಗೆ ಹೇಳಿದ್ದಾರೆ.

ಉಳ್ಳಾಲದ ಅಲ್ಪಸಂಖ್ಯಾತರ ನಡುವೆ ಅವರು ಜನಪ್ರಿಯರಾಗಿದ್ದರು. ಕೊಪ್ಪ, ಬಾಳೆಹೊನ್ನೂರು, ಕಳಸ, ಮೂಡಿಗೆರೆ, ಚಿಕ್ಕಮಗಳೂರು, ಸಕಲೇಶಪುರ ಮೊದಲಾದ ಮಲೆನಾಡು ಪ್ರದೇಶಗಳಲ್ಲಿ ವ್ಯಾಪಾರ ಮಾಡುವ, ಕಾಂಟ್ರ್ಯಾಕ್ಟ್ ಮಾಡುವ ಉಳ್ಳಾಲದ ಬ್ಯಾರಿಗಳ ಬಾಯಲ್ಲಿ ಜನಾರ್ಧನ ನಾಯಕ್‌ರ ಬಗ್ಗೆ ಕೇಳಿದ್ದೇನೆ, ಸಂಘಟನೆ, ಚಳುವಳಿಯ ಕೆಲಸಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಅಂತಹವರು ನೆರವಾಗಿದ್ದಾರೆ.

ಜನಾರ್ಧನನಾಯಕರು ಜಾತಾಗಳಲ್ಲಿ ಮಂಗಳೂರಿಂದ ಬೆಂಗಳೂರಿಗೆ ನಡೆದಿದ್ದಾರೆ.

1962 ವಿಧಾನಸಭಾ ಚುನಾವಣೆಯಲ್ಲಿ ಮಂಗಳೂರು -2 ಕ್ಷೇತ್ರದಿಂದ ಸಿಪಿಐ ಉಮೇದುವಾರರಾಗಿ ಎ.ಕೃಷ್ಣಶೆಟ್ಟಿ ಗೆದ್ದರು. 1983 ರ ವಿಧಾನಸಭಾ ಚುನಾವಣೆಯಲ್ಲಿ ಉಳ್ಳಾಲ ಕ್ಷೇತ್ರದಿಂದ ಪಿ. ರಾಮಚಂದ್ರರಾವ್ ಗೆದ್ದರು. ಉಳ್ಳಾಲ ಕ್ಷೇತ್ರದಲ್ಲಿ 40 ಕ್ಕಿಂತಲೂ ಹೆಚ್ಚು ಸಿಪಿಐ(ಎಂ) ಗ್ರಾಮ ಪಂಚಾಯತ್ ಸದಸ್ಯರಿದ್ದಾರೆ, ಇವೆಲ್ಲ ಸಾಧನೆಗಳ ಹಿಂದೆ ಯು. ಜನಾರ್ಧನ ನಾಯಕ್‌ರ ಕೊಡುಗೆಯೂ ಇದೆ.

ಕಾರ್ಮಿಕನಾಗಿದ್ದು ಪಕ್ಷದ ಧುರೀಣನಾಗಿ ಬೆಳೆದು ಬಂದಿದ್ದ ಒಬ್ಬ ಯೋಧ, ಕಾಂ|| ಯು ಜನಾರ್ಧನ ನಾಯಕ್ ಡಿಸೆಂಬರ್ 9 ರ ರಾತ್ರಿ ನಿಧನರಾದುದು ರಾಜ್ಯದಲ್ಲಿ ಸಿಪಿಐ(ಎಂ)ಗೆ ಎಡಪಂಥೀಯ ಚಳುವಳಿಗೆ ಮತ್ತು ಪ್ರಜಾಪ್ರಭುತ್ವ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ○

ಸುಳ್ಳುಗಳ ಮೇಲೆ ಸುಳ್ಳುಗಳು ವಿಕೃತಿಗಳ ಮೇಲೆ ವಿಕೃತಿಗಳು

ಇವು ಅಡ್ವಾಣಿಯವರ ಆಜನ್ಮ ಪ್ರವೃತ್ತಿಯೇ?


ಇದು ಇತ್ತೀಚಿನ ಅಡ್ವಾಣಿಯವರ ಹೇಳಿಕೆಗಳನ್ನು ನೋಡುವಾಗ ಯಾರಿಗಾದರೂ ಬರುವ ಸಂದೇಹ. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಈ ಬಗ್ಗೆ ಪಕ್ಷದ ಕೇಂದ್ರ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದ ಒಂದು ಲೇಖನದಲ್ಲಿ 'ಅಡ್ವಾಣಿಯವರು ವಿಶ್ವಾಸಘಾತುಕತನದಲ್ಲಿ ಪ್ರಾವಿಣ್ಯತೆ ಸಾಧಿಸಿದಂತಿದೆ' ಎಂದಿದ್ದಾರೆ. ಈ ಸಂಬಂಧದಲ್ಲಿ ಅವರು ನೀಡಿರುವ ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ.

'ಬಾಬ್ರಿ ಮಸೀದಿಯ ಧ್ವಂಸ ನನ್ನನ್ನು ವೈಯುಕ್ತಿಕವಾಗಿ ನಡುಗಿಸಿಬಿಟ್ಟಿದೆ. ಅದು ದುರದೃಷ್ಟಕರ, ಹಾಗಾಗಬಾರದಿತ್ತು' - ಇಂದು ಅಲ್ಪಸಂಖ್ಯಾತರ ಮೇಲೆ ಧಾಳಿಗಳನ್ನು ಕುರಿತಂತೆ ಸಂಸತ್ತಿನಲ್ಲಿ ನಡೆದ ಚರ್ಚೆಗೆ ಉತ್ತರ ಕೊಡುತ್ತಾ ಅಡ್ವಾಣಿಯವರು ಹೇಳಿರುವ ಮಾತು.

ಆದರೆ ಒಂದು ವರ್ಷದ ಕೆಳಗೆ ಸೆಪ್ಟೆಂಬರ್ 9, 1997 ರಂದು ಬಾಬ್ರಿ ಮಸೀದಿ ಧ್ವಂಸದ ಕ್ರಿಮಿನಲ್ ಪಿತೂರಿ ಮೊಕದ್ದಮೆಯ ವಿಚಾರಣೆ ನಡೆಸುತ್ತಿರುವ ನ್ಯಾಯಾಲಯ ಹಾಕಿದ ಚಾರ್ಜ್‌ಶೀಟ್‌ನ್ನು ಗಮನಿಸಿ -

"5.12.92 ರಂದು ಶ್ರೀವಿನಯ್ ಕಟಿಯಾರ್‌ರವರ ಮನೆಯಲ್ಲಿ ಒಂದು ಗುಪ್ತ ಸಭೆ ನಡೆಯಿತು. ಇದರಲ್ಲಿ ಶ್ರೀಲಾಲ್‌ಕೃಷ್ಣ ಅಡ್ವಾಣಿ, ಪವನ್ ಕುಮಾರ್ ಪಾಂಡೆ ಭಾಗವಹಿಸಿದ್ದರು. ವಿವಾದಿತ ಕಟ್ಟಡವನ್ನು ಧ್ವಂಸ ಮಾಡುವ ಅಂತಿಮ ನಿರ್ಣಯವನ್ನು ಕೈಗೊಳ್ಳಲಾಯಿತು. ರಚನೆಯ ಮೇಲೆ ಒಂದು ನಿರ್ಬಂಧವಿದೆ, ಧ್ವಂಸದ ಮೇಲೆ ನಿರ್ಬಂಧವಿಲ್ಲ ಎಂಬುದು ಅವರ ತರ್ಕ. ಆಪಾದನೆ ಪಟ್ಟಿಯಲ್ಲಿ ಸಂಖ್ಯೆ 1 ರಿಂದ 38 ರವರೆಗೆ ನಮೂದಿಸಿರುವ ಆಪಾದಿತರು 6.12.92 ರಂದು ರಾಮಜನ್ಮ ಭೂಮಿ/ಬಾಬ್ರಿ ಮಸೀದಿ ಬಳಿ ನೆರೆದರು. ಶ್ರೀ ಲಾಲ್‌ಕೃಷ್ಣ ಅಡ್ವಾಣಿ "ಇಂದು ಕರಸೇವಾದ ಕೊನೆಯ ದಿನ. ಕರಸೇವಕರು ಕೊನೆಯ ಕರಸೇವೆ ಮಾಡುತ್ತಾರೆ" ಎಂದು ವಿವಾದಿತ ಕಟ್ಟಡದ ಧ್ವಂಸದ ಮೊದಲು ಸ್ಪಷ್ಟವಾಗಿ ಹೇಳಿದರು. ಒಂದು ಕೇಂದ್ರೀಯ ಪಡೆ ಫೈಜಾಬಾದಿನಿಂದ ಅಯೋಧ್ಯೆಗೆ ಬರುತ್ತಿದೆ ಎಂದು ತಿಳಿದಾಗ ಅದು ರಾಮಜನ್ಮಭೂಮಿ ತಲುಪದಂತೆ ರಾಷ್ಟ್ರೀಯ ಹೆದ್ದಾರಿಯನ್ನು ಅಡ್ಡಗಟ್ಟಬೇಕು ಎಂದು ಸಾರ್ವಜನಿಕರಿಗೆ ಹೇಳಿದರು. ವಿವಾದಿತ ಕಟ್ಟಡವನ್ನು ಬೀಳಿಸುತ್ತಿದ್ದಾಗ ಶ್ರೀ ಅಡ್ವಾಣಿ ಕಟ್ಟಡವನ್ನು ಪೂರ್ತಿಯಾಗಿ ಬೀಳಿಸುವವರೆಗೆ ರಾಜೀನಾಮೆ ನೀಡದಂತೆ ಕಲ್ಯಾಣ್‌ಸಿಂಗ್‌ಗೆ ಹೇಳಿದರು ಎಂದು ಫಿರ್ಯಾದಿ ವಾದ ಮಾಡಿದ್ದಾರೆ........

.... ಈ ಹಿನ್ನೆಲೆಯಲ್ಲಿ ಶ್ರೀ ಲಾಲ್‌ಕೃಷ್ಣ ಅಡ್ವಾಣಿ ಮತ್ತು ಶ್ರೀ ಮುರುಳಿ ಮನೋಹರ ಜೋಶಿ 1.12.92 ರಂದು ನವದೆಹಲಿಯಿಂದ ಅಯೋಧ್ಯೆಯತ್ತ ವಾರಣಾಸಿ ಮತ್ತು ಮಥುರಾದ ಮೂಲಕ ಹೊರಟರು. 1.12.92 ರಂದು ಕಾನಪುರದಲ್ಲಿ ಶ್ರೀ ಅಡ್ವಾಣಿ ಕರಸೇವೆಯೆಂದರೆ ಭಜನೆ- ಕೀರ್ತನೆಯಲ್ಲ, ಅದರರ್ಥ ರಾಮ ಮಂದಿರದ ಕೆಲಸ ಆರಂಭಿಸುವ ದೆಂದರು. ಡಾ. ಜೋಷಿ ಕೇಂದ್ರೀಯ ಪಡೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಹೇಳಿದರು. ರಾಮಮಂದಿರ ಕಟ್ಟುವ ದಾರಿಯಲ್ಲಿ ಬರುವ ಯಾವುದೇ ಅಡಚಣೆ ಯನ್ನು ತಮ್ಮ ಪಕ್ಷ ಎದುರಿಸುವುದಾಗಿ ಅವರು ಹೇಳಿದರು.



2.12.92 ರಂದು ಶ್ರೀ ಅಡ್ವಾಣಿ ವಾರಣಾಸಿಯಲ್ಲಿ ರಾಜ್ಯ ಸರಕಾರ ಕರಸೇವಕರ ಮೇಲೆ ಯಾವುದೇ ಬಲ ಪ್ರಯೋಗ ಮಾಡುವುದಿಲ್ಲಾ ಎಂದರು. ಅದೇ ವೇಳೆಗೆ ಸಾಧ್ವಿ ರಿತಾಂಬರಾ ಬಾಬ್ರಿ ಮಸೀದಿ ಒಂದು ಘಂದಿರ ಎಂದು ನಾಗಪುರ, ಬಾಲಾಹರ್ ಮತ್ತು ವಾರ್ಧಾದಲ್ಲಿ ಹೇಳಿದರು. ಅಲ್ಲಿ ಹೋರಾಟದಿಂದ ಒಂದು ಮಂದಿರ ಕಟ್ಟಲಾಗುವುದು ಎಂದರು. ಕರಸೇವಕರು ಅಯೋಧ್ಯೆಗೆ ಮಂದಿರ ಕಟ್ಟಲು ತಲುಪಬೇಕು ಎಂದರು".................

.... ನಮ್ಮ ವರ್ಣನೆಯಿಂದ ಪ್ರಸ್ತುತ ಮೊಕದ್ದಮೆಯಲ್ಲಿ ರಾಮಜನ್ಮ ಭೂಮಿ/ಬಾಬ್ರಿ ಮಸೀದಿಯ ವಿವಾದಿತ ಕಟ್ಟಡವನ್ನು ಧ್ವಂಸ ಮಾಡುವ ಒಂದು ಕ್ರಿಮಿನಲ್ ಪಿತೂರಿಯನ್ನು 1990 ರ ಆರಂಭದಲ್ಲಿ ಆರಂಭಿಸಲಾಯಿತು, 6.12.92 ರಂದು ಅದನ್ನು ಪೂರ್ಣಗೊಳಿಸಲಾಯಿತು ಎಂಬ ತೀರ್ಮಾನಕ್ಕೆ ಬರಲಾಗಿದೆ. ಶ್ರೀ ಲಾಲ್‌ಕೃಷ್ಣ ಅಡ್ವಾಣಿ ಮತ್ತಿತರರು ವಿಭಿನ್ನ ಸಮಯಗಳಲ್ಲಿ ವಿಭಿನ್ನ ಸ್ಥಳಗಳಲ್ಲಿ ವಿವಾದಿತ ಸ್ಥಳವನ್ನು ಧ್ವಂಸ ಮಾಡುವ ಕ್ರಿಮಿನಲ್ ಪಿತೂರಿಯನ್ನು ನಡೆಸಿದರು. ಆದ್ದರಿಂದ ಶ್ರೀ ಬಾಳಾ ಸಾಹೇಬ್ ಠಾಕ್ರೆ, ಶ್ರೀ ಲಾಲ್ ಕೃಷ್ಣ ಅಡ್ವಾಣಿ, ಶ್ರೀ ಕಲ್ಯಾಣ ಸಿಂಗ್, ಶ್ರೀ ವಿನಯ್ ಕಟಿಯಾರ್.... ಮೇಲೆ ಆಪಾದನೆ ಹಾಕಲು ಒಂದು ಮೊಕದ್ದಮೆ ಮೇಲ್ನೋಟಕ್ಕೇ ಇದೆಯೆಂದು ನನಗೆ ಕಾಣುತ್ತದೆ"

ಇದು ನ್ಯಾಯಾಲಯದ ಟಿಪ್ಪಣಿ. ಇನ್ನು 'ಮಂದಿರ್ ವಹೀ ಬನಾಯೇಗ' ಎಂದು ಕಿರುಚುತ್ತಾ ಸಾಗಿದ್ದ ಅಡ್ವಾಣಿಯವರ ರಕ್ತಸಿಕ್ತ 'ರಥಯಾತ್ರೆ'ಯ ಬಗ್ಗೆಯಂತೂ ಎಲ್ಲರಿಗೂ ತಿಳಿದಿದೆ. ಇಂತಹವರು ಸಂಸತ್ತಿನಲ್ಲಿ ಈ ಘಟನೆ 'ನನ್ನನ್ನು ನಡುಗಿಸಿ ಬಿಟ್ಟಿತು' ಎಂದು ಹೇಳಿದರೆ ಯಾರು ನಂಬಲು ಸಾಧ್ಯ?

✓✓✓

ಸಂಸತ್ತಿನಲ್ಲಿ ನಡೆದ ಈ ಚರ್ಚೆಯ ಮುಖ್ಯ ಅಂಶವಿದ್ದದ್ದು ಅಲ್ಪಸಂಖ್ಯಾತರ ಮೇಲೆ ವಿಶೇಷವಾಗಿ ಕ್ರಿಶ್ಚಿಯನ್ನರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳು. ಜಾತ್ಯಾತೀತತೆ ನಮ್ಮ ಸಂವಿಧಾನದ ಮೂಲಭೂತ ಅಂಶ ಎಂಬುದನ್ನು ಒಪ್ಪುವ ಎಲ್ಲಾ ಪಕ್ಷಗಳ ಸದಸ್ಯರೂ ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರಕಾರ ಇದಕ್ಕೆ ಕಾರಣ ಎಂದರು - ವಿಶೇಷವಾಗಿ ಗುಜರಾತಿನ ಘಟನೆಗಳನ್ನು ಉಲ್ಲೇಖಿಸುತ್ತಾ.

ಅಕ್ಟೋಬರ್ 8 ರಂದು ಸ್ವತಃ ಗುಜರಾತಿನ ಪೋಲೀಸ್ ಮಹಾ ನಿರ್ದೇಶಕರು ಏನು ಹೇಳಿದ್ದರು ನೋಡಿ...'ಘಟನಾ ಕ್ರಮದಿಂದ ಒಂದು ಅಂಶ ಸ್ಪಷ್ಟವಾಗಿದೆ. ವಿಶ್ವಹಿಂದೂ ಪರಿಷತ್ ಮತ್ತು ಭಜರಂಗ ದಳದ ಕಾರ್ಯಕರ್ತರು ಕಾನೂನನ್ನು ತಮ್ಮ ಕೈಗೆ ತಗೊಂಡಿದ್ದಾರೆ. ಇದು ಗುಜರಾತಿನಲ್ಲಿ ಶಾಂತಿಗೆ ಒಂದು ಗಂಭೀರ ಬೆದರಿಕೆ. ಹೆಚ್ಚಿನ ಧಾಳಿಗಳು ಈ ಸಂಘಟನೆಗಳು ಮತಾಂತರ (ಈ ಕ್ರಿಶ್ಚಿಯನ್ ಮಿಶನರಿಗಳು) ನಡೆಸಿದ್ದಾರೆಂದು, ಬಲವಂತದಿಂದ ಅವರು ಧಾರ್ಮಿಕ ಮದುವೆಗಳನ್ನು ನಡೆಸಿದ್ದಾರೆಂದು ಎಬ್ಬಿಸಿದ ಭಾವೋದ್ರೇಕದಿಂದ ನಡೆದಿವೆ. .... ನಮ್ಮ ತನಿಖೆಗಳ ಪ್ರಕಾರ ಹೆಚ್ಚಿನ ಸಂದರ್ಭದಲ್ಲಿ ಈ ಆಪಾದನೆಗಳು ಬುಡವಿಲ್ಲದ್ದು"

ಇದರ ನಂತರವೂ ಕೇಂದ್ರ ಗೃಹಮಂತ್ರಿ ಅಡ್ವಾಣಿ ಹೇಳಿದರು - "ಗುಜರಾತಿನಲ್ಲಿ ಕಾನೂನು - ವ್ಯವಸ್ಥೆ ಸಮಸ್ಯೆಯಿಲ್ಲ'. ಇದಾದ ಮೂರು ದಿನಗಳ ನಂತರ ಮತ್ತೆ ಗುಜರಾತಿನ ಡಿ.ಜಿ.ಪಿ. ಹೇಳಿದರು - 'ಕಳೆದ ಕೆಲವು ತಿಂಗಳಲ್ಲಿ ಕೋಮುವಾದಿ ಹಿಂಸಾಚಾರ ಹಲವು ಪಟ್ಟು ಹೆಚ್ಚಿದೆ. ಇತ್ತೀಚೆಗೆ 26% ರಷ್ಟು ಅಪರಾಧ ದರ ಹೆಚ್ಚಿದೆ. ಸರಾಸರಿಯಾಗಿ ರಾಜ್ಯದಲ್ಲಿ ಪ್ರತಿದಿನ 39 ಕೊಲೆ, ಬಲಾತ್ಕಾರ ಮತ್ತು ಡಕಾಯತಿಗಳಂತಹ ಗಂಭೀರ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದೆ' ಎಂದರು.

ಯಾರನ್ನು ನಂಬೋಣ? 'ರಥಯಾತ್ರೆ'ಯ ಅಡ್ವಾಣಿಯವರನ್ನೇ ಅಥವಾ ಗುಜರಾತಿನ ಡಿ.ಜಿ.ಪಿ. ಯನ್ನೋ. ಅದಿರಲಿ, ಇದೇ ವಾರ ಗುಜರಾತಿಗೆ ಭೇಟಿ ನೀಡಿದ ಅಡ್ವಾಣಿಯವರ ಕೈಕೆಳಗಿರುವ ಇಲಾಖೆಯ ಒಂದು ಅಧ್ಯಯನ ತಂಡ ಕೂಡಾ ಗುಜರಾತಿನ ಬಿಜೆಪಿ ಸರಕಾರ ಕೋಮುಗಲಭೆ ತಡೆಯುವಲ್ಲಿ ವಿಫಲವಾಗಿದೆ ಎಂದು ಹೇಳಿದೆ. ಈಗ ಅಡ್ವಾಣಿಯವರು ಏನನ್ನುತ್ತಾರೆ!

✓✓✓

ಅಡ್ವಾಣಿಯವರು ಮತ್ತೆ-ಮತ್ತೆ ಈ ಪ್ರವೃತ್ತಿ ಏಕೆ ತೋರಿಸುತ್ತಾರೆ. ಇದಕ್ಕೆ ಕಾರಣ ಅವರ 'ಹಿಂದೂರಾಷ್ಟ್ರ' ದ ಅನಿಷ್ಟಕಾರಿ ಸಿದ್ಧಾಂತ ಎನ್ನುತ್ತಾರೆ ಕಾ. ಸೀತಾರಾಂ ಯೆಚೂರಿ. ಈ ಸಿದ್ಧಾಂತದಿಂದಾಗಿ ಅವರು ಅಮಾನವೀಯ ಅಪರಾಧಗಳನ್ನು ಸಮರ್ಥಿಸಿಕೊಳ್ಳಬೇಕಾಗಿ ಬಂದಿದೆ ಹಾಗೂ ಐತಿಹಾಸಿಕ ವಾಸ್ತವಗಳನ್ನು ತಿರುಚಬೇಕಾಗಿ ಬಂದಿದೆ. ಒಂದೆಡೆ 'ಸರಸ್ವತಿ ವಂದನಾ'ವನ್ನು ಸಮರ್ಥಿಸುತ್ತಾ ಇನ್ನೊಂದೆಡೆ ದೇಶದ ಅಸ್ತಿತ್ವವನ್ನು ನಕಾರಿಸುವ ಚಾರ್ವಾಕ ಪಂಥವೂ ಭಾರತೀಯ ಪರಂಪರೆಯ ಭಾಗ ಎಂದು ಸಂಸತ್ತಿನ ತನ್ನ ಭಾಷಣದಲ್ಲಿ ಅಡ್ವಾಣಿ ಒಪ್ಪಿಕೊಂಡರು. ಮತ್ತೊಂದೆಡೆ ಬೌದ್ಧ ಧರ್ಮ ಒಂದು ಪ್ರತ್ಯೇಕ ಧರ್ಮವಲ್ಲ, ಹಿಂದೂ ಧರ್ಮದ ಭಾಗ ಎಂಬ ಹೇಯ ಹೇಳಿಕೆಯನ್ನು ನೀಡಿದರು. ಹೀಗೆಲ್ಲಾ ಹೇಳುವಂತೆ ಮಾಡುವ ಅವರ 'ಹಿಂದೂ ರಾಷ್ಟ್ರ' ಸಿದ್ಧಾಂತ ನಿಜವಾದ ಹಿಂದೂ ಧಾರ್ಮಿಕ ಅಭಿಪ್ರಾಯಕ್ಕೆ ಹೇಗೆ ತದ್ವಿರುದ್ಧವಾಗಿದೆ ಎನ್ನುವುದು ಸ್ವಾಮಿ ವಿವೇಕಾನಂದರ ಈ ಕೆಲವು ಉದ್ಗಾರಗಳಿಂದ ಸ್ಪಷ್ಟವಾಗುತ್ತದೆ ಎನ್ನುತ್ತಾರೆ ಸೀತಾರಾಂ ಯೆಚೂರಿ.

- "ಬೌದ್ಧ ಕ್ರಾಂತಿಯಿಲ್ಲದೆ ಕೋಟ್ಯಾಂತರ ಕೆಳಜಾತಿಯ ಜನಗಳು ಪ್ರಭಾವೀ ಮೇಲ್ಜಾತಿಗಳ ಹಿಂಸಾತ್ಮಕ ದಬ್ಬಾಳಿಕೆ ಹಾಗೂ ವಿಮೋಚನೆ ನೀಡಲು ಬೇರೇನಿತ್ತು?" (ವಿವೇಕಾನಂದರ ಕೃತಿಗಳು ಸಂ. 4 - ಪುಟ 462)
- *"ಇಸ್ಲಾಮ್ ಜನಸಮೂಹಗಳಿಗೆ ಒಂದು ಸಂದೇಶವಾಗಿ ಬಂತು ... ಸಮಾನತೆಯ ಮೊದಲ ಸಂದೇಶವಾಗಿ ಬಂತು. ಇರುವುದು ಒಂದೇ ಧರ್ಮ - ಅದು ಪ್ರೀತಿ. ಕುಲ, ಜನಾಂಗ, ಬಣ್ಣ(ಅಥವಾ) ಬೇರಾವುದೇ ಪ್ರಶ್ನೆಯಿಲ್ಲ.* (ಸಂಪುಟ 1, ಪುಟ 483)
- *"ನನ್ನ ಅನುಭವವೆಂದರೆ ಯಾವುದಾದರೂ ಧರ್ಮ ಸಮಾನತೆಯನ್ನು ಮೆಚ್ಚತಕ್ಕ ರೀತಿಯಲ್ಲಿ ಕಂಡಿದ್ದರೆ ಅದು ಇಸ್ಲಾಂ ಧರ್ಮ ಮಾತ್ರ"* (ಸಂಪುಟ 6, ಪುಟ 415)
- ಭಾರತದಲ್ಲಿ ಮಹಮ್ಮದೀಯ ವಿಜಯ ತುಳಿತಕ್ಕೊಳಗಾದವರಿಗೆ ಒಂದು ಮುಕ್ತಿಯಾಗಿ ಬಂತು. ಆದ್ದರಿಂದಲೇ ನಮ್ಮ ಜನಗಳಲ್ಲಿ ಐವರಲ್ಲಿ ಒಂದರಷ್ಟು ಮಹಮ್ಮದೀಯರಾದುದು. (ಸಂಪುಟ 3, ಪುಟ 294)
- *ನಾನು ನನ್ನ ಮನಸ್ಸಿನ ಕಣ್ಣುಗಳಿಂದ ಕಾಣುವ ಒಂದು ಪರಿಪೂರ್ಣ ಭಾರತವೆಂದರೆ ಅದರ ಈಗಿನ ಅರಾಜಕತೆ, ಗಲಭೆಗಳಿಂದ ಮೇಲೆದ್ದು ಬಂದು ವೇದಾಂತದ ಮದುಳು ಹಾಗೂ ಇಸ್ಲಾಮಿನ ದೇಹ ಹೊಂದಿರುವ ಭವ್ಯ, ಅಜೇಯ ಭಾರತ"*

(ಸಂಪುಟ 6, ಪುಟ 416)

ಈ ಕಣ್ಣೋಟಕ್ಕೆ ತದ್ವಿರುದ್ಧ ಆರ್‌ಎಸ್‌ಎಸ್ ನ 'ಹಿಂದೂ ರಾಷ್ಟ್ರ' ಕಣ್ಣೋಟ ಹೊಂದಿರುವ ಅಡ್ವಾಣಿಯವರು ಇತಿಹಾಸವನ್ನು ಮತ್ತೆ-ಮತ್ತೆ ವಿಕೃತಗೊಳಿಸುತ್ತಿದ್ದರೆ ಆಶ್ಚರ್ಯವೇನು?

ಸಿಟಿಬಿಟಿಗೆ ಸಹಿ ಹಾಕುವ ಸಂಕೇತ

ಅಮೇರಿಕನ್ ಪರಮಾಣು ಅಧಿಪತ್ಯಕ್ಕೆ ದೇಶವನ್ನು ಒಳಪಡಿಸುವ ನಾಚಿಕೆಗೇಡಿ ಕ್ರಮ

ಸಂಸತ್ತಿನಲ್ಲಿ ಈ ಕುರಿತ ಪ್ರಧಾನಮಂತ್ರಿಗಳ ಹೇಳಿಕೆಯ ಮೇಲೆ ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ.

ಅಮೆರಿಕ ಸಂಯುಕ್ತ ಸಂಸ್ಥಾನದೊಂದಿಗೆ ಪರಮಾಣು ಪ್ರಶ್ನೆಯ ಮೇಲೆ ಏಳು ಸುತ್ತುಗಳ ರಹಸ್ಯ ಮಾತುಕತೆಗಳ ನಂತರ ವಾಜಪೇಯಿ ಸರಕಾರ ಕೊನೆಗೂ ಈ ಮಾತುಕತೆಗಳ ಬಗ್ಗೆ ಒಂದು ಹೇಳಿಕೆ ಹೊರಡಿಸಿದೆ. ಪ್ರಧಾನ ಮಂತ್ರಿ ವಾಜಪೇಯಿಯವರು ಸಂಸತ್ತಿನ ಎರಡೂ ಸದನಗಳಲ್ಲಿ ಈ ದ್ವಿಪಕ್ಷೀಯ ಮಾತುಕತೆಗಳ ಬಗ್ಗೆ ಒಂದು ಹೇಳಿಕೆ ನೀಡಿದರು. ಸರಕಾರದ ಈ ಹೇಳಿಕೆ ಕೂಡ ಬಲವಂತದಿಂದ ಬಂದದ್ದು. ಅಮೆರಿಕನ್ ವಿದೇಶಾಂಗ ಉಪಕಾರ್ಯದರ್ಶಿ ಸ್ಟ್ರೋಬ್ ಟಾಲ್‌ಬೋಟ್ ಒಂದು ವೃತ್ತಪತ್ರಿಕೆಯಲ್ಲಿ ಈ ಮಾತುಕತೆಗಳ ಬಗ್ಗೆ ಹಾಗೂ ಅಮೆರಿಕದ ಆಗ್ರಹಗಳ ಬಗ್ಗೆ ಹೊರಗೆಡಹಿದ ಮೇಲೆ ಸರಕಾರ ಈ ಹೇಳಿಕೆ ನೀಡಲೇಬೇಕಾಗಿ ಬಂತು. ಅಮೆರಿಕನ್ ಪಕ್ಷ 'ರಹಸ್ಯ ಸ್ವರೂಪ'ವನ್ನು ಮುರಿದಿರುವುದರ ಬಗ್ಗೆ ವಾಜಪೇಯಿ ಹಾಗೂ ಜಸ್ವಂತ ಸಿಂಗ್ ಇಬ್ಬರೂ ತಮಗೆ ಸರಿಕಾಣಲಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ನೇತೃತ್ವದ ಸರಕಾರ ಸಿಟಿಬಿಟಿಗೆ ಸಹಿ ಹಾಕಲು ನಿರ್ಧರಿಸಿದೆ ಎಂಬುದನ್ನು ವಾಜಪೇಯಿ ಹೇಳಿಕೆ ಸ್ಪಷ್ಟಪಡಿಸಿದೆ. ಭಾರತೀಯ ಜನತೆ ಈ ನಿಲುವನ್ನು ಸ್ವೀಕರಿಸುವಂತೆ ಮಾಡಲು ಸಮಯಾವಕಾಶ ಕೊಡಿ ಎಂದಷ್ಟೇ ಈ ಸರಕಾರ ಅಮೆರಿಕವನ್ನು ವಿನಂತಿಸಿಕೊಂಡಿದೆ. ಇದಕ್ಕೆ ಪ್ರತಿಯಾಗಿ ಭಾರತ ಒಂದು 'ಕನಿಷ್ಟ ಪರಮಾಣು ತಡೆ'ಯನ್ನು ಹೊಂದಲು ಅಮೆರಿಕಾ ಬಿಡಬೇಕು ಎನ್ನುವುದು ವಾಜಪೇಯಿ ಸರಕಾರದ ಬಯಕೆ. ಪರಮಾಣು ಶಸ್ತ್ರಾಸ್ತ್ರಗಳ ಒಂದು ದಾಸ್ತಾನು ಇಡುವುದೆಂದೇ ಇದರರ್ಥ. 'ಈಗ ನಮ್ಮ ಭದ್ರತಾ ಆತಂಕಗಳು ಮತ್ತು ಅಗತ್ಯಗಳ ಬಗ್ಗೆ ಸ್ವಲ್ಪ ತಿಳುವಳಿಕೆ' ಅಮೆರಿಕಕ್ಕೆ ಇದೆ ಎಂದು ವಾಜಪೇಯಿಯವರ ಹೇಳಿಕೆ ತಿಳಿಸಿದೆ. ಭಾರತ ಪರಮಾಣು ಶಸ್ತ್ರ ಹೊಂದುವ ಬಗ್ಗೆ ಯೋಚಿಸುವಲ್ಲಿ ಚೀಣಾ ಒಂದು ಅಂಶ ಎಂಬ ಭಾರತದ ಹೇಳಿಕೆಯನ್ನು ಅಮೆರಿಕನ್ನರು ಅರ್ಥ ಮಾಡಿಕೊಂಡಿದ್ದಾರೆ ಎಂದು ಇದರ ಅರ್ಥ.

ಈ ಅಂಶ ನವೆಂಬರ್ 13 ರಂದು 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಪ್ರಕಟವಾದ ಸ್ಟ್ರೋಬ್ ಟಾಲ್‌ಬೋಟ್‌ರ ಲೇಖನದಿಂದ ದೃಢಪಟ್ಟಿದೆ. 'ತಡೆಯ ಪ್ರಶ್ನೆ ಭಾರತಕ್ಕೆ ಚೀಣಾ ಅಂಶದಿಂದ ಕ್ಲಿಷ್ಟವಾಗಿದೆ ಎಂದು ನಾವು ಅರಿತಿದ್ದೇವೆ..... ಈ ನಿರ್ಧಾರ ಮಾಡುವ ಭಾರತದ ಹಕ್ಕನ್ನು ನಾವು ಗೌರವಿಸುತ್ತೇವೆ" ಎಂದು ಅವರು ಹೇಳಿದ್ದಾರೆ. ಚೀಣಾದಿಂದ ಭದ್ರತೆಗೆ ಬೆದರಿಕೆ ಇದೆ ಎಂದು ತೋರಿಸಿ ತನ್ನ ಶಸ್ತ್ರೀಕರಣ ಕಾರ್ಯಕ್ರಮಕ್ಕೆ ಸರಕಾರ ಅಮೆರಿಕಾದ ಅನುಮೋದನೆ ಯಾಚಿಸುತ್ತಿದೆ. ಈ ನಿಲುವು ಅಮೆರಿಕಕ್ಕೆ ಅನುಕೂಲಕರ. ಏಕೆಂದರೆ ಭಾರತ ಮತ್ತು ಚೀಣಾದ ನಡುವಿನ ತಿಕ್ಕಾಟಗಳಲ್ಲಿ ಆಟವಾಡಲು ಅದಕ್ಕೆ ಅವಕಾಶ ದೊರೆಯುತ್ತದೆ.

ಸಿಟಿಬಿಟಿಗೆ ಸಹಿ ಹಾಕುವುದಲ್ಲದೆ ವಿದಳನ ವಸ್ತು ಹತೋಟಿ ಸಂಧಿ FMCT ಗೆ ಸಹಿಹಾಕುವ ವಿಚಾರದಲ್ಲಿ ವಾಜಪೇಯಿ ಸರಕಾರ ಏನು ಮಾಡಬೇಕು ಎಂದು ತಾನು ನಿರೀಕ್ಷಿಸುವುದಾಗಿ ಅಮೆರಿಕ ಸ್ಪಷ್ಟವಾಗಿ ತಿಳಿಸಿದೆ; ಕ್ಷಿಪಣಿಗಳ ಅಭಿವೃದ್ಧಿ ಮತ್ತು ಪರೀಕ್ಷಣೆ ಹಾಗೂ ಇಂತಹ ಕ್ಷಿಪಣಿಗಳ ಸ್ಥಾಪನೆಯ ಮೇಲೆ ಕಡಿವಾಣಗಳ ಬಗ್ಗೆ, ಪರಮಾಣು ಸಾಮಗ್ರಿಗಳ ಮೇಲೆ ಕಟ್ಟುನಿಟ್ಟಾದ ಹತೋಟಿ ವಿಧಿಸುವ ಬಗ್ಗೆ, ವಿಶೇಷವಾಗಿ ಕಾಶ್ಮೀರದ ಮೇಲೆ ಭಾರತ - ಪಾಕಿಸ್ತಾನ ಮಾತುಕತೆಗಳ ಬಗ್ಗೆ ವಾಜಪೇಯಿ ಸರಕಾರ ಏನು ಮಾಡಬೇಕು ಎಂಬ ತನ್ನ ಆಪೇಕ್ಷೆಯನ್ನು ಕೂಡಾ ಅಮೆರಿಕಾ ಸ್ಪಷ್ಟಗೊಳಿಸಿದೆ. ಸಿಟಿಬಿಟಿಗೆ ಸಹಿ ಹಾಕಬಹುದು, ಈ ರೀತಿ ಸಹಿ ಹಾಕುವುದರಿಂದ ಪರಮಾಣು ಶಸ್ತ್ರಾಸ್ತ್ರಗಳ ದಾಸ್ತಾನನ್ನು ಇದು ನಿಷೇಧಿಸುವುದಿಲ್ಲ ಮತ್ತು ಭಾರತ ಈಗ ಒಂದು ಪರಮಾಣು ಅಸ್ತ್ರ ಪ್ರಭುತ್ವವಾಗಿದೆ - ಇದು ಬಿಜೆಪಿ ಸರಕಾರದ ಕಡೆಯಿಂದ ಮುಂದಿಡಲಾಗುತ್ತಿರುವ ಸಮರ್ಥನೆ.

ಬಿಜೆಪಿ ನೇತೃತ್ವದ ಸರಕಾರ ಈ ಶರತ್ತುಗಳಲ್ಲಿ ಕೆಲವನ್ನು ಸ್ವೀಕರಿಸಲು ಸಿದ್ಧವಾಗಿದೆ ಎಂಬುದರ ಇಂಗಿತ ವಾಜಪೇಯಿಯವರ ಹೇಳಿಕೆಯಲ್ಲಿ ಕಾಣುತ್ತದೆ. ಇದು ಟಾಲ್ಬೋಟ್ ಮತ್ತು ಜಸ್ವಂತ ಸಿಂಗ್ ನಡುವಿನ ಮಾತುಕತೆಗಳ ಫಲಿತಾಂಶ. ಇದರ ಅರ್ಥವೇನೆಂದರೆ ಭಾರತಕ್ಕೆ ಒಂದು ಕನಿಷ್ಟ ಪರಮಾಣು ಶಸ್ತ್ರಾಸ್ತ್ರ ಸಂಗ್ರಹವನ್ನು ಇಟ್ಟುಕೊಳ್ಳಲು ಅವಕಾಶ ನೀಡಲಾಗುವುದು ಹಾಗೂ ಭಾರತ ಮತ್ತು ಪಾಕಿಸ್ತಾನದಲ್ಲಿನ ಪರಮಾಣು ವ್ಯವಸ್ಥೆಯ ಉಸ್ತುವಾರಿಯನ್ನು ಅಮೆರಿಕ ಮಾಡುತ್ತದೆ. ಅಂದರೆ ಭಾರತ ಈ ವಿಷಯದಲ್ಲಿ ಅಮೆರಿಕನ್ ಅಧಿಪತ್ಯಕ್ಕೆ ಶರಣಾಗುತ್ತದೆ. ಈ ರೀತಿ ಶರಣು ನೀತಿ ಬಾಹಿರ, ನಿಯಮ ಬಾಹಿರ ಹಾಗೂ ಭಾರತದ ಮತ್ತು ದಕ್ಷಿಣ ಏಶ್ಯಾ ಪ್ರದೇಶದ ಜನಗಳ ಹಿತಾಸಕ್ತಿಗಳಿಗೆ ಮಾರಕವಾದದ್ದು. ಅಮೆರಿಕಾ ಹೇರಿದ ಇಂತಹ ಒಂದು ಅಸಮಾನ ವ್ಯವಸ್ಥೆಯಡಿ ಪಾಕಿಸ್ತಾನೀ ಆಡಳಿತದ ಮಟ್ಟದಲ್ಲೇ ಅಮೆರಿಕಾ ತನ್ನೊಡನೆ ಕೂಡಾ ವರ್ತಿಸಲು ವಾಜಪೇಯಿ ಸರಕಾರ ಸಿದ್ಧವಾಗಿದೆ ಎಂಬುದು ನಾಚಿಕೆಗೇಡಿನ ಸಂಗತಿ.

ರಾಜ್ಯಸಭೆಯಲ್ಲಿ ಈ ವಿಷಯದ ಮೇಲಿನ ಚರ್ಚೆಯನ್ನು ನೋಡಿದರೆ ಕಾಂಗ್ರೆಸ್ ಮುಖಂಡತ್ವಕ್ಕೂ ಅಮೆರಿಕಾದೊಡನೆ ಸಾಗುತ್ತಿರುವ ಮಾತುಕತೆಗಳ ಬಗ್ಗೆ ಮೂಲಭೂತ ಆಕ್ಷೇಪ ಏನೂ ಇಲ್ಲ ಎಂದು ಕಾಣುತ್ತದೆ. ಅದು ಕೊಡುವ ಏಕೈಕ ವಿಚಾರವೆಂದರೆ ಸರಕಾರ ಸಿಟಿಬಿಟಿಗೆ ಒಪ್ಪಲು ತರಾತುರಿ ಮಾಡಬೇಕಾಗಿಲ್ಲ, ಏಕೆಂದರೆ ಅದು ಜಾರಿಗೆ ಬರುವುದು ಸಪ್ಟೆಂಬರ್ 1999 ರಲ್ಲಿ. ದೇಶದ ಎರಡು ಪ್ರಧಾನ ಆಳುವ ವರ್ಗಗಳ ಪಕ್ಷಗಳ ನಡುವೆ ಇಂತಹ ಒಮ್ಮತ ದೇಶಕ್ಕೆ ವಿನಾಶಕಾರಿ.

ಭಾರತ ಸಿಟಿಬಿಟಿಗೆ ಸಹಿ ಹಾಕುವುದಿಲ್ಲ, ಏಕೆಂದರೆ 1996 ರಲ್ಲಿ ಯಾವ ಮೂಲಭೂತ ಕಾರಣಗಳಿಂದಾಗಿ ಇದಕ್ಕೆ ಸಹಿ ಹಾಕಲು ನಿರಾಕರಿಸಿತೋ ಈ ಕಾರಣಗಳು ಈಗಲೂ ಇವೆ - ಇಂತಹ ಒಂದು ದೃಢ ನಿಲುವನ್ನು ಎಲ್ಲಾ ದೇಶಪ್ರೇಮಿ ಶಕ್ತಿಗಳು ಈಗ ತಳೆಯಬೇಕಾಗಿದೆ. ಅಲ್ಲದೆ ಭಾರತ ಪರಮಾಣು ಶಸ್ತ್ರೀಕರಣ ಮಾಡುವುದಿಲ್ಲ ಎಂದಾಗ ಮಾತ್ರವೇ ಇಂತಹ ನಿರಾಕರಣೆ ವಿಶ್ವಾಸಾರ್ಹವಾಗುತ್ತದೆ. ಈಗಿನ ಪ್ರಧಾನ ಪ್ರಶ್ನೆ ಶಸ್ತ್ರೀಕರಣವೇ ಹೊರತು ಸಿಟಿಬಿಟಿ ಅಲ್ಲ. ವಾಜಪೇಯಿ ಸರಕಾರ ಪರಮಾಣು ತಡೆಯ ಭ್ರಮೆಯಲ್ಲಿ ಇರುವವರೆಗೆ ಭಾರತ ಏಕಾಂಗಿಯಾಗಿರುತ್ತದೆ, ಅಮೆರಿಕನ್ ಸಾಮ್ರಾಜ್ಯಶಾಹಿಯ ನಿರಂತರ ಒತ್ತಡಗಳಿಗೆ ಅದು ಬಲಿಯಾಗುತ್ತಿರಬೇಕಾಗುತ್ತದೆ. ಬಿಜೆಪಿ ನೇತೃತ್ವದ ಸರಕಾರ ದೇಶದ ಸಾರ್ವಭೌಮ ಹಾಗೂ ಸ್ವತಂತ್ರ ನಿರ್ಧಾರದ ಹಕ್ಕಿಗೆ ಸಂಚಕಾರ ತರುತ್ತಿದೆ.

ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆಯ ಉಬ್ಬರ

ಸಂಘ ಪರಿವಾರದ ಕುತ್ಸಿತ ಆಟಾಟೋಪ ಮತ್ತೆ ಆರಂಭವಾಗಿದೆ. ಬಿಜೆಪಿ ಅಧಿಕಾರದಲ್ಲಿರುವ ಗುಜರಾತಿನಲ್ಲಿ ಪುನಃ ಕ್ರೈಸ್ತರ ಮೇಲೆ ಭಾರೀ ಪ್ರಮಾಣದ ಆಕ್ರಮಣ ನಡೆದಿದೆ. ರಾಜ್ಯದಲ್ಲಿ ಅಲ್ಪಸಂಖ್ಯಾತರ ವಿರುದ್ಧ ಕೋಮು ಹಿಂಸಾಚಾರ ಭುಗಿಲೆದ್ದಿದ್ದು ವಿಶೇಷವಾಗಿ ಕ್ರೈಸ್ತ ಸಮುದಾಯದ ಜನರು ಹಾಗೂ ಸಂಘ ಸಂಸ್ಥೆ, ಶಾಲೆ ಕಾಲೇಜುಗಳು ದುರುಳರ ಗುರಿಯಾಗಿದೆ.

ಸೂರತ್ ಮತ್ತು ದಂಗ್ಸ್ ಜಿಲ್ಲೆಯ ಹಲವು ಭಾಗಗಳಲ್ಲಿ ಚರ್ಚುಗಳು ಮತ್ತು ಮಿಷನರಿ ಶಾಲೆಗಳ ಮೇಲೆ ಹಲ್ಲೆಗಳು ನಡೆದಿವೆ. ವಾಹನಗಳನ್ನು ಸುಡಲಾಗಿದೆ ಅನೇಕ ಜನರು ಗಾಯಗೊಂಡಿದ್ದಾರೆ.

ಡಿಸೆಂಬರ್ 25-27 ರ ನಡುವೆ ಈ ಪ್ರಕರಣಗಳು ನಡೆದಿದೆ.

ನಾಡಗ್ ಖಾಡ್ರಿ, ಸುಬೀರ್, ಗಢವಿ, ದಿವಾನ್ ಖೇಡಿ, ಖೇಡಬಿಡಿ, ಉಮೇರ್ ಖಡಿ ಹೀಗೆ ಅನೇಕ ಹಳ್ಳಿಗಳಲ್ಲಿ ಮತಾಂಧ ಹಿಂದೂ ಶಕ್ತಿಗಳು ಕ್ರೈಸ್ತರ ಮೇಲೆ ಹಲ್ಲೆಗಳನ್ನು ನಡೆಸಿವೆ.

ಹಿಂದೂಗಳನ್ನು ಮತಾಂತರಿಸಲಾಗುತ್ತಿದೆ ಎಂದು ಆರೋಪಿಸಿರುವ ಬಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ತುಗಳು ಈ ಮತಾಂತರದ ವಿರುದ್ಧ ತಮ್ಮ ಚಟುವಟಿಕೆಯನ್ನು ತೀವ್ರಗೊಳಿಸುವುದಾಗಿ ಹೇಳಿರುವ ಬೆನ್ನಲ್ಲೇ ಈ ಆಕ್ರಮಣ, ಲೂಟಿ ದಾಂಧಲೆ ಭುಗಿಲೆದ್ದಿದೆ.

ಇದರಿಂದಾಗಿ ಗುಜರಾತಿನಲ್ಲಿ ಅಲ್ಪ ಸಂಖ್ಯಾತ ಜನಸಮುದಾಯದಲ್ಲಿ ಭೀತಿಯ ಅಲೆಯನ್ನು ಎಬ್ಬಿಸಿರುವ ಈ ದುಷ್ಟ ಕೃತ್ಯಗಳ ಹಿಂದಿರುವ ಶಕ್ತಿಗಳು ಯಾವುದು ಎಂಬುದನ್ನು ಊಹಿಸುವುದು ಕಷ್ಟವೇ ಅಲ್ಲ.

ಘರ್ಷಣೆ:

ದಂಗ್ಸ್ ಜಿಲ್ಲೆಯ ಕ್ರಿಸ್ಮಸ್ ದಿನದಂದು ಕೋಮು ಹಿಂಸಾಚಾರದಿಂದ ತಲ್ಲಣಗೊಂಡಿತು. ಹಿಂದೂ ಮತ್ತು ಕ್ರೈಸ್ತರ ಮಧ್ಯೆ ಘರ್ಷಣೆ ನಡೆಯಿತು. ಅದೇ ಜಿಲ್ಲೆಯ ದಕಿ ಗ್ರಾಮದಲ್ಲಿ ಶನಿವಾರ ರಾತ್ರಿ ಸರಪಂಚ ದಿನಕರ ಗಾವ್ಳಿ ಎಂಬಾತ ಗುಂಪೊಂದರ ಮೇಲೆ ಗುಂಡು ಹಾರಿಸಿದ್ದರಿಂದ ಏಳು ಜನರು ಗಾಯಗೊಂಡರು.

ದಂಗ್ಸ್ ಜಿಲ್ಲೆಯ ಅಹ್ವಾ ಪಟ್ಟಣದಲ್ಲಿ ಶುಕ್ರವಾರ ಅಂದರೆ ಕ್ರಿಸ್ಮಸ್ ದಿನ ಸಂಭವಿಸಿದ ಕೋಮು ಹಿಂಸಾಚಾರದಲ್ಲಿ 15 ಜನರು ಗಾಯಗೊಂಡರು.


ಅಲ್ಪಸಂಖ್ಯಾತ ಆಯೋಗದ ಕ್ರಮ:

ದೇಶಾದ್ಯಂತ ಕಳವಳಕ್ಕೆ ಕಾರಣವಾಗಿರುವ ಗುಜರಾತ್ ವಿದ್ಯಾಮಾನಗಳಿಗೆ ಸ್ಪಂದಿಸಿರುವ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ ಗುಜರಾತಿನ ಉನ್ನತ ಅಧಿಕಾರಿಗಳನ್ನು ಕರೆಸಿ ವಿವರಣೆ ಪಡೆಯಲು ನಿರ್ಧರಿಸಿದೆ.

ರಾಜ್ಯದಲ್ಲಿ ಅಲ್ಪಸಂಖ್ಯಾತರು, ವಿಶೇಷವಾಗಿ ಕ್ರೈಸ್ತರ ವಿರುದ್ಧ ಹಿಂಸಾತ್ಮಕ ಕೃತ್ಯಗಳು ನಡೆಯುತ್ತಿರುವುದಕ್ಕೆ ಆಯೋಗ ಕಳವಳ ವ್ಯಕ್ತಪಡಿಸಿದೆ.

ದಾಳಿಗಳು ಎಗ್ಗಿಲ್ಲದೆ ಮುಂದುವರಿದಿವೆ. ಇದೇ ರೀತಿ ನಡೆಯುತ್ತಿರಲು ಸಾಧ್ಯವಿಲ್ಲ. ರಾಜ್ಯ ಸರಕಾರದಿಂದ ನಾವು ವಿವರಣೆ ಕೇಳುತ್ತೇವೆ ಎಂದು ಆಯೋಗದ ಅಧ್ಯಕ್ಷ ಡಾ|| ತಾಹಿರ್ ಮೆಹಮೂದ್ ಹೇಳಿದ್ದಾರೆ.

ಮಧ್ಯಪ್ರದೇಶದ ಜಬುಲಾದಲ್ಲಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ನಡೆದ ಸಮೂಹಿಕ ಅತ್ಯಾಚಾರ ಸೇರಿದಂತೆ ಕ್ರಿಶ್ಚಿಯನ್ನರ ಮೇಲೆ ದೇಶದ ಹಲವು ಭಾಗಗಳಲ್ಲಿ ದೌರ್ಜನ್ಯ ಪ್ರಕರಣಗಳು ಬಿಜೆಪಿ ನೇತೃತ್ವದ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ನಡೆದಿದೆ.



ಗಾಯದ ಮೇಲೆ ಬರೆ ಎಳೆದಂತೆ, ಕ್ರೈಸ್ತರ ಮೇಲೆ ನಡೆದ ಆಕ್ರಮಣಗಳನ್ನು ವಿಶ್ವಹಿಂದೂ ಪರಿಷತ್ ಸಮರ್ಥಿಸಿಕೊಂಡ ನಾಚಿಕೆಗೇಡಿನ ಪ್ರಸಂಗವೂ ದಾಖಲಾಗಿತ್ತು. ಬಹಿರಂಗವಾಗಿಯೇ ಒಂದು ಧರ್ಮದ ಜನರ ವಿರುದ್ಧ ದ್ವೇಷಮಯ ಪ್ರಚಾರ ನಡೆಸಿದ ಈ ಸಂಸ್ಥೆಯ ನಾಯಕರ ವಿರುದ್ಧ ವಾಜಪೇಯಿ ಸರಕಾರ ಕಿರು ಬೆರಳನ್ನೂ ಎತ್ತಲಿಲ್ಲ.

ಬಿಜೆಪಿ ಅಧಿಕಾರಕ್ಕೆ ಬರಬೇಕಾದರೆ ಇಂಥ ಹೇಯ ಕೋಮುವಾದಿ ಸಂಸ್ಥೆಗಳ ನೆರವು ಬೇಕೇ ಬೇಕಲ್ಲವೆ? ಏನೆಂದರೂ ಬಿಜೆಪಿ ಇಂಥವುಗಳ ರಾಜಕೀಯ ಮುಖ ಅಲ್ಲವೆ?

ಕೆಲವು ದಿನಗಳ ಹಿಂದೆ ಕ್ರೈಸ್ತರು ದೇಶಾದ್ಯಂತ ಪ್ರತಿಭಟನಾ ಕಾರ್ಯಕ್ರಮಗಳನ್ನು ನಡೆಸಿದ್ದರು. ಕ್ರೈಸ್ತ ಮುಖಂಡರ ನಿಯೋಗವೊಂದು ದೆಹಲಿಯಲ್ಲಿ ಪ್ರಧಾನಿಯನ್ನು ಕಂಡು ತಮ್ಮ ಸಮುದಾಯಕ್ಕೆ ರಕ್ಷಣೆ ನೀಡುವಂತೆ ಮನವಿ ಸಲ್ಲಿಸಿದ್ದರು. ದೇಶದಲ್ಲಿ ನೆಲೆಸಿರುವ ಕ್ರೈಸ್ತರು ಕೂಡ ಇತರ ನಾಗರಿಕರಂತೆ ಸರಿಸಮಾನರು ಎಂದಿದ್ದ ಪ್ರಧಾನಿ ರಕ್ಷಣೆಯ ಪೂರ್ಣ ಭರವಸೆ ನೀಡಿದ್ದರು.

ಆದರೆ? ಅವರ ಪಕ್ಷವೇ ಅಧಿಕಾರದಲ್ಲಿರುವ ಗುಜರಾತಿನಲ್ಲಿ ಕ್ರೈಸ್ತರ ವಿರುದ್ಧ ಹೇಯ ಹಲ್ಲೆ ನಡೆದಿದೆ.

ನಾಚಿಕೆಗೇಡಿನ ಸಮರ್ಥನೆ:

ಹಿಂದೆಯೂ ಅಲ್ಪಸಂಖ್ಯಾತರ ವಿರುದ್ಧ ಹಲ್ಲೆ, ಆಕ್ರಮಣಗಳು ನಡೆಯುತ್ತಿದ್ದವು. ಆದರೆ ಈಗ ಅಂಥ ಘಟನೆಗಳನ್ನು ದೊಡ್ಡದಾಗಿ ಚಿತ್ರಿಸಲಾಗುತ್ತಿದೆ. ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿರುವುದೇ ಇದಕ್ಕೆ ಕಾರಣ. ಹೀಗೆಂದು ಹೇಳಿದ್ದಾರೆ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ವೆಂಕಯ್ಯ ನಾಯ್ಡು.

ಇದು ಧರ್ಮದ ಹೆಸರಿನಲ್ಲಿ ಇನ್ನೊಂದು ಧರ್ಮದ ಜನರ ಮೇಲಿನ ಹಲ್ಲೆಯ ಸಮರ್ಥನೆ ಅಲ್ಲದೆ ಇನ್ನೇನು. ಇಂಥ ನಾಚಿಕೆಗೇಡಿನ ಸಮರ್ಥನೆಗಳಿಂದ ಕೋಮು ಸಂಘರ್ಷಕ್ಕೆ ಇಂಬು ಸಿಗದೆ ಇನ್ನೇನಾದೀತು?

ಸಮತಾ- ಬಿಜುದಳ ಒಡೆದ ಮನೆಗಳು

ತಾವು ಜಾತ್ಯಾತೀತರು ಎಂದು ಹೇಳಿಕೊಳ್ಳುತ್ತಲೇ ಕೋಮುವಾದಿ ಪಕ್ಷ ಕೇಂದ್ರದಲ್ಲಿ ಅಧಿಕಾರ ಸೂತ್ರ ಹಿಡಿಯಲು ನೆರವಾಗಿರುವ ಸಮತಾ ಪಕ್ಷ ಮತ್ತು ಬಿಜು ಜನತಾದಳ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲೇ ಪರದಾಡ ಬೇಕಾದ ಸನ್ನಿವೇಶ ಉಂಟಾಗಿದೆ.

ಬಿಹಾರದಲ್ಲಿ ಸಮತಾ ಪಕ್ಷ ಮತ್ತು ಒರಿಸ್ಸಾದಲ್ಲಿ ಬಿಜು ಜನತಾದಳ ಒಡಕಿನ ಹಾದಿಯಲ್ಲಿ ಸಾಗಿವೆ. ಈ ಎರಡೂ ಪಕ್ಷಗಳು ಒಂದರಿಂದ ಇನ್ನೊಂದು ಬಿಕ್ಕಟ್ಟಿನತ್ತ ಸಾಗುತ್ತಲೇ ಇವೆ.

ನವೆಂಬರ್‌ನಲ್ಲಿ ನಡೆದ ವಿಧಾನಸಭೆ ಚುನಾವಣೆಗಳ ಜತೆಯಲ್ಲಿ ಹಲವು ರಾಜ್ಯಗಳಲ್ಲಿ ಉಪ ಚುನಾವಣೆಗಳೂ ನಡೆದಿದ್ದವು. ಮೂರು ಮುಖ್ಯ ರಾಜ್ಯಗಳಲ್ಲಿ ಬಿಜೆಪಿ ಪರಾಭವ ಹೊಂದಿದ ರೀತಿಯಲ್ಲೇ ಹಲವು ಉಪಚುನಾವಣೆಗಳಲ್ಲಿ ಬಿಜೆಪಿಯ ಮಿತ್ರ ಪಕ್ಷಗಳು ಸೋಲುಂಡಿದ್ದವು. ಇದು ಆಯಾ ಪಕ್ಷಗಳಲ್ಲಿ ಅತೃಪ್ತಿ ಹಾಗೂ ಬಂಡಾಯಕ್ಕೆ ಹಾದಿ ಮಾಡಿಕೊಟ್ಟಿವೆ.

ಸಮತಾ ಪಕ್ಷದ ಬಿಹಾರ ರಾಜ್ಯಘಟಕದ ಅಧ್ಯಕ್ಷ ರಘುನಾಥಝಾ ಸಿಯೊಹರ್ ಅಸೆಂಬ್ಲಿ ಕ್ಷೇತ್ರದಲ್ಲಿ ಸೋತಿರುವುದರಿಂದ ಅವರನ್ನು ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ತಗೆದು ಹಾಕಬೇಕೆಂದು ಭಿನ್ನಮತೀಯರು ಒತ್ತಾಯಿಸಿರುವುದು ಬಿಕ್ಕಟ್ಟಿನ ಹೊಸ ಆಯಾಮವಾಗಿದೆ.

ಕುಶಭಾವು ಠಾಕರೆ, ಗೋವಿಂದಾಚಾರ್ಯ ವಿರುದ್ಧ ಮೊಕದ್ದಮೆ

ಬಿಹಾರದ ಆರ್‌ಜೆಡಿ ಸರಕಾರವನ್ನು ಉರುಳಿಸಲು ಶತಾಯ ಗತಾಯ ಪ್ರಯತ್ನಿಸುತ್ತಿರುವ ಬಿಜೆಪಿ ಮತ್ತು ಮಿತ್ರಪಕ್ಷಗಳ ಕ್ರಮ ಅವುಗಳಿಗೇ ತಿರುಗು ಬಾಣವಾಗಿ ಪರಿಣಮಿಸಿದೆ. ಅಂಥ ಒಂದು ಪ್ರಕರಣ ಇದು.

ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಒಂದು ಪುಸ್ತಿಕೆಯನ್ನು ಪ್ರಕಟಿಸಿದೆ. ಲಾಲೂ ರಾಬ್ಡಿ ಜಂಗಲ್ ರಾಜ್ ಖತಂ ಕರೋ ಎಂಬುದು ಅದರ ಶೀರ್ಷಿಕೆ ಈ ಪುಸ್ತಕದಲ್ಲಿ ಭೂಮಿಹಾರ್ ಕೋಮಿನ ವಿರುದ್ಧ ಅವಮಾನಕರ ಬರಹಗಳಿವೆ ಎಂದು ಆಪಾದಿಸಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಕುಶಭಾವು ಠಾಕರೆ ಮತ್ತು ಪ್ರಧಾನ ಕಾರ್ಯದರ್ಶಿ ಕೆ.ಎಸ್. ಗೋವಿಂದಚಾರ್ಯ ವಿರುದ್ಧ ಒಂದು ಮೊಕದ್ದಮೆಯನ್ನು ದಾಖಲಿಸಲಾಗಿದೆ.

ಮಸೂದೆಗಳಿಗೆ ವಿರೋಧ;
ಮಂತ್ರಿಗಳ ರಾಜಿನಾಮೆಗೆ ಒತ್ತಾಯ:

ವಾಸ್ತವವಾಗಿ ಪಕ್ಷದ ಅಧ್ಯಕ್ಷರ ವಿರುದ್ಧವೇ ಬಂಡಾಯ ಪುಟಿದೆದ್ದಿರುವುದು ಸಮತಾ ಪಕ್ಷದಲ್ಲಿನ ಮಹತ್ವದ ವಿದ್ಯಮಾನವಾಗಿದೆ.

ಪೇಟೆಂಟ್ ಮತ್ತು ವಿಮೆ ಮಸೂದೆಗಳನ್ನು ವಿರೋಧಿಸಿ ಸಮತಾ ಪಕ್ಷದ ರಾಜ್ಯ ಪ್ರಚಾರ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಶಿವಾನಂದ ತಿವಾರಿ ಮತ್ತು ಶಾಸಕ ಪಕ್ಷ ನಾಯಕ ಬೃಶನ್ ಪಟೇಲ್ ಧರಣಿ ಸತ್ಯಾಗ್ರಹ ನಡೆಸಿದರು. ಅಷ್ಟೇ ಅಲ್ಲದೆ, ಚುನಾವಣೆ ಭರವಸೆಗಳನ್ನು ನಿಜವಾಗಿಯೂ ಗೌರವಿಸುವುದಾದರೆ ಪಕ್ಷದ ಅಧ್ಯಕ್ಷ ಹಾಗೂ ರಕ್ಷಣಾ ಸಚಿವ ಜಾರ್ಜ್ ಫೆರ್ನಾಂಡಿಸ್ ಮತ್ತು ರೈಲ್ವೆ ಮಂತ್ರಿ ನಿತೀಶ್ ಕುಮಾರ್ ತಮ್ಮ ಮಂತ್ರಿಸ್ಥಾನಗಳಿಗೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಈ ಇಬ್ಬರು ನಾಯಕರನ್ನು (ತಿವಾರಿ ಮತ್ತು ಪಟೇಲ್) ಪಕ್ಷದಿಂದ ಹೊರ ಹಾಕಿ ಈ ಒತ್ತಾಯಕ್ಕೆ ಉತ್ತರ ನೀಡಲಾಯಿತು! ಪಕ್ಷದ ಸಂಸತ್ ಸದಸ್ಯ ಶಕುನಿ ಚೌಧರಿ ವಿರುದ್ಧವೂ ಕ್ರಮ ಕೈಗೊಳ್ಳುವ ಸಂಭವವಿದೆ. ಈ ಮೂರು ನಾಯಕರು ಹಾಗೂ ಚೌಧರಿಯವರ ಪತ್ನಿ ಪ್ರಭಾವತಿ ದೇವಿ ಸೇರಿದಂತೆ ಅನೇಕ ಮುಖಂಡರ ವಿರುದ್ಧ ಶಿಸ್ತು ಕ್ರಮಕ್ಕೆ ಕೇಂದ್ರ ನಾಯಕತ್ವ ಮುಂದಾದರೆ ಪಕ್ಷ ಹೋಳಾಗಿ ಹೋಗಿ ಈ ನಾಯಕರು ತಮ್ಮದೇ ಸ್ವಂತ ಪಕ್ಷವನ್ನು ರಚಿಸುವ ಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಗೋವಿಂದಾಚಾರ್ಯ ದಬ್ಬಾಳಿಕೆಯಿಂದ ರಕ್ಷಿಸಲು ಮೊರೆ

ಇತ್ತ ಬಂಡಾಯದ ಸಂಕಟ ಬಿಜೆಪಿಯನ್ನು ಬಿಟ್ಟಿಲ್ಲ. ಬಿಹಾರದಲ್ಲಿ ಅದು ಪರಾಕಾಷ್ಠೆಯನ್ನು ಮುಟ್ಟಿದೆ.

ಪಕ್ಷದ ಬಿಹಾರದ ಉಸ್ತುವಾರಿ ಜವಾಬ್ದಾರಿ ಹೊಂದಿರುವ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಗೋವಿಂದಾಚಾರ್ಯರ ವಿರುದ್ಧ ಬಂಡೆದ್ದಿರುವ ಮೂರು ನಾಯಕರನ್ನು ಪಕ್ಷದಿಂದ ಅಮಾನತು ಮಾಡಲಾಗಿದೆ.

ಗೋವಿಂದಾಚಾರ್ಯರ ದಬ್ಬಾಳಿಕೆಯಿಂದ ನಮ್ಮನ್ನು ರಕ್ಷಿಸಿ ಎಂದು ಅಮಾನತುಗೊಂಡಿರುವ ಮುಖಂಡರಾದ ತಾರಾ ಕಾಂತ್‌ಝಾ ಕಮಲೇಶ್ವರ ಪಾಸ್ವಾನ್ ಮತ್ತು ಯಶೋದನಂದ ಸಿಂಗ್ ಪ್ರಧಾನಿ ವಾಜಪೇಯಿಗೆ ಮೊರೆಯಿಟ್ಟಿದ್ದಾರೆ.

ಆದರೆ ಪಾಪ, ಈ ಮೊರೆ ಕೇಳಿಸಿಕೊಂಡು ಉಳಿದವರನ್ನು ರಕ್ಷಿಸುವ ಸ್ಥಿತಿಯಲ್ಲಿ ವಾಜಪೇಯಿ ಇದ್ದಂತಿಲ್ಲ. ಅವರೀಗ ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಲೇ ಚಿಂತನೆ ನಡೆಸ ಬೇಕಾಗಿದೆ. ಯಾವುದೇ ಹೊರಗಿನ ಶಕ್ತಿಗಳ ಕಾರಣದಿಂದಲ್ಲ; ಸ್ವತಃ ಸಂಘ ಪರಿವಾರದಲ್ಲಿನ ಒತ್ತಡವೇ ಇದಕ್ಕೆ ಕಾರಣ.

ಎಸ್.ಎಫ್.ಐ.ಗೆ ಪ್ರಚಂಡ ವಿಜಯ

ಡಿಸೆಂಬರ್ 3ನೇ ವಾರ ಜೋದಪುರ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ ಪ್ರಚಂಡ ಜಯವನ್ನು ಗಳಿಸಿದೆ.

ಎಸ್.ಎಫ್.ಐ.ನ ವಿ.ವಿ. ಸಮಿತಿ ಛಾತ್ರ ಸಂಘರ್ಷ ಸಮಿತಿಯನ್ನು ರಚಿಸಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು.

ನಾಲ್ಕೂ ಹುರಿಯಾಳುಗಳು ಎ.ಬಿ.ವಿ.ಪಿ. ಮತ್ತು ಎಸ್.ಎಸ್.ಯು.ಐ.ನ ಸಮೀಪ ಪ್ರತಿಸ್ಪರ್ಧಿಗಳನ್ನು ಸೋಲಿಸಿ ಜಯಶಾಲಿಯಾದರು.

ಜತೀಂದರ್ ಸಿಂಗ್ ರಾಥೋಡ್ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದರು. ನರಪತ್ ಸಿಂಗ್ ಚರಣ್ ಉಪಾಧ್ಯಕ್ಷರು. ಫಿರೋಜ್ ಖಾನ್ ಪ್ರಧಾನ ಕಾರ್ಯದರ್ಶಿ ಮತ್ತು ಬೀನಾ ಜಟ್ಟಿ ಸಹ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ಅಭಿನಂದನೆ: ಈ ವಿಜಯಕ್ಕಾಗಿ ಎಸ್.ಎಫ್.ಐ. ಕೇಂದ್ರ ಸಮಿತಿ ಜೋಧಪುರ ಜಿಲ್ಲಾ ಸಮಿತಿಯನ್ನು ಅಭಿನಂದಿಸಿದೆ. ವಿದ್ಯಾರ್ಥಿಗಳ ಹಕ್ಕುಗಳಿಗಾಗಿ ಮತ್ತು ಅವರ ಸಮಸ್ಯೆಗಳ ವಿರುದ್ಧ ಸತತವಾಗಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಎಸ್.ಎಫ್.ಐ. ಮಾತ್ರವೇ ಕ್ಯಾಂಪಸ್‌ನ ಸಂಘಟನೆಯಾಗಿದೆ ಎಂಬುದು ಚುನಾವಣೆ ಫಲಿತಾಂಶದಿಂದ ಸಾಬೀತಾಗಿದೆ ಎಂದು ಕೇಂದ್ರ ಸಮಿತಿ ಹೇಳಿದೆ.

ವಿಟ್ಲಾದಲ್ಲಿ ಫಿರ್ಕಾ ರೈತ ಸಮ್ಮೇಳನ

ಬಟ್ವಾಳ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಹಿಡಿತದಲ್ಲಿರುವ ವಿಶ್ವ ಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿಯ ನಿರ್ದೇಶನದಂತೆ ನಮ್ಮ ದೇಶದಲ್ಲಿ ಸಹ ಜಾರಿಗೊಳಿಸುತ್ತಿರುವ ಹೊಸ ಕೃಷಿ ನೀತಿಗೆ ರೈತ ಸಮುದಾಯವು ವಿರೋಧವನ್ನು ವ್ಯಕ್ತಪಡಿಸಿ, ಹೋರಾಟವನ್ನು ನಡೆಸಬೇಕೆಂದು ರಾಜ್ಯದ ಮಾರ್ಕ್ಸ್‌ವಾದಿ ಕಮ್ಯೂನಿಷ್ಟ್ ಪಕ್ಷದ ಮುಖಂಡ ಶ್ರೀ ಸಿ. ನಂಜುಂಡಪ್ಪರು ಕರೆ ನೀಡಿದರು.

ಅವರು ಡಿಸೆಂಬರ್ 20 ರಂದು ವಿಟ್ಲದಲ್ಲಿ ಫಿರ್ಕಾದ ರೈತ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಸಮಗ್ರವಾದ ಭೂ ಸುಧಾರಣಾ ಕಾಯಿದೆಯನ್ನು ದೇಶಾದ್ಯಂತ ಜಾರಿಗೊಳಿಸಿ, ಉಳುವ ರೈತನಿಗೆ ಭೂಮಿ ನೀಡಿ, ಆಹಾರ ಉತ್ಪಾದನೆಯಲ್ಲಿ ಮುಖ್ಯ ಪಾತ್ರವನ್ನು ನಾವು ವಹಿಸಬೇಕಾಗಿದೆ ಎಂದು ಅವರು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಎ.ವಿ. ರಮೇಶ ರವರು ವಹಿಸಿದರು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಮಾರ್ಕ್ಸ್‌ವಾದಿ ಕಮ್ಯೂನಿಷ್ಟ್ ಪಕ್ಷದ ಬಂಟ್ವಾಳ ತಾಲೂಕು ಸಮಿತಿಯ ಕಾರ್ಯದರ್ಶಿ ಶ್ರೀ.ಬಿ. ವಾಸು ಗಟ್ಟಿ, ರೈತ ಸಂಘದ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ರೈತ ಕೃಷಿ ಕೂಲಿಗಾರರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಘಟಿತ ಹೋರಾಟವೇ ಸೂಕ್ತವೆಂದು ತಿಳಿಸಿದರು.

ಹದಿನಾರು ಮಂದಿಯ ವಿಟ್ಲ ಫಿರ್ಕಾ ಸಮಿತಿಯನ್ನು ಆಯ್ಕೆಮಾಡಿ ಶ್ರೀ.ವಿ. ರಾಮಣ್ಣ, ಅಧ್ಯಕ್ಷರಾಗಿಯೂ, ಶ್ರೀ ಹಂಗ್ರಿ ಲಿಂಗಪ್ಪ ನಾಯ್ಕ ಉಪಾಧ್ಯಕ್ಷರಾಗಿಯೂ ಗೋಪಾಲ ಎನ್. ಕಾರ್ಯದರ್ಶಿ ಯಾಗಿಯೂ, ವೈ.ಕೆ. ನಾರಾಯಣ ಜೊತೆ ಕಾರ್ಯದರ್ಶಿಯಾಗಿಯೂ, ಎ.ವಿ. ರಮೇಶ್ ಖಜಾಂಚಿಯಾಗಿಯೂ ಸಮ್ಮೇಳನದಲ್ಲಿ ಚುನಾಯಿಸಲ್ಪಟ್ಟರು.

ಆರಂಭದಲ್ಲಿ ಸ್ವಾಗತಿಸಿ, ಚಟುವಟಿಕೆಗಳ ವರದಿಯನ್ನು ಎ. ರಾಮಣ್ಣ ಒಪ್ಪಿಸಿದರು.

ಸಭಾ ಪೂರ್ವದಲ್ಲಿ ಇತ್ತೀಚಿಗೆ ನಿಧನರಾದ ದ.ಕ. ಜಿಲ್ಲೆಯ ರೈತ ಕಾರ್ಮಿಕ ಮುಖಂಡ ಶ್ರೀ. ಯು. ಜನಾರ್ಧನ ನಾಯ್ಕರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕೊನೆಗೆ ಗೋಪಾಲ ಎನ್. ಧನ್ಯವಾದ ಸಲ್ಲಿಸಿದರು.

ಗುಲ್ಬರ್ಗಾ:- ಇರಾಕ್ ಮೇಲೆ ಅಪ್ರಚೋದಿತವಾದ ಅಮೇರಿಕಾ-ಬ್ರಿಟನ್‌ನ ಕ್ಷಿಪಣಾ ದಾಳಿಯನ್ನು ಸಿಪಿಐ(ಎಂ) ಜಿಲ್ಲಾ ಸಮೀತಿ ತೀವ್ರವಾಗಿ ಖಂಡಿಸಿದೆ. ಅಮೇರಿಕಾ ಅಧ್ಯಕ್ಷ ಬಿಲ್ ಕ್ಲಿಂಟನ್ ರವರು ಲೇವನ್‌ಸ್ಕಿ ಜೊತೆಗಿನ ಅನೈತಿಕ ಸಂಬಂಧದಲ್ಲಿ ಎದುರಿಸುತ್ತಿರುವ ವಾಗ್ದಂಡನೆಯನ್ನು ಹೊಸಕಿ ಹಾಕಲು ಮಾಡಿದ ಒಂದು ಕುತಂತ್ರವೆಂದು ಸಿಪಿಐ(ಎಂ) ಪಕ್ಷದ ಗುಲಬರ್ಗಾ ಜಿಲ್ಲಾ ಸಮಿತಿ ಪತ್ರಿಕಾ ಪ್ರಕಟಣೆಯಲ್ಲಿ ಟೀಕಿಸಿದೆ.

ಇರಾಕ್ ಮೇಲೆ ಅಮೇರಿಕಾ-ಬ್ರಿಟನ್ನಿನ ಎಕ ಪಕ್ಷೀಯ ಹುಚ್ಚುತನದ ಕ್ಷಿಪಣಾ ದಾಳಿಯನ್ನು ಖಂಡಿಸಲು ಸಿಪಿಐ(ಎಂ) ಗುಲಬರ್ಗಾ ಜಿಲ್ಲಾ ಸಮೀತಿಯು ಬಿಲ್ ಕ್ಲಿಂಟನರ ಪ್ರತಿಮೆಯನ್ನು ತಿಮ್ಮಾಪೂರಿ ಚೌಕದಲ್ಲಿ ಸುಡಲಾಯಿತು. ಈ ಕಾರ್ಯಕ್ರಮದ ನೇತೃತ್ವವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಕಾಯದರ್ಶಿ ಶ್ರೀ ಮಾರುತಿ ಮಾನ್ಪಡೆ ವಹಿಸಿದ್ದರು.

ಬೇಡಿಕೆಗಳ ಈಡೇರಿಕೆಗಾಗಿ ಗ್ರಾಮ ಪಂಚಾಯತ್ ನೌಕರರ ಮೇರವಣಿಗೆ

ಕೋಲಾರ ಜಿಲ್ಲಾ ಗ್ರಾಮ ಪಂಚಾಯತ್‌ನ 200ಕ್ಕೂ ಹೆಚ್ಚು ನೌಕರರು ಡಿಸೆಂಬರ್ 18 ರಂದು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ತಾಲೂಕು ಪಂಚಾಯ್ತಿ ಕಛೇರಿ ಮುಂದೆ ನಡೆದ ಧರಣಿಯಲ್ಲಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಪಿ.ಆರ್ ಸೂರಿ ಮಾತನಾಡಿ ಪಂಚಾಯ್ತಿ ನೌಕರರನ್ನು ಖಾಯಂಗೊಳಿಸುವವರೆಗೆ ಮಧ್ಯಂತರ ಪರಿಹಾರವಾಗಿ ರೂ 900, 1200, 1500 ರ ಶ್ರೇಣಿಯಲ್ಲಿ ವೇತನ ನೀಡುವಲ್ಲಿ ಸರ್ಕಾರ ಅನುಸರಿಸುತ್ತಿರುವ ನಿರ್ಲಕ್ಷ ಧೋರಣೆಯನ್ನು ಟೀಕಿಸಿದರು.

ನೌಕರರ ಹೋರಾಟಕ್ಕೆ ಬೆಂಬಲವಾಗಿ ಅಂಗನವಾಡಿ ನೌಕರರ ಸಂಘದ ವಿ. ನಾಗಪ್ಪ ಮಾತನಾಡಿದರು. ಜಿಲ್ಲಾ ಪಂಚಾಯತ್ ನಿರ್ವಹಣಾಧಿಕಾರಿಗಳಿಗೆ ಎನ್. ಶಂಕರಪ್ಪ ನೌಕರರ ಬೇಡಿಕೆಗಳುಳ್ಳ ಮನವಿ ಸಲ್ಲಿಸಿದರು. ಮೆರವಣಿಗೆಯಲ್ಲಿ ಪಿ.ವಿ. ವಿಶ್ವನಾಥ ರೆಡ್ಡಿ ನೇತೃತ್ವವಹಿಸಿದ್ದರು.

ಅಗಸೂರ್‌ನಲ್ಲಿ ಡಿ.ವೈ.ಎಫ್.ಐ. ಉದ್ಘಾಟನೆ ಸಭೆ

ದೇಶದ ನಗರ ಮತ್ತು ಹಳ್ಳಿಗಳಲ್ಲಿರುವ ಎಲ್ಲಾ ಯುವಜನ ಸಮೂಹದ ಏಳಿಗೆಗಾಗಿ ಹಾಗೂ ಪ್ರಜಾಪ್ರಭುತ್ವ ಮತ್ತು ಪ್ರಗತಿ ಪರ ಸಾಮಾಜಿಕ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕಾಗಿ ಶಕ್ತಿಯುತವಾದ ಯುವಜನ ಚಳುವಳಿಯನ್ನು ಕಟ್ಟಲು ಸಂಘಟಿತರಾಗಬೇಕೆಂದು ಡಿ.ವೈ.ಎಫ್.ಐ. ರಾಜ್ಯ ಸಮಿತಿ ಅಧ್ಯಕ್ಷರಾದ ಶಾಂತಾರಾಮ ನಾಯಕ ಕರೆ ನೀಡಿದರು. ಅವರು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.) ಅಗಸೂರ್ ಘಟಕ ಉದ್ಘಾಟನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. 3-12-1998 ರಂದು ಘಟಕ ಉದ್ಘಾಟನೆಗೊಂಡಿತು.


ಸಭೆಯಲ್ಲಿ ಅತಿಥಿಗಳಾಗಿ ಭಾಗವಹಿಸಿದ ಜಿಲ್ಲಾ ಹಂಚು ಕಾರ್ಮಿಕರ ಸಂಘದ ಪ್ರದಾನ ಕಾರ್ಯದರ್ಶಿ ತಿಲಕ ಗೌಡ ಮಾತನಾಡುತ್ತಾ- ಯುವಜನರು ನಿರುದ್ಯೋಗ ಭ್ರಷ್ಟ ಕೋಮುವಾದಿ ಶಕ್ತಿಗಳ ವಿರುದ್ಧ ದೊಡ್ಡ ಚಳುವಳಿ ನಡೆಸಬೇಕಾಗಿದೆ ಎಂದರು. ತಾಲೂಕಾ ಪಂಚಾಯತ್ ಸದಸ್ಯರಾದ ರಾಮಚಂದ್ರ ನಾಯಕ್ ಮಾತನಾಡಿ ಸಾಮೂಹಿಕ ಸಮಸ್ಯೆಯಾದ ಸರಾಯಿ ವಿರುದ್ಧ ಅಗಸೂರ್ ಯುವಜನರು ಹೋರಾಟ ಮುಂದುವರೆಸಿಕೊಂಡು ಹೋಗಬೇಕಾಗಿದೆ ಎಂದರು. ಪತ್ರಕರ್ತ ಕೆ. ರಮೇಶ್ ಸಭೆಯಲ್ಲಿ ಮಾತನಾಡಿದರು ವೆಂಕಟೇಶ ನಾಯಕ ಸ್ವಾಗತಿಸಿ ವಂದಿಸಿದರು.

ನೂತನ ಸಮಿತಿ: ಅಧ್ಯಕ್ಷರಾಗಿ ಅನಂತ ಬಿ. ಗೌಡ ಉಪಾಧ್ಯಕ್ಷರಾಗಿ ಕೀರಾ ಎಮ್. ಗೌಡ, ವಿಠ್ಠಲ ಎಸ್. ಗೌಡ, ಕಾರ್ಯದರ್ಶಿಯಾಗಿ ಬೊಮ್ಮಯ್ಯ ಗೌಡ ಸಹ ಕಾರ್ಯದರ್ಶಿಗಳಾಗಿ ರಾದಾಕೃಷ್ಣ ಎಚ್. ನಾಯಕ, ಅಶೋಕ ಎನ್. ನಾಯ್ಕ ಖಜಾಂಚಿಯಾಗಿ ದಾಕು ರಾಮಗೌಡ, ಸದಸ್ಯಾರಾಗಿ 5 ಜನ ಆಯ್ಕೆಗೊಂಡರು.

ಹಿನ್ನೋಟ 1998

ಜಾಗತೀಕರಣಕ್ಕೆ ಸವಾಲು ಕಟ್ಟೊಡೆದ ವರ್ಷ

1998 ಇತ್ತೀಚಿನ ವರ್ಷಗಳಲ್ಲಿ ಹಲವು ರೀತಿಯಲ್ಲಿ ವಿಶಿಷ್ಟ ಚಾರಿತ್ರಿಕ ವರ್ಷವಾಗಿತ್ತು. ಇದು ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150ನೇ ವಾರ್ಷಿಕೋತ್ಸವದ ವರ್ಷವಾಗಿತ್ತು. 60 ರ ದಶಕದ ಕೆಲವು ಪ್ರಮುಖ ಘಟನೆಗಳನ್ನು ನೆನಪಿಸಿದ ವರ್ಷ. ಚೆಗೆವಾರರ ಅಮಾನುಷ ಕೊಲೆ, ಚಿಲಿಯಲ್ಲಿ ಜನತೆಯ ಸೋಶಲಿಸ್ಟ್ ಕನಸನ್ನು ಹೊಸಕಿ ಹಾಕಿದ ಜನರಲ್ ಪಿನೋಶೆಯ ಕ್ಷಿಪ್ರ ಕ್ರಾಂತಿ, ಪ್ಯಾರಿಸಿನ ವಿದ್ಯಾರ್ಥಿ-ಕಾರ್ಮಿಕ ದಂಗೆಯ ಕೆಂಪು ಮೇ, ಅಮೆರಿಕದ ಚಳುವಳಿಯ ನಾಯಕ ಮಾರ್ಟಿನ್ ಲೂಥರ್ ಕಿಂಗ್ ಕೊಲೆ - ಇವೆಲ್ಲದರ 30ನೇ ವಾರ್ಷಿಕ ಇತ್ಯಾದಿ. 1990 ರಲ್ಲಿ ಸೋವಿಯತ್ ಒಕ್ಕೂಟದ ವಿಘಟನೆ, ಪೂರ್ವಯುರೋಪಿನ ಸಮಾಜವಾದಿ ದೇಶಗಳ ಪತನದ ನಂತರ ಬೀಗುತ್ತಿದ್ದ ಸಾಮ್ರಾಜ್ಯಶಾಹಿ ಮೊದಲ ಬಾರಿ ಸಂಪೂರ್ಣ ನಡುಗಿದ ವರ್ಷ. ದಕ್ಷಿಣ ಪೂರ್ವ ಇಂಡೋನೇಶ್ಯಾದಿಂದ ಆರಂಭವಾಗಿ ಏಶ್ಯಾದ ದ.ಕೊರಿಯ, ರಶ್ಯಾ, ಬ್ರೆಜಿಲ್‌ಗಳಿಗೆ ಕಾಡ್ಗಿಚ್ಚಿನಂತೆ ಹರಡಿ 30 ರ ದಶಕದ ಬಂಡವಾಳಶಾಹಿಯ 'ಮಹಾನ್ ಕುಸಿತ'ದಂತ ತೀವ್ರವಾದ ಬಿಕ್ಕಟ್ಟು ತಲೆದೋರಿದ ವರ್ಷ. ಅದರ ವಿರುದ್ಧ ಕಾರ್ಮಿಕರ ಜಾಗತಿಕ ಪ್ರತಿರೋಧದ ಕಟ್ಟೊಡೆದ ವರ್ಷ. ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನೆಲ್ಲಾ ಬಲ, ಪ್ರಭಾವ ಉಪಯೋಗಿಸಿ ತಯಾರಿಸಿದ 'ಒಸ್ಲೋ ಶಾಂತಿ ಒಪ್ಪಂದ' 'ಪೀಸ್' 'ಪೀಸ್' ಆದ ವರ್ಷ. ಅಮೆರಿಕ ತನ್ನ ಸೊಕ್ಕನ್ನು ಪ್ರದರ್ಶಿಸಲು ಇರಾಕ್, ಸೂಡಾನ್‌ಗಳ ಮೇಲೆ ಬರ್ಬರ ಕ್ಷಿಪಣಿ ಧಾಳಿ ಕಂಡ ವರ್ಷ. ಕಮ್ಯುನಿಸ್ಟ್ ಚಳುವಳಿ ಪುನಃ ಜಾಗತಿಕವಾಗಿ ಐಕ್ಯ ಕಾರ್ಯಾಚರಣೆಗೆ ಗಂಭೀರವಾಗಿ ತೊಡಗಿದ ವರ್ಷ. ಮೆಕ್ಸಿಕೋದ ಚಿಯಾಪಾಸ್‌ನಲ್ಲಿ ಅಲ್ಲಿನ ಸೈನ್ಯದಿಂದ ನಡೆದ ಆದಿವಾಸಿಗಳ ನರಮೇಧದಿಂದ ಆರಂಭವಾದ ವರ್ಷ, ಇರಾಕ್‌ಮೇಲೆ ಬರ್ಬರ ದಾಳಿಯಿಂದ ಕೊನೆಗೊಂಡಿತು. ನಡುವೆ ಸುಹಾರ್ತೋ ಕುರ್ಚಿ ಕಳೆದುಕೊಂಡರೆ, ಪಿನೋಶೆ ಜೈಲಲ್ಲಿ ಕಂಬಿ ಎಣಿಸುತ್ತಿದ್ದಾನೆ. ಇಗೋ 1998 ರ ಪ್ರಮುಖ ಘಟನೆಗಳ ಹಿನ್ನೋಟ.



'ಹುಲಿ'ಗಳನ್ನು 'ಇಲಿ'ಗಳನ್ನಾಗಿ ಮಾಡಿದ
ಬಂಡವಾಳಶಾಹಿಯ ಮಹಾನ್ ಕುಸಿತ 'ಸುಹಾರ್ತೋ, ಚೆರ್ನೋಮಿರ್ಡಿನ್'ಗಳ ಪರದಾಟ

ಈವರೆಗೆ ಬಂಡವಾಳಶಾಹಿ ಕಂಡ ಅತ್ಯಂತ ತೀವ್ರ ಬಿಕ್ಕಟ್ಟು ಎಂದರೆ 30 ರ ದಶಕದ 'ಮಹಾನ್ ಕುಸಿತ'. ಈ ವರ್ಷ ಇಂಡೋನೇಶ್ಯಾದಿಂದ ಆರಂಭವಾಗಿ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನಲ್ಲಿ ಕೊನೆಗೊಂಡ ಬಿಕ್ಕಟ್ಟು ಅದಕ್ಕಿಂತಲೂ ತೀವ್ರವಾದದ್ದು. ವರ್ಷದ ಆರಂಭದಲ್ಲಿ ಇಂಡೋನೇಶ್ಯಾ ಆಗಲೇ ತೀವ್ರ ಬಿಕ್ಕಟ್ಟು ಎದುರಿಸುತ್ತಿದ್ದರೂ, ಇಷ್ಟೆಲ್ಲಾ ಅಲ್ಲೋಲ ಕಲ್ಲೋಲಕ್ಕೆ ಕಾರಣವಾಗಬಹುದು ಎಂಬ ಸುಳಿವೇ ಇರಲಿಲ್ಲ. ಐಎಂಎಫ್ ನಿರ್ದೇಶಿತ ಮತ್ತು ಸಾಮ್ರಾಜ್ಯಶಾಹಿ ಬಾಲಬಡುಕ ನೀತಿಗಳಿಂದ ಪಾಪರ್ ಆದ ಇಂಡೋನೇಶ್ಯಾಕ್ಕೆ ಐಎಂಎಫ್ ಸಾಲದಿಂದ ಸಮಸ್ಯೆ ಪರಿಹಾರ ಮಾಡಲು ಹೊರಟ ಅಧ್ಯಕ್ಷ ಸುಹಾರ್ತೋ ತನ್ನನ್ನು ಏಳನೇ ಬಾರಿ ಪುನರಾಯ್ಕೆಗೊಳಿಸಿಕೊಂಡಿದ್ದ. ಆದರೆ ಬಿಕ್ಕಟ್ಟು ಜನರನ್ನು ತಟ್ಟಲು ಆರಂಭವಾದಂತೆ ಆಹಾರ ದಂಗೆಗಳು ವ್ಯಾಪಕವಾಗಿ ನಡೆದವು. ನಿತ್ಯದ ಸುದ್ದಿಯಾಯ್ತು ಆಹಾರ ದಂಗೆಗಳು, ಅಂಗಡಿಗಳ ಲೂಟಿ. ವಿದ್ಯಾರ್ಥಿ ಚಳುವಳಿ ಆರಂಭಿಸಿ ಕೆಲವೇ ವಾರಗಳಲ್ಲಿ 32 ವರ್ಷ ಅಬೇಧ್ಯ ಎನ್ನಿಸಿದ್ದ ಅಧ್ಯಕ್ಷ ಸುಹಾರ್ತೋ ರಾಜೀನಾಮೆ ಕೊಡಬೇಕಾಯಿತು. ಆತನ ಬಂಟ ಹಬೀಬಿ ಅಧ್ಯಕ್ಷನಾದರೂ ಚಳುವಳಿ ನಿಂತಿಲ್ಲ. ಅಧ್ಯಕ್ಷ ಸುಹಾರ್ತೋ ಹಾಗೂ ಇಂಡೋನೇಶ್ಯಾದ ಆರ್ಥಿಕ ದುಸ್ಥಿತಿಗೆ ಕಾರಣರಾದ ಆತನ ಸಹಚರರನ್ನು ಬಂಧಿಸಿ - ವಿಚಾರಣೆ ಮಾಡಬೇಕು, ಸೈನ್ಯದ ವಿಶೇಷ ರಾಜಕೀಯ ಪಾತ್ರ ಬದಲಿಸಬೇಕು. ನಿಜವಾದ ಪ್ರಜಾಸತ್ತೆ ವ್ಯವಸ್ಥೆ ಸ್ಥಾಪಿಸಬೇಕು - ಎನ್ನುವ ಬಗ್ಗೆ ಚಳುವಳಿ ದಿನೇ ದಿನೇ ತೀವ್ರವಾಗುತ್ತಿದೆ. ಇಂಡೋನೇಶ್ಯಾದ ಸಮಗ್ರ ಆರ್ಥಿಕ - ರಾಜಕೀಯ ಬಿಕ್ಕಟ್ಟು ಬಂಡವಾಳಶಾಹಿಯ 'ಜಾಗತೀಕರಣ'ದ ಕನಸಿಗೆ ತೀವ್ರ ಸವಾಲಾಗಿದೆ. ದಕ್ಷಿಣಪೂರ್ವ ಏಶ್ಯಾದ ದೇಶಗಳಲ್ಲಿ ಹಬ್ಬುತ್ತಿರುವ ಬಿಕ್ಕಟ್ಟು ಈವರೆಗೆ ಮೂರು ಕೋಟಿಯಷ್ಟು ಜನರನ್ನು ಬೀದಿಗೆಸೆದಿದೆ. ಒಂದು ಲಕ್ಷ ಕೋಟಿಯಷ್ಟು ಜನರ ಕೊಳ್ಳುವ ಶಕ್ತಿಯನ್ನು ನಾಶ ಮಾಡಿದೆ. ಅದರ ಒಟ್ಟು ಉತ್ಪನ್ನ ದಕ್ಷಿಣ ಕೊರಿಯಾದ ಬಿಕ್ಕಟ್ಟು ವರ್ಷದ ಮೊದಲಲ್ಲೇ ಆರಂಭವಾದದ್ದು ಆಗಿನ ಆಳುವ ಪಕ್ಷದ ಅಭ್ಯರ್ಥಿ ಸೋತು, ಜನರ ಬೆಂಬಲ ಇರುವ ವಿರೋಧ ಪಕ್ಷದ ಅಭ್ಯರ್ಥಿ ಆಯ್ಕೆಯಾಗಿದ್ದು. ಆದರೆ ಆತನೂ ಗದ್ದುಗೆ ಏರಿದ ಮೇಲೆ ಬಣ್ಣ ಬದಲಾಯಿಸಿದ್ದಾನೆ. ದಕ್ಷಿಣ ಕೊರಿಯಾದ ಬಿಕ್ಕಟ್ಟಿಗೆ ಕಾರಣವಾದ ಚಬೋಲಾ ಎಂದು ಕರೆಯಲಾಗುವ ಐದು-ಆರು ದೈತ್ಯ ಕಂಪನಿಗಳನ್ನು ಶಿಕ್ಷಿಸಬೇಕೆಂದು ಚಳುವಳಿ ಆರಂಭವಾಗಿದೆ. ಬಿಕ್ಕಟ್ಟನ್ನು ಕಾರ್ಮಿಕರ ರಿಟ್ರೆಂಚ್‌ಮೆಂಟ್, ವೇತನ/ಸವಲತ್ತು ಕಡಿತಗಳಿಂದ ಪರಿಹರಿಸುವುದಕ್ಕೆ ತೀವ್ರ ವಿರೋಧವಿದೆ.

ದಕ್ಷಿಣ - ಪೂರ್ವ ಏಶ್ಯಾ, ದ.ಕೊರಿಯಾಗಳ ಬಿಕ್ಕಟ್ಟು ಜಪಾನ್‌ನ್ನೂ ಬಿಕ್ಕಟ್ಟಿಗೆ ಗುರಿ ಮಾಡಿದೆ. ರಶ್ಯ ಮತ್ತು ಮಾಜಿ ಸೋವಿಯತ್ ಗಣರಾಜ್ಯಗಳಲ್ಲೂ ತೀವ್ರ ಬಿಕ್ಕಟ್ಟು ತಲೆದೋರಿದೆ. ರಶ್ಯ ತನ್ನ ನಾಣ್ಯ ರೂಬಲ್‌ನ್ನು ಶೇಕಡ 30 ರಷ್ಟು ಅಪಮೌಲ್ಯಗೊಳಿಸಬೇಕಾಯಿತು. ಈ ಗಣರಾಜ್ಯಗಳಲ್ಲಿ ಹಣದುಬ್ಬರ ಅರ್ಥಹೀನ ಮಟ್ಟಗಳಿಗೆ ಏರಿದೆ. ಜಾರ್ಜಿಯಾ 7380 ಶೇಕಡಾ, ಅರ್ಮೇನಿಯ 5,273 ಶೇಕಡಾ - ಎಂದರೆ ಏನೂ ಅಂತ ಊಹಿಸುವುದು ಕಷ್ಟವಾಗುವಷ್ಟು ದುರ್ಭರವಾಗಿದೆ ಅಲ್ಲಿನ ಪರಿಸ್ಥಿತಿ. ಸ್ವಾಭಾವಿಕವಾಗಿಯೂ ಇದು ತೀವ್ರ ರಾಜಕೀಯ ಬಿಕ್ಕಟ್ಟುಗಳಿಗೆ ಎಡೆ ಮಾಡಿದೆ. ರಶ್ಯದ ಅಧ್ಯಕ್ಷ ಯಲ್ಸಿನ್ ತಮ್ಮ ಹಾಗೂ ತಮ್ಮ ಸರ್ಕಾರದ ಅಧಿಕಾರದ ಜೀವ ಉಳಿಸಲು ಇಡೀ ವರ್ಷ ಸೆಣಸುತ್ತಿದ್ದ ತಮ್ಮ ಆಸ್ಪತ್ರೆಗಳ ವಾಸಗಳ ಮಧ್ಯೆ ಆಫೀಸಿಗೆ ಬಂದಾಗ, ಮಂತ್ರಿಗಳನ್ನು ಅಧಿಕಾರಿಗಳನ್ನು ಬದಲಾಯಿಸಿ ತಮ್ಮ ಅಧಿಕಾರ ಇನ್ನೂ ಇದೆ ಎಂದು ತೋರಿಸಿಕೊಳ್ಳುತ್ತಿದ್ದರು. ವರ್ಷದಲ್ಲಿ ಎರಡು ಬಾರಿ ಪ್ರಧಾನಿ ಹಲವು ಬಾರಿ ಮಂತ್ರಿಗಳನ್ನು ಬದಲಾಯಿಸಿದರು. ಮೊದಲ ಬಾರಿ ಪ್ರಧಾನಿ ಬದಲಾಯಿಸಿದಾಗ ಪಾರ್ಲಿಮೆಂಟಿನ ಸಮ್ಮತಿಗೆ ಎದ್ದು ಬಿದ್ದು ಮಾಡಬೇಕಾಯ್ತು. ಕೆಲವೇ ತಿಂಗಳಲ್ಲಿ ಈ ಸರ್ಕಾರವನ್ನು ವಜಾ ಮಾಡಿ ಚೆರ್ನೋಮಿರ್ಡಿನ್‌ನ್ನು ಪುನಃ ತರಲು ಯತ್ನಿಸಿದರು. ಪಾರ್ಲಿಮೆಂಟು ಒಪ್ಪದೆ, ರಾಜಿ ಅಭ್ಯರ್ಥಿ ಪ್ರಿಮೊಕೊವ್‌ಗೆ ಒಪ್ಪಬೇಕಾಯಿತು.

ಬಂಡವಾಳಶಾಹಿಗೆ ದುಡಿಯುವ ಜನತೆಯ ಸವಾಲು

ಜಗತ್ತಿನಾದ್ಯಂತ ಅದರಲ್ಲೂ ಅಭಿವೃದ್ಧ ಬಂಡವಾಳಶಾಹಿ ದೇಶಗಳು 'ಜಾಗತೀಕರಣ'ದ ವಿರುದ್ಧ ಪ್ರತಿರೋಧ ಬಂಡವಾಳಶಾಹಿಯನ್ನು ನಡುಗಿಸಿದೆ. ಅಮೆರಿಕದಲ್ಲಿ ಕಾರ್ಮಿಕರು ಸಮರಶೀಲ ಹೋರಾಟಕ್ಕೆ ಇಳಿಯುತ್ತಿದ್ದಾರೆ. **ಜನರಲ್ ಮೋಟಾರನ್ನು** ಸ್ತಬ್ದಗೊಳಿಸಿದ ಮುಷ್ಕರ, ನ್ಯೂಯಾರ್ಕಿನ 24 ಸಾವಿರ **ಟ್ಯಾಕ್ಸಿ ಡ್ರೈವರ್‌ಗಳ** ಮುಷ್ಕರ, ಮುಂದುವರಿಯುತ್ತಿರುವ **ಡೆಟ್ರಾಯಿಟ್ ಪತ್ರಿಕೆಗಳ** ಕಾರ್ಮಿಕರ ಮುಷ್ಕರ ಅಮೆರಿಕದ ಚಿತ್ರವನ್ನೇ ಬದಲಾಯಿಸಿದೆ. ಯುರೋಪಿನಲ್ಲಿ ಆರು ದೇಶಗಳ ರೈಲು ಮುಷ್ಕರ, ದ.ಕೊರಿಯಾದ ಕಾರ್ಮಿಕರ ಮುಷ್ಕರ ತನ್ನನ್ನು ಹಿಡಿಯುವರು ಯಾರೂ ಇಲ್ಲ ಎಂಬ ಬಂಡವಾಳಶಾಹಿ ಸೊಕ್ಕಿಗೆ ಸವಾಲಾಗಿದೆ. ಫ್ರಾನ್ಸ್‌ನ ನಿರುದ್ಯೋಗಿಗಳ ಅಭೂತಪೂರ್ವ ಮುಷ್ಕರ, ಮೂರುಲಕ್ಷ ಫ್ರೆಂಚ್ ವಿದ್ಯಾರ್ಥಿಗಳ ಮುಷ್ಕರ, ಜರ್ಮನ್ ವಿದ್ಯಾರ್ಥಿಗಳ ಮುಷ್ಕರ ಈ ಸವಾಲಿನ ಭಾಗ.

ಇದು ರಾಜಕೀಯ ರಂಗದಲ್ಲೂ ಪ್ರತಿಬಿಂಬಿತವಾಗಲು ಆರಂಭವಾಗಿದೆ. ಜರ್ಮನ್ ಚುನಾವಣೆಗಳಲ್ಲಿ 16 ವರ್ಷಗಳಿಂದ ಆಳುತ್ತಿದ್ದ ಕೋಹ್ಲ್ ಹಾಗೂ ಆತನ ಕೂಟಕ್ಕೆ ಪರಾಜಯ, ಎಡ-ಮಧ್ಯಮಪಂಥೀಯ ರಂಗಕ್ಕೆ ಜಯ, ಯುರೋಪಿನಲ್ಲಿ ಈಗಾಗಲೇ ಆರಂಭವಾಗಿದ್ದ ರಾಜಕೀಯ ಬೆಳವಣಿಗೆಯನ್ನು ಭದ್ರಗೊಳಿಸಿದೆ. ಈಗ 17 ಯುರೋಪು ಕೂಟದ ದೇಶಗಳ ಕೇವಲ 2 ದೇಶಗಳಲ್ಲಿ ಬಲಪಂಥೀಯ ಸರ್ಕಾರಗಳಿವೆ. ಅಮೆರಿಕದ ಪಾರ್ಲಿಮೆಂಟ್‌ಗೆ ನಡೆದ ಚುನಾವಣೆಯಲ್ಲಿ ಕ್ಲಿಂಟನ್ ಲೈಂಗಿಕ ಹಗರಣವನ್ನು ಎಲ್ಲಾ ಪ್ರಜಾಸತ್ತಾತ್ಮಕ ನಿಯಮಗಳನ್ನು ಗಾಳಿಗೆ ತೂರಿ ಫ್ಯಾಸಿಸ್ಟ್-ತಂತ್ರಗಳನ್ನು ಬಳಸಿ ಪ್ರಯತ್ನಿಸಿದರೂ ರಿಪಬ್ಲಿಕನ್ ಪಕ್ಷಕ್ಕೆ ನಿರೀಕ್ಷಿತ ಗೆಲವು ಸಿಗಲಿಲ್ಲ. ಈ ರಿಪಬ್ಲಿಕನ್ ಪಕ್ಷದೊಳಗೆ ಫ್ಯಾಸಿಸ್ಟ್ ಗ್ಯಾಂಗ್‌ನ ನಾಯಕ ನ್ಯೂಟ್ ಗಿಂಗ್ರಿಚ್ ಅವಮಾನಿತನಾಗಿ ತನ್ನ ಸ್ಪೀಕರ್‌ಗಿರಿಗೆ ರಾಜೀನಾಮೆ ಕೊಡಬೇಕಾಯಿತು.

ಸಾಮ್ರಾಜ್ಯಶಾಹಿ ಸೊಕ್ಕಿನ ಪ್ರದರ್ಶನ ಇರಾಕ್, ಸೂಡಾನ್, ಅಫಘಾನಿಸ್ತಾನಗಳ ಮೇಲೆ ನಗ್ನ, ಬರ್ಬರ ಕ್ಷಿಪಣಿ ಧಾಳಿ

ಈ ವರ್ಷ ಅಮೆರಿಕದ ಸಾಮ್ರಾಜ್ಯಶಾಹಿ ಪರಾಕಾಷ್ಟೆ ತಲುಪಿತು. ಅದು ಈ ಎಲ್ಲಾ ಸಂದರ್ಭಗಳಲ್ಲಿ ಏಕಪಕ್ಷೀಯವಾಗಿ ವಿಶ್ವಸಂಸ್ಥೆಯ ಅನುಮತಿ ಕೇಳುವ ಗೋಜಿಗೂ ಹೋಗದೆ ದಾಳಿ ಮಾಡಿದ್ದು ಅದನ್ನು ಇಡೀ ಜಗತ್ತಿನಲ್ಲಿ ಒಂಟಿಯಾಗಿಸಿದೆ. ಅದರ ದಾಳಿಯ ಉದ್ದೇಶ ಈಡೇರಿಸಲು ಸಾಧ್ಯವಾದರೂ, ಮಾಜಿ ಯುಗೋಸ್ಲಾವಿಯಾದಲ್ಲಿ ಅದರ ಸತತ, ಮಧ್ಯಪ್ರವೇಶ, ಇರಾಕ್ ಮೇಲೆ ದಿಗ್ಬಂಧನದ ಮುಂದುವರಿಕೆ, ಯುರೋಪಿಗೆ ನಾಟೋದಲ್ಲಿ ಯಾವುದೇ ಸ್ವಾಯತ್ತತೆಗೆ ನಿರಾಕರಣೆ - ಇವೆಲ್ಲಾ ಅಮೆರಿಕನ್ ಸಾಮ್ರಾಜ್ಯಶಾಹಿ ಸೊಕ್ಕು ತಾರಕಕ್ಕೇರಿರುವುದನ್ನು ತೋರಿಸುತ್ತದೆ. ಭಾರತ ಪಾಕಿಸ್ತಾನಗಳ ಅಣ್ವಸ್ತ್ರ ಸ್ಫೋಟದ ಹಿನ್ನೆಲೆಯಲ್ಲಿ ಹೊರಿಸಿದ ದಿಗ್ಬಂಧನ, ಅಂತರ್ರಾಷ್ಟ್ರೀಯ ಕೋರ್ಟು ಸ್ಥಾಪನೆಯ ವಿಚಾರದಲ್ಲಿ ಅವರ ವಿರೋಧ, ಕ್ಯೂಬಾದ ವಿರುದ್ಧ ದಿಗ್ಬಂಧನ ಮುಂದುವರಿಕೆ, WTO ದಲ್ಲಿ ಅಮೆರಿಕನ್ ಏಜೆಂಟ್‌ನ ಹೇರಿಕೆ, MAI ನ್ನು ಜಗತ್ತಿನ ಮೇಲೆ ಹೇರುವ ಭರಾಟೆ - ಇವುಗಳೆಲ್ಲಾ ಅಮೆರಿಕನ್ ಸೊಕ್ಕಿನ ಪ್ರದರ್ಶನ.

ಸಾಮ್ರಾಜ್ಯಶಾಹಿ ಸೊಕ್ಕು, ಅವರ ವಿರುದ್ಧ ಸವಾಲಿನ ಬಗ್ಗೆ ತಿರಸ್ಕಾರ ಎಷ್ಟು ಹೆಚ್ಚಾಗಿದೆಯೆಂದರೆ ಅಮೆರಿಕ, ಯುರೋಪು, ಜಪಾನುಗಳು ತಮ್ಮ ನಡುವೆ ಘರ್ಷಣೆಗೆ ತೊಡಗುವ ಧೈರ್ಯ ತೋರಿಸಿವೆ. ಉಳಿದ ದೇಶಗಳ ಜಾಗತಿಕ ಏಜೆಂಟನ ಮೇಲೆ ಇಲ್ಲವೋ ಎಂಬಂತೆ.

ಜಾಗತಿಕ ಕಮ್ಯುನಿಸ್ಟ್ ಪುನರ್ಸಂಘಟನೆ

ಸಾಮ್ರಾಜ್ಯಶಾಹಿ ಈ ಜಾಗತಿಕ ಸವಾಲನ್ನು ಎದುರಿಸಲು ಕಮ್ಯುನಿಸ್ಟ್ ಪಕ್ಷಗಳು ಪುನರ್ಸಂಘಟನೆಯಾಗಿ ಸಜ್ಜಾಗುತ್ತಿವೆ. ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150ನೇ ವಾರ್ಷಿಕೋತ್ಸವದಲ್ಲಿ ಗ್ರೀಕ್, ಫ್ರೆಂಚ್, ಕ್ಯೂಬನ್ ಪಕ್ಷಗಳು ಕರೆದ ಸಭೆಯಲ್ಲಿ ದೊಡ್ಡ ಸಂಖ್ಯೆಯ ಪಕ್ಷಗಳು ಸೇರಿ ವಿಚಾರ ವಿನಿಮಯ, ಜಂಟಿ ಕಾರ್ಯಾಚರಣೆಗೆ ತೊಡಗಿದ್ದು ಈ ವರ್ಷದ ವಿಶೇಷ. MAI ಬಗ್ಗೆ 58 ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ಜಂಟಿ ಹೇಳಿಕೆ ಇದರಲ್ಲಿ ಒಂದು ಪ್ರಮುಖ ಮೈಲಿಗಲ್ಲು. ಮೂರು ದಶಕಗಳ ನಂತರ ಚೀನಿ ಹಾಗೂ ಜಪಾನೀ ಪಕ್ಷಗಳ ಸಂಬಂಧ ಸಾಮಾನ್ಯಗೊಳಿಸಿದ್ದೂ ಒಂದು ಪ್ರಮುಖ ಬೆಳವಣಿಗೆ. ಚೆಗೆವಾರಾ ಹುತಾತ್ಮನಾದ 30ನೇ ವಾರ್ಷಿಕದ ವ್ಯಾಪಕ ಆಚರಣೆಯ ಕಮ್ಯುನಿಸ್ಟ್ ಪುನರ್ಸಂಘಟನೆಗೆ ಕುಮ್ಮಕ್ಕು ಕೊಟ್ಟಿದೆ.

ಈ ವರ್ಷದ ಇತರ ಪ್ರಮುಖ ಘಟನೆಗಳೆಂದರೆ

- *ಉತ್ತರ ಐರ್ಲೆಂಡ್‌ನ ದಶಕಗಳ ಸಮಸ್ಯೆಗೆ ಪರಿಹಾರದತ್ತ ಹೆಜ್ಜೆ ಹಾಕಿದ ಶಾಂತಿ ಒಪ್ಪಂದ.*
- *ಚಿಲಿಯ ಮಾಜಿ ಸರ್ವಾಧಿಕಾರಿ ಪಿನೋಶೆಯ ಬ್ರಿಟನ್‌ನಲ್ಲಿ ಬಂಧನ - ಸ್ಪೇನ್‌ನಲ್ಲಿ ಅಲ್ಲಿನ ನಾಗರಿಕರ ಚಿತ್ರಹಿಂಸೆ, ಕೊಲೆಯ ಆಪಾದನೆ ಮೇಲೆ ಗಡಿಪಾರಿಗೆ ಆದೇಶ.*
- *ಮಧ್ಯ ಅಮೆರಿಕಾದಲ್ಲಿ ಭಾರಿ ಸಾವು ನೋವು, ಹಾನಿ ಉಂಟು ಮಾಡುವ 'ಎಲ್-ನಿನೋ' ಚಂಡಮಾರುತ.*
- *ಚೀನಾದಲ್ಲಿ ವ್ಯಾಪಕ ಹಾನಿ ಉಂಟು ಮಾಡಿದ ಭಾರೀ ನೆರೆ*
- *ದಕ್ಷಿಣ ಏಶ್ಯಾದ ಶಾಂತಿ ಕೆಡಿಸಿದ ಭಾರತ ಪಾಕಿಸ್ತಾನಗಳ ಅಣು ಸ್ಫೋಟ.*
- *ಅಫಘಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರ ಭದ್ರ.*
- *ಪಾಕಿಸ್ತಾನದಲ್ಲಿ 'ಇಸ್ಲಾಮಿಕ್ ಕಾನೂನು' ಮೂಲಕ ಸಂವಿಧಾನವನ್ನೇ ಅರ್ಥಹೀನ ಮಾಡಲು ನವಾಜ್ ಶರೀಫ್‌ರ ಕಳವಳಕಾರಿ ಕ್ರಮ.*
- *ಕಾಂಗೋದಲ್ಲಿ ಆಫ್ರಿಕಾದಲ್ಲಿ ಭಾರಿ ಯುದ್ಧಕ್ಕೆ ಎಡೆಕೊಡಬಹುದಾದ ಘರ್ಷಣೆಗಳು.*
- *ಕಂಬೋಡಿಯಾದಲ್ಲಿ ಹುನಸೆನರ ಪೀಪಲ್ಸ್ ಪಾರ್ಟಿಗೆ ಜಯ*
- *ಅಮೆರಿಕದ ದಿಗ್ಬಂಧನದ ಎದುರಲ್ಲಿ ಕ್ಯೂಬಾದ ಬೆಳವಣಿಗೆ ಹಾಗೂ ಚಾರಿತ್ರಿಕ ಪೋಪ್ ಭೇಟಿ.*
- *ನೇಪಾಳದಲ್ಲಿ ಕಮ್ಯುನಿಸ್ಟ್ ಚಳುವಳಿಯ ವಿಭಜನೆ ಹಾಗೂ ಎಡ ಮುನ್ನಡೆಗೆ ಏಟು.*
- *ಶ್ರೀಲಂಕಾದಲ್ಲಿ ಮುಗಿಯದ ಜನಾಂಗ ಕಲಹ - ಪ್ರಾದೇಶಿಕ ಚುನಾವಣೆ ರದ್ದು ಮಾಡಿ ತುರ್ತು ಪರಿಸ್ಥಿತಿ ಘೋಷಣೆ.*
- *ಕ್ಲಿಂಟನ್ನರ ಶತಪ್ರಯತ್ನ ಇದ್ದಾಗ್ಯೂ ಇಸ್ರೇಲ್‌ನಿಂದ 'ಪೀಸ್, ಪೀಸ್' ಆಗುತ್ತಿರುವ ಪ್ಯಾಲೆಸ್ಟೀನ್ 'ಪೀಸ್' ಒಪ್ಪಂದ.*
- *ಅಮೆರಿಕದ ರಾಜಕೀಯ ಅಲ್ಲೋಲ - ಕಲ್ಲೋಲ ಎರಡು ಕ್ಷಿಪಣಿ ದಾಳಿಗಳಿಗೆ ಕಾರಣವಾದವು. ಅಧ್ಯಕ್ಷ ಕ್ಲಿಂಟನ್ ಲೈಂಗಿಕ ಹಗರಣ.*
- *ಮುಂದಿನ ವರ್ಷ 'ಯುರೋ' ನಾಣ್ಯ ಜಾರಿಗೆ, ಯುರೋಪ್ ಒಕ್ಕೂಟ ಚೀನಾ -ಜಪಾನ್, ಚೀನಾ-ರಶ್ಯ ಶೃಂಗಸಭೆಗಳು*
- *ಎದ್ದು ಬರುತ್ತಿರುವ ಚೀನಾ-ರಶ್ಯಾ, ರಶ್ಯಾ - ಭಾರತ, ಭಾರತ-ಚೀನಾ ದೂರಗಾಮಿ ಸಂಬಂಧಗಳು.*

ಲೋಕಸಂಚಾರ



ಶರತ್ ಚಂದ್ರ

ಕ್ಯೂಬಾ ಪರಿಹಾರ ನಿಧಿಗೆ ಕಾಣಿಕೆ ನೀಡಿ: ಸುರ್ಜಿತ್ ಕರೆ

ಕ್ಯೂಬಾದ ವಿರುದ್ಧ ಹೇರಿರುವ ಅಮಾನವೀಯ ನಿರ್ಬಂಧಗಳು ಇನ್ನೂ ಮುಂದುವರಿಯುತ್ತಿವೆ. ಇದರಿಂದ ಕ್ಯೂಬಾದ ಜನಗಳ ಸಂಕಟಗಳೂ ಮುಂದುವರಿಯುತ್ತಿವೆ. ಎಲ್ಲಾ ಅಂತರ್ರಾಷ್ಟ್ರೀಯ ಕಾನೂನುಗಳನ್ನು, ನಿರ್ಬಂಧಗಳನ್ನು ತೆಗೆಯಬೇಕೆಂಬ ವಿಶ್ವಸಂಸ್ಥೆಯ ನಿರ್ಣಯಗಳನ್ನು ಉಲ್ಲಂಘಿಸಿ ಅಮೆರಿಕನ್ ಸಾಮ್ರಾಜ್ಯಶಾಹಿ ರಾಕ್ಷಸೀ ಆರ್ಥಿಕ ನಿರ್ಬಂಧಗಳನ್ನು ಮುಂದುವರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕ್ಯೂಬಾ ಜನತೆಗೆ 30 ಲಕ್ಷ ರೂ.ಗಳಷ್ಟು ಬೆಲೆ ಬಾಳುವ ಔಷಧಿಗಳನ್ನು ಕಳಿಸಲು ರಾಷ್ಟ್ರೀಯ ಕ್ಯೂಬಾ ಸೌಹಾರ್ದ ಸಮಿತಿ ನಿರ್ಧರಿಸಿದ್ದು ಇದಕ್ಕೆ ಉದಾರ ಕಾಣಿಕೆಗಳನ್ನು ನೀಡಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದ್ದಾರೆ.

ಸೋವಿಯತ್ ಒಕ್ಕೂಟದ ವಿಘಟನೆ ಹಾಗೂ ಯುರೋಪಿನಲ್ಲಿ ಸಮಾಜವಾದಕ್ಕಾದ ಸೋಲಿನ ನಂತರ ಹುಟ್ಟಿಕೊಂಡ ಸಮಸ್ಯೆಗಳನ್ನು ಮೀರಿನಿಲ್ಲಲು ಕ್ಯೂಬಾ ಪ್ರಯತ್ನಿಸುತ್ತಿದೆ. ಕ್ಯೂಬಾದ ವ್ಯಾಪಾರ ಮತ್ತು ಆರ್ಥಿಕ ಹಿಂದಿನ ಸೋವಿಯತ್ ಒಕ್ಕೂಟ ಮತ್ತ ಪೂರ್ವ ಯುರೋಪಿನ ಇತರ ಸಮಾಜವಾದಿ ದೇಶಗಳೊಡನೆ ಅದರ ಸಂಪರ್ಕಗಳನ್ನು ಅವಲಂಬಿಸಿತ್ತು.

ಈ ಹಿನ್ನೆಲೆಯಲ್ಲಿ ಭಾರತ ಮತ್ತು ವಿಶ್ವದ ಇತರ ಭಾಗಗಳಲ್ಲಿನ ಜನಗಳು ಕ್ಯೂಬಾದ ನೆರವಿಗೆ ಬಂದರು. ಕ್ಯೂಬಾದ ಹೋರಾಟನಿರತ ಜನಗಳೊಂದಿಗೆ ಸೌಹಾರ್ದದ ಸಂಕೇತವಾಗಿ ಭಾರತದ ಜನತೆ ರಾಷ್ಟ್ರೀಯ ಕ್ಯೂಬಾ ಸೌಹಾರ್ದ ಸಮಿತಿಯ ಆಶ್ರಯದಲ್ಲಿ ಒಂದು ಹಡಗಿನ ತುಂಬಾ ಆಹಾರ ಧಾನ್ಯಗಳು ಹಾಗೂ ಔಷಧಿಗಳನ್ನು ಕಳಿಸಿದರು. ನಂತರ ಸಾಬೂನು ಇತ್ಯಾದಿಗಳನ್ನು ಕಳಿಸಿದೆವು. ಕ್ಯೂಬಾದ ಜನತೆ ಇದನ್ನೆಲ್ಲಾ ಬಹಳಷ್ಟು ಗೌರವ, ಆದರಾಭಿಮಾನಗಳಿಂದ ಸ್ವೀಕರಿಸಿದರು. ಈ ಪ್ರಯತ್ನಗಳನ್ನು ಮುಂದುವರೆಸಿ ಸೌಹಾರ್ದ ಸಮಿತಿ 30 ಲಕ್ಷ ರೂ.ಗಳಷ್ಟು ಔಷಧಿಗಳನ್ನು ಕಳಿಸಲು ನಿರ್ಧರಿಸಿದೆ. ಪಕ್ಷದ ಎಲ್ಲಾ ಘಟಕಗಳು ಈ ದಿಕ್ಕಿನಲ್ಲಿ ಗರಿಷ್ಠ ಸಂಗ್ರಹ ಮಾಡಿ ಜನವರಿ 15, 1999 ರೊಳಗೆ ಸೌಹಾರ್ದ ಸಮಿತಿಗೆ ಕಳಿಸಬೇಕು ಎಂದು ಸುರ್ಜಿತ್ ಮನವಿ ಮಾಡಿದ್ದಾರೆ. ಹಣ ಸಂಗ್ರಹವನ್ನು ಈ ಕೆಳಗಿನ ವಿಳಾಸಕ್ಕೆ ಕಳಿಸಬೇಕೆಂದು ಕೇಳಲಾಗಿದೆ.

ಕ್ಯೂಬಾ ಸೌಹಾರ್ದ ನಿಧಿ
C/o ಸಿಪಿಐ(ಎಂ) ಕೇಂದ್ರ ಸಮಿತಿ ಕಛೇರಿ
ಎ.ಕೆ.ಗೋಪಾಲನ್ ಭವನ
27-ಬಿ, ಭಾಯಿ ವೀರ್ ಸಿಂಗ್ ಮಾರ್ಗ
ನವದಹಲಿ - 110 001


ನೊಬೆಲ್ ವಿಜೇತರಿಗೆ ಕಲ್ಕತ್ತೆಯಲ್ಲಿ ಭವ್ಯ ಸನ್ಮಾನ

ಡಿಸೆಂಬರ್ 27, 1998. ಕಲ್ಕತ್ತೆಯ ವಿಶಾಲ ನೇತಾಜಿ ಒಳಾಂಗಣ ಕ್ರೀಡಾಂಗಣ ತುಂಬಿ ತುಳುಕುತ್ತಿತ್ತು. ಸಮಾರಂಭ ಏನು? ಮನರಂಜನಾ ಕಾರ್ಯಕ್ರಮವಲ್ಲ, ಕ್ರೀಡಾ ಪ್ರದರ್ಶನವೂ ಅಲ್ಲ. ಕಲ್ಯಾಣ ಅರ್ಥ ಶಾಸ್ತ್ರದಲ್ಲಿ 1998 ರ ನೋಬೆಲ್ ಪ್ರಶಸ್ತಿ ಪಡೆದ ಪ್ರೊ. ಅಮರ್ತ್ಯಸೆನ್‌ರವರಿಗೆ ನಾಗರಿಕ ಸನ್ಮಾನದ ಸಮಾರಂಭವಾಗಿತ್ತದು. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ, ಕಲ್ಕತ್ತಾ ಮಹಾನಗರ ಪಾಲಿಕೆ ಹಾಗೂ ಹೌರಾ ಮಹಾನಗರ ಪಾಲಿಕೆ ಒಟ್ಟಾಗಿ ಪಶ್ಚಿಮ ಬಂಗಾಳದ ಜನತೆಯ ಪರವಾಗಿ ಈ ನೊಬೆಲ್ ವಿಜೇತನಿಗೆ ಸಲ್ಲಿಸಿದ ಮನಃಪೂರ್ವಕ ಅಭಿನಂದನೆ ಆದಾಗಿತ್ತು.



ಪ್ರೊ. ಸೆನ್‌ರ ಕೃತಿ, ಸಂಶೋಧನೆ ಹಾಗೂ ಅದರ ಸಾಮಾಜಿಕ ಆಯಾಮವನ್ನು ಶ್ಲಾಘಿಸಿದ ಮುಖ್ಯಮಂತ್ರಿ ಜ್ಯೋತಿಬಸುರವರು 'ನಾನೂ ನಿಜವಾದ ಪ್ರಜಾಪ್ರಭುತ್ವ ಬಯಸುತ್ತೇನೆ. ಆದರೆ ಅದೇ ವೇಳೆಗೆ ಜನಗಳ ಬಳಿ ಉತ್ಪಾದಕ ಆಸ್ತಿಗಳಿರುವಂತಹ ಸ್ಥಿತಿ ಏರ್ಪಡುವುದರ ಮೇಲೆ, ಜನಗಳ ಪ್ರಜ್ಞೆಯನ್ನು ಎತ್ತರಿಸುವ ಸರಿಯಾದ ರೀತಿಯ ಶಿಕ್ಷಣದ ಮೇಲೂ ಅಷ್ಟೆ ಒತ್ತು ನೀಡದಿದ್ದರೆ ಪ್ರಜಾಪ್ರಭುತ್ವವನ್ನು ತಪ್ಪಾಗಿ ಬಳಸಲೂ ಸಾಧ್ಯ" ಎಂದರು. ಇಲ್ಲಿಯೇ ಸೆನ್‌ರವರ ಸಾಮರ್ಥ್ಯ, ಶಿಕ್ಷಣದ ವಿಸ್ತರಣೆ ಹಾಗೂ ಸ್ವಾತಂತ್ರ್ಯದ ಕುರಿತ ಪರಿಕಲ್ಪನೆಗಳು ಮತ್ತು ಎಡರಂಗ ಸರ್ಕಾರದ ಭೂ ಸುಧಾರಣೆ, ಶಿಕ್ಷಣ ಹಾಗೂ ಸಾಮಾಜಿಕ ಜಾಗೃತಿಯ ಕಣ್ಣೋಟ ಪರಸ್ಪರ ಕೈಜೋಡಿಸುತ್ತವೆ ಎಂದರು ಜ್ಯೋತಿಬಸು.

ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನಸಾಮಾನ್ಯರ ಬಗ್ಗೆ ಪ್ರೊ. ಸೆನ್ ಆತಂಕಗಳ ಕುರಿತು ಮಾತನಾಡುತ್ತಾ ಜ್ಯೋತಿಬಸುರವರು ಬಂಗಾಳ ಈಗಾಗಲೇ ಸಾಮೂಹಿಕ ಸಾಕ್ಷರತೆ, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಮೂಲಭೂತ ಆರೋಗ್ಯ ಸೌಲಭ್ಯಗಳ ವಿಸ್ತರಣೆಗೆ ಒಂದು ಸಮಯಬದ್ಧ ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎಂದರು. ಭಾರತದಲ್ಲಿ ನಿಜವಾದ ಒಕ್ಕೂಟವಾದದ ಅಭಾವದಿಂದಾಗಿ ರಾಜ್ಯಗಳಿಗೆ ಸೀಮಿತ ಅಧಿಕಾರಗಳಷ್ಟೆ ಇವೆ. ಈ ಮಿತಿಯಲ್ಲೂ ಕಳೆದ 22 ವರ್ಷಗಳಲ್ಲಿ ಬಹುಪಾಲು ಜನ ಸಾಮಾನ್ಯರ ಹಿತಾಸಕ್ತಿ ಈಡೇರಿಸುವ ಒಂದು ಕನಿಷ್ಟ ಕಾರ್ಯಕ್ರಮವನ್ನು ಜಾರಿಗೆ ತರಲು ಪ್ರಯತ್ನ ನಡೆಸಿದ್ದೇವೆ ಎಂದರು ಜ್ಯೋತಿಬಸು ಸೆನ್‌ರವರ ಅಭಿಪ್ರಾಯ ಗಳು ಹಾಗೂ ಎಡರಂಗ ಸರಕಾರದ ಕಣ್ಣೋಟದ ನಡುವಿನ ಸಾಮ್ಯತೆಯನ್ನು ವಿವರಿಸುತ್ತಾ.



ಟೈಂಸ್ ಆಫ್ ಇಂಡಿಯಾದಲ್ಲಿ ಲಕ್ಷ್ಮಣ್ ವ್ಯಂಗ್ಯ

'ಪ್ರತೀಚಿ' ಟ್ರಸ್ಟ್

ನಾಗರಿಕ ಸನ್ಮಾನದ ಬಗ್ಗೆ ಹೃತ್ಪೂರ್ವಕ ಕೃತಜ್ಞತೆ ಅರ್ಪಿಸಿದ ಪ್ರೊ. ಅಮರ್ತ್ಯ ಸೆನ್ ತನಗೆ ದೊರೆತ ಪ್ರಶಸ್ತಿಯ ಹಣದಿಂದ ಶಿಕ್ಷಣ ಮತ್ತು ಆರೋಗ್ಯದ ಮೇಲೆ ಗಮನ ಕೇಂದ್ರೀಕರಿಸುವ ಒಂದು ದತ್ತಿಯನ್ನು ಸ್ಥಾಪಿಸುವುದಾಗಿ ಪ್ರಕಟಪಡಿಸಿದರು. ಹಲವು ವರ್ಷಗಳಿಂದತನ್ನ ಪ್ರಮುಖ ಆಸಕ್ತಿಯ ವಿಷಯಗಳಾದ ಇವೆರಡರ ಕುರಿತಾದ ಟ್ರಸ್ಟಿಗೆ ಪ್ರತೀಚಿ ಟ್ರಸ್ಟ್ ಎಂದು ಅವರು ಹೆಸರಿಟ್ಟಿದ್ದಾರೆ. ಶಾಂತಿ ನಿಕೇತನದಲ್ಲಿ ಅವರ ನಿವಾಸದ ಹೆಸರು ಇದು. ಆರಂಭದಲ್ಲಿ ಇದರ ಚಟುವಟಿಕೆಗಳು ಭಾರತ ಮತ್ತು ಬಾಂಗ್ಲಾದೇಶಕ್ಕೆ ಸೀಮಿತವಾಗಿರುತ್ತದೆ ಎಂದ ಪ್ರೊ.ಸೆನ್ "ಈ ಸಮಸ್ಯೆಯ ಅಗಾಧತೆಯನ್ನು ನೋಡಿದರೆ ಇಂತಹ ಒಂದು ಟ್ರಸ್ಟಿನಿಂದ ಬಹಳವೇನೂ ವ್ಯತ್ಯಾಸವಾಗಲಿಕ್ಕಿಲ್ಲ. ಆದರೆ ನನ್ನಿಂದ ಏನು ಸಾಧ್ಯವೋ ಅದನ್ನು ಮಾಡಲೇಬೇಕು" ಎಂದರು.

ಪ್ರೊ. ಅಮರ್ತ್ಯಸೆನ್‌ರನ್ನು ಅಭಿನಂದಿಸುತ್ತಾ ಮಾತಾಡಿದ ಪಶ್ಚಿಮ ಬಂಗಾಳದ ಹಣಕಾಸು ಮಂತ್ರಿ ಡಾ. ಅಸೀಮ್ ದಾಸಗುಪ್ತಾ ಕೂಡ ಸೆನ್‌ರವರ ಆಸಕ್ತಿಯ ವಿಷಯಗಳಾದ ಭೂಸುಧಾರಣೆ, ಪ್ರಾಥಮಿಕ ಶಿಕ್ಷಣ ಹಾಗೂ ಆರೋಗ್ಯದ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸುವ ಒಂದು ಸಂಶೋಧನಾ ಸಂಸ್ಥೆಯನ್ನು ಪಶ್ಚಿಮ ಬಂಗಾಳ ಸರಕಾರ ಸ್ಥಾಪಿಸುವುದಾಗಿ ಪ್ರಕಟಿಸಿದರು. ಅಲ್ಲದೆ 2002 ಇಸ್ವಿಯೊಳಗೆ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಒಂದು ಸಾರ್ವಜನಿಕ ಪ್ರತಿಜ್ಞೆಯನ್ನು ಎಡರಂಗ ಸರಕಾರದ ಪರವಾಗಿ ಅವರು ಪ್ರಕಟಿಸಿದರು. ಇದಕ್ಕೆ 1000 ಕೋಟಿ ರೂ.ಗಳು ಬೇಕಾಗುತ್ತವೆ ಎಂದರು ಅವರು. ಈ ಯೋಜನೆಯ ಇನ್ನೊಂದು ಉದ್ದೇಶ ಹಸುಗೂಸುಗಳ ಸಾವಿನ ದರವನ್ನು ಪಶ್ಚಿಮ ಬಂಗಾಳದಲ್ಲಿ ಒಂದು ಸಾವಿರಕ್ಕೆ 30ರ ಮಟ್ಟಕ್ಕಿಳಿಸುವುದು.

ಪ್ರೊ. ಸೆನ್‌ರವರ 30 ನಿಮಿಷಗಳ ಭಾಷಣವನ್ನು ಅಲ್ಲಿ ನೆರೆದಿದ್ದ 10 ಸಾವಿರ ಮಂದಿ ತದೇಕಚಿತ್ತದಿಂದ ಕೇಳಿದರು.

''ಕಲ್ಯಾಣ ಅರ್ಥಶಾಸ್ತ್ರ''ದಲ್ಲಿ ಸಾಮಾಜಿಕ ಆಯ್ಕೆ, ವಿತರಣೆ ಹಾಗೂ ಬಡತನ ಈ ಮೂರು ವಲಯಗಳಲ್ಲಿ ಮಾಡಿರುವ ಕೆಲಸಗಳಾಗಿ ಪ್ರೊ. ಸೆನ್‌ರವರಿಗೆ ನೊಬೆಲ್ ಪ್ರಶಸ್ತಿ ನೀಡುತ್ತಿರುವುದಾಗಿ ಪ್ರಶಸ್ತಿ ಪತ್ರದಲ್ಲಿ ಸ್ವೀಡಿಷ್ ಅಕಾಡೆಮಿ ಹೇಳಿತ್ತು. ಈ ಬಗ್ಗೆ ಮಾತನಾಡುತ್ತಾ ಪ್ರೊ. ಸೆನ್ "ಸಾಮೂಹಿಕ ಆಯ್ಕೆಯ ಸಿದ್ಧಾಂತ ಅಸಮಾನತೆ, ಬಡತನ ಮತ್ತು ಕಲ್ಯಾಣ ಅರ್ಥಶಾಸ್ತ್ರದ ನಡುವೆ ಕೊಂಡಿಯನ್ನು ಒದಗಿಸುತ್ತದೆ, ಇದು ನನ್ನ ಕೆಲಸದ ಪ್ರಮುಖ ಗೊಣಸು" ಎಂದರು. ತಮ್ಮ ಸಾಮಾಜಿಕ ಆಯ್ಕೆಯ ಸಿದ್ಧಾಂತದ ಬಗ್ಗೆ ಸರಳವಾಗಿ ವಿವರಿಸಿದ ಪ್ರೊ. ಸೆನ್ ಈ ಸಾಮಾಜಿಕ ಆಯ್ಕೆಯ ಸಿದ್ಧಾಂತಕ್ಕೆ ಹಲವಾರು ಅರ್ಥಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು ಹಾಗೂ ಗಣಿತಜ್ಞರು ಕೊಡುಗೆಗಳನ್ನು ನೀಡಿದ್ದಾರೆ. ನನ್ನನ್ನು ಇತ್ತೀಚೆಗೆ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಆದರೆ ಬೇರೆ ಎಲ್ಲದರಂತೆ ಇದೂ ಕೂಡಾ ಒಂದು ಜಂಟಿ ಸಾಧನೆ' ಎಂದರು ವಿಜ್ಞಾನಿಯ ನಮ್ರತೆಯಿಂದ.

ಪ್ರೊ. ಸೆನ್ ಸಾಂಸ್ಕೃತಿಕ ಪ್ರತ್ಯೇಕತೆಗೆ ತನ್ನ ವಿರೋಧವನ್ನು ಪುನರುಚ್ಚರಿಸುತ್ತಾ ಭಾರತೀಯ ಸಂಸ್ಕೃತಿ ಎಲ್ಲಾ ಸಂಸ್ಕೃತಿಗಳಿಂದಲೂ ವಿವಿಧ ಅಂಶಗಳನ್ನು ಸ್ವೀಕರಿಸುವ ಸಂಸ್ಕೃತಿ ಎಂದು ನೆನಪಿಸಿದರು. ಈ ಹಿನ್ನೆಲೆಯಲ್ಲಿ ಕಲ್ಕತ್ತೆಯ ಬೌದ್ಧಿಕತೆ, ಕಲಾತ್ಮಕತೆ ಹಾಗೂ ರಾಜಕೀಯ ಜೀವಂತಿಕೆಯನ್ನು ಶ್ಲಾಘಿಸಿದರು.

ಈ ಸಮಾರಂಭದ ವೇದಿಕೆಯಲ್ಲಿ ಪ್ರೊ. ಸೆನ್ ಜೊತೆಗೆ ಜ್ಯೋತಿ ಬಸು ಹಾಗೂ ಅಸೀಮ್ ದಾಸ್‌ಗುಪ್ತಾರಲ್ಲದೆ ಪಶ್ಚಿಮ ಬಂಗಾಳದ ರಾಜ್ಯಪಾಲ ಎ.ಆರ್.ಕಿದ್ವಾಯಿ, ಕಲ್ಕತ್ತದ ಮೇಯರ್ ಪ್ರಶಾಂತ ಚಟರ್ಜಿ, ಹೌರಾದ ಮೇಯರ್ ಸ್ವದೇಶ್ ಚಕ್ರವರ್ತಿ, ವಿಧಾನ ಸಭಾಧ್ಯಕ್ಷ ಹಾಶಿಂ ಅಬ್ದುಲ್ ಹಲೀಂ, ಗೃಹಮಂತ್ರಿ ಬುದ್ಧದೇಬ್ ಭಟ್ಟಾಚಾರ್ಯ ಹಾಗೂ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಮಾನಿಷ್ ಗುಪ್ತಾ ಇದ್ದರು.

ಈ ಭವ್ಯ ಸಮಾರಂಭದ ವೇಳೆಯಲ್ಲೇ ದೇಶದ ಇನ್ನೊಂದೆಡೆ ವಿ.ಹೆಚ್.ಪಿ.ಯ ಮುಖ್ಯಸ್ಥ ಅಶೋಕ್ ಸಿಂಘಾಲ್ ಪ್ರೊ. ಸೆನ್‌ರವರಿಗೆ ಪ್ರಶಸ್ತಿ ನೀಡಿದ್ದು ಕ್ರಿಶ್ಚಿಯನ್ ಪಿತೂರಿ ಎಂದು ಒದರಾಡಿದ್ದು, ಇದರಿಂದ ಮುಜುಗರಕ್ಕೊಳಪಟ್ಟ ಪ್ರಧಾನಿಗಳು ಪ್ರೊ.ಸೆನ್‌ರನ್ನು ತಾನೂ ಭೇಟಿ ಮಾಡಿ ಅವರ ಸಲಹೆ ಕೇಳುತ್ತೇನೆ ಎಂದಿರುವುದು ಕೂಡಾ ಈ 'ಪರಿವಾರ' ನಿಜವಾಗಿ ದೇಶದ ಬಡತನ, ಅನಕ್ಷರತೆ ಪ್ರಮುಖ ಕಾಳಜಿಯಾಗಿರದಿರುವ ಆಳುವ ವರ್ಗಗಳ ಹಿತಕಾಪಾಡಲ್ಲಿಕೆಂದೇ ಇರುವ 'ಸಂಘ ಪರಿವಾರ' ಎಂಬುದನ್ನು ಮತ್ತೊಮ್ಮೆ ಬಯಲು ಮಾಡಿದೆ.

'ವಂದೆ ಮಾತರಂ' ಹಾಡಿ ಎಂದರೆ ಹಾ.... ಹಾ... ಹಾ..... ಎನ್ನುವ ಬಿಜೆಪಿ ಮಂತ್ರಿಗಳು!

'ವಂದೇ ಮಾತರಂ' ಹಾಗೂ 'ಸರಸ್ವತಿ ವಂದನಾ' ದ ಬಗ್ಗೆ ಕೇಂದ್ರದ ಆಳುವ ಕೂಟದ ಮಂದಿಯ ಬೊಬ್ಬಾಟ ನಿಮಗೆ ತಿಳಿದೇ ಇದೆ. ಅವರ ಈ ಬೊಬ್ಬಾಟವನ್ನು ಒಪ್ಪದವರನ್ನೆಲ್ಲಾ ದೇಶದ್ರೋಹಿಗಳೆಂದು ಸಾರುವ ಈ ಮಂದಿಗೆ ಸ್ವತಃ ವಂದೇ ಮಾತರಂ' ನ ಇತಿಹಾಸವಂತೂ ದೂರ, ಆ ಗೀತೆಯೂ ಪೂರ್ಣವಾಗಿ ಗೊತ್ತಿಲ್ಲ ಎಂದರೆ ನೀವು ನಂಬುತ್ತೀರಾ? ಟೈಂಸ್ ಆಫ್ ಇಂಡಿಯಾ ದಲ್ಲಿ ಪ್ರಕಟವಾದ ಈ ಕೆಳಗಿನ ಸುದ್ದಿ ಓದಿ-

ಉತ್ತರ ಪ್ರದೇಶದ ಕಾರ್ಮಿಕ ಮಂತ್ರಿ ಪ್ರಭಾ ದ್ವಿವೇದಿಯವರು 'ವಂದೇ ಮಾತರಂ' ಹಾಡುವ ಪ್ರಯತ್ನ ಅಬ್ಬರದ ನಗುವಿನಲ್ಲಿ ಪರ್ಯಾವಸಾನವಾಯಿತು. "ನೀವು ನನ್ನ ಪರೀಕ್ಷೆ ತಗೊಳ್ಳುತ್ತಿರುವುದರಿಂದ ನಾನು ಮರೆಯುತ್ತಿದ್ದೇನೆ" ಎಂದು ಆಕೆ ಗಹಗಹಿಸಿ ನಕ್ಕರು.

ಈ ರಾಷ್ಟ್ರೀಯ ಗೀತೆಯನ್ನು ಹಾಡಿ ಎಂದಾಗ ಬಿಜೆಪಿಯ ಮುಖಂಡರಿಂದ ಬಂದ ಮಾತು- "ಇದು ನಮ್ಮ ದೇಶದ ಹೆಮ್ಮೆ", ಅದನ್ನು ಹಾಡಿ ಎಂದಾಗ ಕೆಲವರು ನಿರಾಕರಿಸಿ ನಗೆಯಲ್ಲಿ ಅದನ್ನು ತೇಲಿಸಿ ಬಿಟ್ಟರು. ಸಾಂಸ್ಥಿಕ ಹಣಕಾಸು ಮಂತ್ರಿ ರಾಧೇಶ್ಯಾಂ ಗುಪ್ತಾರಂತವರು "ನನಗೆ ಮೊದಲ ನಾಲ್ಕು ಸಾಲು ಮಾತ್ರ ಗೊತ್ತಿದೆ" ಎಂದು ಒಪ್ಪಿಕೊಂಡು ಅವಸರವಸರವಾಗಿ ಆ ಸಾಲುಗಳನ್ನು ಒಪ್ಪಿಸಿದರು.

ಮಾಧ್ಯಮ ವ್ಯವಹಾರಗಳ ಮಂತ್ರಿ ಅನುಪಮ್ ಅಲೋಕ್ ಎರಡು ಸಾಲುಗಳನ್ನು ಹೇಳಿ ಅಟ್ಟ ನೋಡುತ್ತಾ ಏನೋ ನೆನಪಿಸಿಕೊಂಡಂತೆ ಮಾಡಿದರು. ನಂತರ ಅಟ್ಟಹಾಸ ಗೈಯುತ್ತಾ 'ಸಿಗಿಸಿ ಹಾಕುತ್ತಿದ್ದೀರೇನು ಸ್ವಾಮಿ?' ಎಂದರು. "ನನಗೆ ಬರುತ್ತದೆ, ನನಗೆ ಬರುತ್ತದೆ' ಎನ್ನುತ್ತಾ ಮುಂದೆ ಹಾಡಲಿಲ್ಲ.

ಇನ್ನೊಬ್ಬ ಸಂಪುಟ ದರ್ಜೆಯ ಮಂತ್ರಿ ಜೈನಾರಾಯಣ್ ತಿವಾರಿ ಈ ಭೌತಿಕ ಜಗತ್ತಿನಲ್ಲಿ ಹೇಗೆ ನೈತಿಕ ಮೌಲ್ಯಗಳು ಹ್ರಾಸಗೊಳ್ಳುತ್ತಿವೆ ಎಂದು ಭಾಷಣ ಝಾಡಿಸಿದರು. ಸ್ವಾತಂತ್ರ್ಯ ಪೂರ್ವದ ಯುಗದ ನಮನ ಗೀತೆ ವಂದೆಮಾತರಂ ಮಾತ್ರವೇ ಈಗಿನ ತಲೆಮಾರಿನವರಲ್ಲಿ ರಾಷ್ಟ್ರೀಯ ಸಂಸ್ಕೃತಿಯ ಬಗ್ಗೆ ಜಾಗೃತಿ ಮೂಡಿಸಬಲ್ಲದು ಎಂದರು. ಆದರೆ ಹಾಡಿ ಎಂದಾಗ ಭಾಷಣ ನಿಲ್ಲಿಸಿ "ಮುಂದೆ ಭೇಟಿಯಾದಾಗ ನೋಡೋಣ" ಎಂದರು.

ಧರ್ಮ ಎಂದರೇನು ಗೊತ್ತಿಲ್ಲದವರು ತ್ರಿಶೂಲ ಹಿಡಿದು ಧರ್ಮದ ರಕ್ಷಣೆಯ ಹೆಸರಲ್ಲಿ ಅಮಾನವೀಯತೆಗಿಳಿಯುವಂತೆ ಹಾಡಿನ ಎರಡು ಸಾಲೂ ಗೊತ್ತಿಲ್ಲದವರು ಅದನ್ನು ಇನ್ನೊಬ್ಬರ ಮೇಲೆ ಹೇರಲು ಬಯಸುತ್ತಿದ್ದಾರೆ. ಹಾಗಿದ್ದರೆ ಅವರ ನಿಜ ಉದ್ದೇಶವೇನು? ಧರ್ಮವನ್ನು ಸಂಕುಚಿತ ರಾಜಕೀಯಕ್ಕೆ ಬಳಸಿದಂತೆ ಇದನ್ನೂ ಸಂಕುಚಿತ ರಾಜಕೀಯಕ್ಕೆ ಬಳಸುವುದು.

ಸಿಪಿಐ(ಎಂ) ಖಂಡನೆ

ಪುಟ 1 ರಿಂದ

ಗುಜರಾತಿನಲ್ಲಿ ಕ್ರಿಶ್ಚಿಯನ್ ಮಿಶನರಿ ಶಾಲೆಗಳು ಹಾಗೂ ಚರ್ಚುಗಳ ಮೇಲೆ ಮತ್ತೆ ಧಾಳಿಗಳು ನಡೆದಿರುವುದನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿದೆ. ಇದು ಅತ್ಯಂತ ಹೆಚ್ಚಾಗಿ ತಟ್ಟಿರುವುದು ದಕ್ಷಿಣ ಗುಜರಾತದ ಡಾಂಗ್ ಜಿಲ್ಲೆಯನ್ನು. ಸೂರತ್ ಕೂಡಾ ಇಂತಹ ಘಟನೆಗಳಿಂದ ತಲ್ಲಣಗೊಂಡಿದೆ.


ಕೇಂದ್ರ ಮಂತ್ರಿಗಳು ಏನೇ ಭರವಸೆ ನೀಡಿದರೂ ಇಂತಹ ಹಲ್ಲೆಗಳು ಮುಂದುವರೆಯುತ್ತಿವೆ. ಅಪರಾಧಿಗಳ ಮೇಲೆ ಕಡಿವಾಣ ಹಾಕಲು ಅಸಮರ್ಥವಾಗಿರುವ ರಾಜ್ಯ ಸರ್ಕಾರವೂ, ಕೇಂದ್ರ ಸರ್ಕಾರವೂ ಇಂತಹ ಧಾಳಿಗಳಿಗೆ ಪ್ರೋತ್ಸಾಹ ನೀಡುವುದರಲ್ಲಿ ಅಲ್ಲವಾದರೂ, ಅದಕ್ಕೆ ಅವಕಾಶ ಕೊಡುವಲ್ಲಿ ಶಾಮೀಲಾಗಿವೆಯೇ ಎಂಬ ಸಂದೇಹ ಮೂಡಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ವಿಹೆಚ್‌ಪಿಯ ಕರ್ಕಶ ಸಿಲುವು ಕಾವಿಪಡೆ ಅಲ್ಪಸಂಖ್ಯಾತರ ವಿರುದ್ಧ ಇನ್ನಷ್ಟು ಸಂಘಟಿತ ಹಾಗೂ ಪೂರ್ವಯೋಜಿತ ಹಿಂಸಾಚಾರಕ್ಕೆ ಸಿದ್ಧಗೊಳ್ಳುತ್ತಿರುವ ಸಂಕೇತ ನೀಡುತ್ತದೆ ಎಂದಿದೆ.

ಕಾನೂನಿನ ಶಾಸನವನ್ನು ಎತ್ತಿ ಹಿಡಿಯುವ ತನ್ನ ಜವಾಬ್ದಾರಿಯನ್ನು ಬಿಜೆಪಿ ನೇತೃತ್ವದ ಸರಕಾರ ಈಡೇರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗ್ರಹಪಡಿಸಿದೆ. ಈ ಹಿಂದಿನ ಸುತ್ತಿನ ಗಲಭೆಗಳ ನಂತರ ಗುಜರಾತಿನಲ್ಲಿ ಕಾನೂನು - ವ್ಯವಸ್ಥೆ ಸಮಸ್ಯೆಯಲ್ಲ ಎಂದ ಕೇಂದ್ರ ಗೃಹ ಮಂತ್ರಿಗಳು ಕ್ರಿಸ್‌ಮಸ್ ದಿನ ಕ್ರಿಶ್ಚಿಯನ್ನರ ಮೇಲೆ ನಡೆಸಿರುವ ಇಂತಹ ಹಿಂಸಾಚಾರವನ್ನು ಗಮನಕ್ಕೆ ತಗೊಳ್ಳಬೇಕು ಎಂದು ಅದು ಹೇಳಿದೆ.

ನಮ್ಮ ದೇಶದ ಜನತೆ ಆಧುನಿಕ ಭಾರತದ ಧರ್ಮನಿರಪೇಕ್ಷ ಪ್ರಜಾಪ್ರಭುತ್ವ ತತ್ವಗಳ ರಕ್ಷಣೆಗೆ ಒಟ್ಟಾಗಿ ಎದ್ದು ನಿಲ್ಲಬೇಕು, ಒಂದು ಅತ್ಯಂತ ಉನ್ಮಾದೀ, ಅಸಹಿಷ್ಣು ಹಿಂದೂ ಸಮಾಜ ಸ್ಥಾಪಿಸಲು ಕಟಿಬದ್ಧರಾದ ಕಾವಿ ಕೂಟದ ಕುಮ್ಮಕ್ಕುಗಳನ್ನು ತಿರಸ್ಕರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮನವಿ ಮಾಡಿದೆ.

(ಐಎನ್‌ಎನ್)

ಇ.ಎಂ.ಎಸ್. ಭವನ ನಿಧಿ



ಸಮಿರನ್ ಆಚಾರ್ಯ ಸಿಲ್‌ಚಾರ್, ಅಸ್ಸಾಂ	ರೂ. 250
ಸಿಪಿಐ(ಎಂ) ಮೈಸೂರು ಜಿಲ್ಲಾ ಸಮಿತಿ	20,500
ಜಿ.ವಿ.ಶ್ರೀರಾಮರೆಡ್ಡಿ,ಶಾಸಕರು	25,000
ರಂಗಪ್ಪ ದಾಸರ್, ಬಳ್ಳಾರಿ	1,000
ಸಿಪಿಐ(ಎಂ) ಬೆಳಗಾಂ ಪ್ರಾದೇಶಿಕ ಸಮಿತಿ	2,000
ಅಚ್ಯುತನ್(ಮೊದಲ ಕಂತು)	5,000
ಟಿ.ವಿ.ವಿ.ಮರಾರ್ (ಮೊದಲ ಕಂತು)	1,001
ಬಸವರಾಜ್ ಅಕ್ಕಿ(ಮೈಕೋ)	2,000
ಕೆ.ಎಲ್.ಸ್ಯಮನ್	1,000
ಎಂ.ಜ್ಯೋತಿ	1,000
ವಿಪಿನ್	1,001
ನೇಹಾ	1,001
ಮೀರಾ	2,001
ಮೈಕೋ ನೌಕರರು (ಮೊದಲ ಕಂತು)	5,000
ಸುಷ್ಮಾ	5,000
ರಾಮಕೃಷ್ಣ	500
ಎಂ.ಧರ್ಮಣ ಮೂಲ್ಯ	501
ಆರ.ಜಯಕುಮಾರ್	1000
ನಾರಾಯಣ್	2,500
ಬಿಹೆಚ್‌ಇಎಲ್ ನೌಕರರು (ಮೊದಲ ಕಂತು)	1000
ಎಂ.ಪಿ.ಕುಮಾರ್	1000
ಶಿಬಾ	1000
ಬಿ.ಎನ್.ಗೋಪಿನಾಥ್	100
ಲೀಲಾ ರಾಮಚಂದ್ರರಾವ್	50,000
ಉಷಾ ರಾವ್	5000
ಎಸ್.ಎಸ್.ಆರ್. ಸಂಗ್ರಹ	3,25,100
ಕೆ.ಎಲ್.ಭಟ್, ದಾವಣಗೆರೆ	2000
ಎ.ಎಸ್.ಮೂರ್ತಿ, ದಾವಣಗೆರೆ	1000
ನಾಗರಾಜರಾವ್, ದಾವಣಗೆರೆ	250

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಧನಸಂಗ್ರಹದ ಮೊತ್ತ ರೂ 337401/- ಅಲ್ಲಿ ಕೆಲವು ತಪ್ಪುಗಳಾಗಿದ್ದವು. ಕೆ.ಆರ್.ವೆಂಕಟೇಷ್ ಗೌಡರುರೂ. 5000- ಟಿ.ಎನ್.ಶಿವರೆಡ್ಡಿ ರೂ. 500/- ವಿಕ್ರಾಂತ್ ಟಯರ್ ನೌಕರರ ಸಂಘ 50000 ಎಂದಿರಬೇಕಿತ್ತು. ತುಷಾರ್ ಎಂಬ ಹೆಸರು ಉಷಾ ಎಂದು ಮುದ್ರಣಗೊಂಡಿದೆ.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ